ಡಾ|| ರಾಜ್‌ಕುಮಾರ್ ಅಕಾಡೆಮಿ
ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



ಜುಲೈ ೨ನೇ ವಾರ
06-07-2026 TO 11-07-2026

11ಕ್ಕೆ 'ಮಹೇಂದ್ರಗಿರಿ' ನೌಕಾಪಡೆಗೆ

ಮೊನಾಜೈಟ್ ನಿಕ್ಷೇಪ ಪತ್ತೆ

ಬ್ರಹ್ಮೋಸ್, ಅಸ್ತ್ರ ಕ್ಷಿಪಣಿ ಪೂರೈಕೆಗೆ ಒಪ್ಪಂದ

ನ್ಯೂಜಿಲೆಂಡ್‌ನಲ್ಲಿ ಮೋದಿ

ಜಿಡಿಪಿ ಅಂದಾಜು ತಗ್ಗಿಸಿದ ಎಡಿಬಿ

## ಮೊನಾಜೈಟ್ ನಿಕ್ಷೇಪ ಪತ್ತೆ

ಚಾಮರಾಜನಗರ: ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಮದಗನಹಳ್ಳಿ, ವಿಜಯಪುರ, ಭೂತನೂರು ಗ್ರಾಮಗಳಲ್ಲಿ ಅತಿ ವಿರಳ ಲೋಹವಾದ ಮೊನಾಜೈಟ್ ನಿಕ್ಷೇಪ ಪತ್ತೆಯಾಗಿದ್ದು, ಇದರಲ್ಲಿ ಥೋರಿಯಂ ಖನಿಜವೂ ಒಳಗೊಂಡಿದೆ ಎಂದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಜಿಲ್ಲೆಯ ಹಲವೆಡೆ ಖನಿಜಗಳ ನಿಕ್ಷೇಪಗಳು ಇರುವುದು ಭಾರತೀಯ ಭೂ ವೈಜ್ಞಾನಿಕ ಇಲಾಖೆ ಈಚೆಗೆ ನಡೆಸಿದ ವೈಮಾನಿಕ ಸಮೀಕ್ಷೆಯಲ್ಲಿ ದೃಢಪಟ್ಟಿದೆ.

## ಕಚ್ಚಾ ತೈಲ ಉತ್ಪಾದನೆ ಹೆಚ್ಚಳ

ಬರ್ಲಿನ್ (ಎಎಫ್‌ಪಿ): ಕಚ್ಚಾ ತೈಲ ಉತ್ಪಾದನೆಯನ್ನು ಹೆಚ್ಚು ಮಾಡಲು ಒಪೆಕ್ + ಸಂಘಟನೆಯ ಎಂಟು ದೇಶಗಳು ಭಾನುವಾರ ತೀರ್ಮಾನಿಸಿವೆ.

ಸೌದಿ ಅರೇಬಿಯಾ, ರಷ್ಯಾ, ಇರಾಕ್, ಕುವೈತ್, ಕಝಕಸ್ತಾನ್, ಅಲ್ಜೀರಿಯಾ ಮತ್ತು ಒಮಾನ್‌ನ ಸಚಿವರು ಭಾನುವಾರ ವರ್ಚುವಲ್ ವೇದಿಕೆಯ ಮೂಲಕ ಸಭೆ ನಡೆಸಿ, 'ಕಚ್ಚಾ ತೈಲ ಉತ್ಪಾದನೆಯನ್ನು ದಿನವೊಂದಕ್ಕೆ 1.88 ಲಕ್ಷ ಬ್ಯಾರಲ್‌ನಷ್ಟು ಹೆಚ್ಚಿಸಲು ತೀರ್ಮಾನಿಸಿದರು' ಎಂದು ಸಂಘಟನೆಯ ಹೇಳಿಕೆ ತಿಳಿಸಿದೆ.

ಈ ಹೆಚ್ಚಳವು ಆಗಸ್ಟ್‌ನಿಂದ ಜಾರಿಗೆ ಬರಲಿದೆ. ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರಕ್ಕೆ ಅಡ್ಡಿ ಉಂಟಾದ ನಂತರದಲ್ಲಿ ಕೊಲ್ಲಿ ರಾಷ್ಟ್ರಗಳು ತೈಲ ಉತ್ಪಾದನೆಯನ್ನು ಕಡಿಮೆ ಮಾಡಿದ್ದವು. 2026ರ ಮೊದಲ ತ್ರೈಮಾಸಿಕ ಹಾಗೂ ಮೇ ತಿಂಗಳ ನಡುವೆ ಸೌದಿ ಅರೇಬಿಯಾ, ಇರಾಕ್ ಮತ್ತು ಕುವೈತ್‌ನ ಒಟ್ಟು ಕಚ್ಚಾ ತೈಲ ಉತ್ಪಾದನೆಯು ನಿತ್ಯ 60 ಲಕ್ಷ ಬ್ಯಾರಲ್‌ನಷ್ಟು ಕಡಿಮೆ ಆಗಿದೆ.



## ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ₹2,000 ಕೋಟಿ ಎಡಿಬಿ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸಲು ಹಾಗೂ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳ (ಕೆಪಿಎಸ್) ಅಭಿವೃದ್ಧಿಗೆ ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ₹2,000 ಕೋಟಿ ಸಾಲಕ್ಕೆ ಅನುಮೋದನೆ ನೀಡಿದೆ.

ಈ ಯೋಜನೆಯಡಿ ರಾಜ್ಯದ 500 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ (ಕೆಪಿಎಸ್) ಆಧುನಿಕ ಸೌಕರ್ಯ, ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕಲೆ, ಗಣಿತ (ಸ್ಟೀಮ್) ಶಿಕ್ಷಣ, ಶಿಕ್ಷಕರ ತರಬೇತಿ ಸೇರಿದಂತೆ ವಿವಿಧ ಸೌಲಭ್ಯಗಳೊಂದಿಗೆ ಉನ್ನತೀಕರಿಸಲಾಗುತ್ತದೆ. ಉದ್ಯಮದ ಅಗತ್ಯಗಳಿಗೆ ಹೊಂದಿಕೊಳ್ಳುವ ಕೌಶಲ ಘಟಕಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಲಾಗುತ್ತಿದೆ. ಬಾಲಕಿಯರ ಸುರಕ್ಷತೆ, ಸಾಮಾಜಿಕ ಒಳಗೊಳ್ಳುವಿಕೆಯ ತತ್ವಗಳನ್ನು ಜೀವನ ಕೌಶಲ ಶಿಕ್ಷಣದೊಂದಿಗೆ ಸಂಯೋಜಿಸಲಾಗುತ್ತದೆ. ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣ ಮತ್ತು ಭವಿಷ್ಯದ ಉದ್ಯೋಗಗಳಿಗೆ ಸಜ್ಜುಗೊಳಿಸುವ ಗುರಿ ಹೊಂದಲಾಗಿದೆ.

'ಕರ್ನಾಟಕದ ಸಾರ್ವಜನಿಕ ಶಾಲಾ ವ್ಯವಸ್ಥೆಯನ್ನು ಬಲಪಡಿಸಿ, ಒಂದು ಕೋಟಿಗೂ ಹೆಚ್ಚು ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಹಾಗೂ ಶೈಕ್ಷಣಿಕ ಸಾಧನೆಯನ್ನು ಉತ್ತಮಗೊಳಿಸುವುದು ಯೋಜನೆಯ ಉದ್ದೇಶ. ವಿಶೇಷವಾಗಿ ಬಾಲಕಿಯರು ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನವಾಗಲಿದೆ' ಎಂದು ಭಾರತದ ಎಡಿಬಿ ನಿರ್ದೇಶಕಿ ಮಿಯೊ ಓಕಾ ಹೇಳಿದ್ದಾರೆ.

# ಲ್ಯಾಂಡ್ ಪೂಲಿಂಗ್ ಭೂಸ್ವಾಧೀನಕ್ಕೆ ಪರ್ಯಾಯವೇ?

ಬಿಡದಿ ಟೌನ್‌ಶಿಪ್‌ಗಾಗಿ 7,481 ಎಕರೆ ಭೂಸ್ವಾಧೀನ ಮಾಡಿಕೊಳ್ಳಲು ರಾಜ್ಯ ಸರ್ಕಾರವು ಮುಂದಾಗಿದೆ. ರೈತರು ಜಮೀನು ಬಿಟ್ಟುಕೊಡಲು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇದರ ನಡುವೆಯೇ ಭೂಮಿ ಒಟ್ಟುಗೂಡಿಸುವಿಕೆ (ಲ್ಯಾಂಡ್ ಪೂಲಿಂಗ್) ವಿಧಾನದ ಬಗ್ಗೆ ಚರ್ಚೆ ತೀವ್ರಗೊಂಡಿದೆ. ಹಳೆಯ ಪದ್ಧತಿಯಾದ ಭೂಸ್ವಾಧೀನಕ್ಕೆ ಪರ್ಯಾಯವಾಗಿ ಇತ್ತೀಚೆಗೆ ಲ್ಯಾಂಡ್ ಪೂಲಿಂಗ್ ವಿಧಾನವನ್ನು ಕೆಲವು ರಾಜ್ಯಗಳು ಅನುಸರಿಸುತ್ತಿವೆ. ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ರೈತರಿಗೆ ಪಾಲು ನೀಡುವುದು ಲ್ಯಾಂಡ್ ಪೂಲಿಂಗ್ ತತ್ವ. ಆದರೆ, ಈ ಪದ್ಧತಿಯೂ ಕೆಲವೆಡೆ ವಿಫಲಗೊಂಡಿದ್ದು, ಹಲವು ವಲಯಗಳಲ್ಲಿ ಈ ಬಗ್ಗೆ ಆಕ್ಷೇಪಗಳಿವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ ಬಿಡದಿ ಟೌನ್‌ಶಿಪ್ ನಿರ್ಮಿಸಲು ರಾಜ್ಯ ಸರ್ಕಾರವು ಯೋಜನೆ ರೂಪಿಸಿದ್ದು, ಮೊದಲ ಹಂತವಾಗಿ ಮೂರು ಗ್ರಾಮಗಳ 499 ಎಕರೆ ಭೂಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿದೆ. ಪ್ರತಿ ಎಕರೆಗೆ ಕನಿಷ್ಠ ₹2.07 ಕೋಟಿಯಿಂದ ₹2.55 ಕೋಟಿವರೆಗೆ ದರ ನಿಗದಿಪಡಿಸಲಾಗಿದೆ. ಇದು ಭೂಮಾಲೀಕರ ಸಹಭಾಗಿತ್ವದ ಯೋಜನೆಯೂ ಆಗಿರುವುದರಿಂದ ಪರಿಹಾರ ಧನದ ಬದಲು ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಪಾಲನ್ನು ಪಡೆಯಲೂ ಅವಕಾಶವಿದೆ. ಆದರೂ, ಅನೇಕ ರೈತರು ಜಮೀನು ಬಿಟ್ಟುಕೊಡುವುದಿಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಇದರಿಂದ ಭೂಸ್ವಾಧೀನವು ಕಗ್ಗಂಟಾಗಿ ಪರಿಣಮಿಸಿದೆ.

ನಗರಗಳು ಬೆಳೆಯುತ್ತಿವೆ; ಕೈಗಾರಿಕೆಗಳು, ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳು ಹೆಚ್ಚಾಗುತ್ತಿವೆ. ಅವುಗಳಿಗೆ ಅಗತ್ಯವಾದ ಭೂಮಿಯನ್ನು ಹೊಂದಿಸಲು ಸರ್ಕಾರಗಳು ನಾನಾ ರೀತಿಯ ಕಸರತ್ತು ಮಾಡುತ್ತಿವೆ. ಹಿಂದೆ ದೇಶದಲ್ಲಿ ಮತ್ತು ರಾಜ್ಯದಲ್ಲಿ ಅತ್ಯಲ್ಪ ಹಣವನ್ನು ಪರಿಹಾರವಾಗಿ ನೀಡಿ ರೈತರ ಜಮೀನನ್ನು ಸರ್ಕಾರಗಳು ವಶಪಡಿಸಿಕೊಳ್ಳುವ ಪದ್ಧತಿಯಿತ್ತು. ರೈತರ ಪಾಲಿಗೆ ಭೂಮಿಯೇ ಸರ್ವಸ್ವವಾದ್ದರಿಂದ, ದೇಶದಲ್ಲಿ ಸಣ್ಣ ಹಿಡುವಳಿದಾರರೇ ಹೆಚ್ಚಾಗಿರುವುದರಿಂದ ಇರುವ ಅಲ್ಪ ಭೂಮಿಯನ್ನೂ ಬಿಟ್ಟುಕೊಡಲು ರೈತರು ವಿರೋಧ ವ್ಯಕ್ತಪಡಿಸುವುದು ಸಹಜವೇ ಆಗಿದೆ.

**2013ರ ಕಾಯ್ದೆ:** ರೈತರ ವಿರೋಧ ಕಡಿಮೆ ಮಾಡಲು, ಅವರಿಗೆ ಆಗುತ್ತಿದ್ದ ಅನ್ಯಾಯ ಸರಿಪಡಿಸಲು ಕೇಂದ್ರ ಸರ್ಕಾರವು ಬ್ರಿಟಿಷ್ ಕಾಲದ ಕಾನೂನಿನ ಬದಲಿಗೆ ಹೊಸ ಕಾಯ್ದೆ ರೂಪಿಸಿತು; ಭೂಸ್ವಾಧೀನ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್ ವ್ಯವಸ್ಥೆ ಹಕ್ಕು ನಿರ್ಮಾಣ ಕಾಯ್ದೆ-2013 ರೂಪಿಸಿ, ಅದರ ಮಾನದಂಡಗಳ ಆಧಾರದಲ್ಲಿ ನಗದು ಪರಿಹಾರ ನೀಡಲು ಆರಂಭಿಸಿತು. ಈ ಕಾಯ್ದೆ ಜಾರಿಯ ನಂತರ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ವಿಳಂಬವಾಗುವುದು, ಕೋರ್ಟ್ ಪ್ರಕರಣಗಳು ಹೆಚ್ಚಾಗತೊಡಗಿದವು. ಯೋಜನೆಯ ಸಾಮಾಜಿಕ ಪರಿಣಾಮ ಅಧ್ಯಯನ ಮಾಡುವುದು (ಎಸ್‌ಐಎ) ಮತ್ತು ಭೂಸ್ವಾಧೀನಕ್ಕೆ ರೈತರ ಪೂರ್ವಾನುಮತಿ ಪಡೆಯುವುದು ಕಾಯ್ದೆಯ ಈ ಎರಡು ಅಂಶಗಳು ಸರ್ಕಾರಗಳಿಗೆ ತೊಡಕಾದವು.

ಕರ್ನಾಟಕದಲ್ಲಿ 2013ರ ಭೂಸ್ವಾಧೀನ ಕಾಯ್ದೆಗೆ ತಿದ್ದುಪಡಿ ತಂದು 'ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ಕಾಯ್ದೆ-2019' ರೂಪಿಸಲಾಗಿದೆ. ಅದರ ಅನ್ವಯ ಭೂಸ್ವಾಧೀನ ಪ್ರಕರಣಗಳಲ್ಲಿ ಸಾಮಾಜಿಕ ಪರಿಣಾಮದ ಅಧ್ಯಯನ ಮಾಡುವುದರಿಂದ (SIA) ವಿನಾಯಿತಿ ನೀಡಲಾಗುತ್ತಿದೆ. ಬದಲಿಗೆ, ಭೂಮಿ ಕಳೆದುಕೊಳ್ಳುವ ರೈತರಿಗೆ ನಿರ್ದಿಷ್ಟ ಮೊತ್ತದ ಇಡುಗಂಟು ನೀಡಲು ಅವಕಾಶ ಕಲ್ಪಿಸಲಾಗಿದೆ. ಉಳಿದಂತೆ ಅನೇಕ ರಾಜ್ಯಗಳಲ್ಲಿ 2013ರ ಕಾಯ್ದೆಯ ನಿಯಮಗಳನ್ನೇ ಅನುಸರಿಸಲಾಗುತ್ತಿದೆ. ಜತೆಗೆ, ಹಲವು ರಾಜ್ಯ ಸರ್ಕಾರಗಳು ರೈತರ ವಿರೋಧವನ್ನು ಕಡಿಮೆ ಮಾಡುವ ದೃಷ್ಟಿಯಿಂದ 'ಲ್ಯಾಂಡ್ ಪೂಲಿಂಗ್' ಮಾದರಿಯನ್ನು ಜಾರಿಗೆ ತಂದಿವೆ. 'ಲ್ಯಾಂಡ್ ಪೂಲಿಂಗ್' ರಾಜ್ಯ ಪಟ್ಟಿಯಲ್ಲಿ ಬರುತ್ತದೆ. ಹೀಗಾಗಿ ಹಲವು ರಾಜ್ಯಗಳು ತಮ್ಮದೇ ಆದ 'ಲ್ಯಾಂಡ್ ಪೂಲಿಂಗ್' ಕಾಯ್ದೆ-ನಿಯಮಗಳನ್ನು ರೂಪಿಸಿಕೊಂಡಿವೆ. ಅದರ ಅಡಿಯಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಿವೆ. ಆದರೆ, ಈ ಮಾದರಿಯು ಕೆಲವೆಡೆ ಯಶಸ್ಸು ಕಂಡಿದ್ದರೆ, ಕೆಲವೆಡೆ ವಿಫಲಗೊಂಡಿದೆ.




### ಏನಿದು 'ಲ್ಯಾಂಡ್ ಪೂಲಿಂಗ್'?

- ನಿರ್ದಿಷ್ಟ ಪ್ರದೇಶವನ್ನು ಅಭಿವೃದ್ಧಿಪಡಿಸುವುದರ ಭಾಗವಾಗಿ ಅಲ್ಲಿ ಸಾರ್ವಜನಿಕ ಮೂಲಸೌಕರ್ಯಗಳನ್ನು ಕಲ್ಪಿಸುವುದು ಮತ್ತು ಜನರಿಗೆ ವಿವಿಧ ಸವಲತ್ತುಗಳನ್ನು ಒದಗಿಸುವುದಕ್ಕಾಗಿ ಆ ಪ್ರದೇಶದಲ್ಲಿ ರೈತರ ಜಮೀನು ಪಡೆಯುವುದನ್ನು 'ಲ್ಯಾಂಡ್ ಪೂಲಿಂಗ್' ಎಂದು ಕರೆಯಲಾಗುತ್ತದೆ. ಇದು ಭೂಸ್ವಾಧೀನಕ್ಕಿಂತ ಸಂಪೂರ್ಣ ಭಿನ್ನ. ಇಲ್ಲಿ ಅಭಿವೃದ್ಧಿ ಯೋಜನೆಯಲ್ಲಿ ಜಮೀನುಗಳ ಮಾಲೀಕರೂ ಭಾಗಿಯಾಗುತ್ತಾರೆ
- ಯೋಜನೆಯನ್ನು ಕೈಗೆತ್ತಿಕೊಳ್ಳುವ ಅಭಿವೃದ್ಧಿ ಪ್ರಾಧಿಕಾರ ಅಥವಾ ಟೆಂಡರ್ ಪಡೆದ ಖಾಸಗಿ ರಿಯಲ್ ಎಸ್ಟೇಟ್ ಸಂಸ್ಥೆಗಳು ರಸ್ತೆ, ಚರಂಡಿ ವ್ಯವಸ್ಥೆ, ಉದ್ಯಾನಗಳು ಸೇರಿದಂತೆ ಇತರೆ ಸಾರ್ವಜನಿಕ ಸೌಲಭ್ಯಗಳನ್ನು ಕಲ್ಪಿಸುತ್ತವೆ
- ಪ್ರದೇಶ ಅಭಿವೃದ್ಧಿಯಾದ ನಂತರ, ಯೋಜನೆಗಾಗಿ ಜಮೀನುಗಳನ್ನು ನೀಡಿದ ಮಾಲೀಕರಿಗೆ ಅಭಿವೃದ್ಧಿಪಡಿಸಿದ ಜಮೀನು ಮತ್ತು ಎಲ್ಲ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಅವರಿಗೆ ಸಿಗುವ ಜಮೀನು, ಯೋಜನೆಗಾಗಿ ಕೊಟ್ಟ ಜಮೀನಿನಷ್ಟು ದೊಡ್ಡದಾಗಿರುವುದಿಲ್ಲ. ಆದರೆ, ಸಣ್ಣದಾಗಿದ್ದರೂ ಹೆಚ್ಚು ಮೌಲ್ಯವಿರುತ್ತದೆ ಮತ್ತು ಎಲ್ಲ ಸವಲತ್ತುಗಳಿಂದ ಕೂಡಿರುತ್ತದೆ

### ಸಮಸ್ಯೆಗಳು

'ಲ್ಯಾಂಡ್ ಪೂಲಿಂಗ್'ನಲ್ಲಿ ಸಮಸ್ಯೆಗಳು ಇರುವುದಿಲ್ಲ ಎಂದಲ್ಲ. ಮಾಲೀಕರ ಸಹಕಾರ, ಯೋಜನೆಗಳ ಪರಿಣಾಮಕಾರಿ ಅನುಷ್ಠಾನದಲ್ಲಿ ಇದರ ಯಶಸ್ಸು ಅಡಗಿದೆ.

- ಮಾಲೀಕರು ಭೂಮಿಯನ್ನು ನೀಡಲು ಹಿಂಜರಿದರೆ ಯೋಜನೆ ವಿಳಂಬವಾಗುತ್ತದೆ
- ಮಾಲೀಕರು ನೀಡಿದ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ಯೋಜನೆಯಂತೆ ನಡೆಯದಿದ್ದರೆ, ಮೂಲಸೌಕರ್ಯಗಳನ್ನು ಕಲ್ಪಿಸದಿದ್ದರೆ ಯೋಜನೆಯ ಉದ್ದೇಶ ವಿಫಲವಾಗುತ್ತದೆ
- ಕಾನೂನು ಮತ್ತು ಆಡಳಿತಾತ್ಮಕ ಪ್ರಕ್ರಿಯೆ ವಿಳಂಬವಾದರೆ ಯೋಜನೆ ಅನುಷ್ಠಾನ ನಿಧಾನವಾಗುತ್ತದೆ
- ಮಾಲೀಕರು ಜಮೀನು ಕೊಟ್ಟ ಬಳಿಕ ಅಭಿವೃದ್ಧಿ ಹೊಂದಿದ ಭೂಮಿ ಅಥವಾ ಆರ್ಥಿಕ ಲಾಭ ಪಡೆಯಲು ಸ್ವಲ್ಪ ಸಮಯ ಕಾಯಬೇಕಾಗುತ್ತದೆ
- ಹಲವು ಕಾರಣಗಳಿಂದ ಯೋಜನೆಗಳು ನನೆಗುದಿಗೆ ಬೀಳುವ ಅಪಾಯ

**ಆಂಧ್ರ ಪ್ರದೇಶದ ಪ್ರಯೋಗ:** ಲ್ಯಾಂಡ್ ಪೂಲಿಂಗ್‌ಗೆ ಪ್ರಸ್ತುತ ದೇಶದಲ್ಲಿಯೇ ದೊಡ್ಡ ಉದಾಹರಣೆ ಎಂದರೆ, ಅದು ಆಂಧ್ರಪ್ರದೇಶದ ರಾಜಧಾನಿ ಅಮರಾವತಿಯದ್ದು. ರಾಜ್ಯ ವಿಭಜನೆಯ ನಂತರ ಹೈದರಾಬಾದ್ ತೆಲಂಗಾಣದ ಪಾಲಾಗಿದ್ದರಿಂದ ಪ್ರತ್ಯೇಕ ರಾಜಧಾನಿ ರೂಪಿಸಿಕೊಳ್ಳುವ ಸವಾಲು ಆಂಧ್ರ ಪ್ರದೇಶಕ್ಕೆ ಎದುರಾಯಿತು. ಅದಕ್ಕಾಗಿ ವಿಜಯವಾಡ ಮತ್ತು ಗುಂಟೂರು ನಗರಗಳ ಮಧ್ಯೆ ಅಮರಾವತಿ ಹೆಸರಿನ ರಾಜಧಾನಿ ನಿರ್ಮಿಸಲು ಸುಮಾರು 30 ಸಾವಿರ ರೈತರಿಗೆ ಸೇರಿದ 34 ಸಾವಿರ ಎಕರೆ ಭೂಮಿಯನ್ನು 'ಲ್ಯಾಂಡ್ ಪೂಲಿಂಗ್' ಮಾದರಿಯಲ್ಲಿ ವಶಪಡಿಸಿಕೊಳ್ಳಲು ಆಂಧ್ರ ಪ್ರದೇಶ ಸರ್ಕಾರ 2015ರಲ್ಲಿ ಯೋಜನೆ ರೂಪಿಸಿತು. ಸರ್ಕಾರಗಳು ಬದಲಾವಣೆಯಾದ್ದರಿಂದ ತಡವಾಗಿದ್ದ ಈ ಯೋಜನೆ, ಚಂದ್ರಬಾಬು ನಾಯ್ಡು ಅವರೇ ಮುಖ್ಯಮಂತ್ರಿಯಾದ ನಂತರ ಈಗ ವೇಗ ಪಡೆದುಕೊಂಡಿದೆ. ರೈತರಿಗೆ ಶೇ 25-ಶೇ 30ರಷ್ಟು ಅಭಿವೃದ್ಧಿಪಡಿಸಿದ ಭೂಮಿ (ನಿವೇಶನ ಇತ್ಯಾದಿ) ನೀಡಲಾಗುತ್ತಿದೆ. ಯೋಜನಾ ವ್ಯಾಪ್ತಿಯ 29 ಗ್ರಾಮಗಳ ಪೈಕಿ 22 ಗ್ರಾಮಗಳ ರೈತರಿಗೆ ಅಭಿವೃದ್ಧಿಪಡಿಸಿದ ಭೂಮಿಯನ್ನು ಈಗಾಗಲೇ ನೀಡಲಾಗಿದೆ.

ಆದರೆ, ಆಂಧ್ರಪ್ರದೇಶದಲ್ಲಿ 'ಲ್ಯಾಂಡ್ ಪೂಲಿಂಗ್'ನ ಯಶಸ್ಸಿಗೆ ಇತರೆ ಹಲವು ಕಾರಣಗಳೂ ಇವೆ ಎನ್ನುವುದು ಕೆಲವರ ವಾದ. ಯೋಜನಾ ಪ್ರದೇಶದಲ್ಲಿ ಹೆಚ್ಚು ಭೂಮಾಲೀಕರು ಕಮ್ಮ ಜಾತಿಗೆ ಸೇರಿದ್ದು, ಚಂದ್ರಬಾಬು ನಾಯ್ಡು ಕೂಡ ಅದೇ ಜಾತಿಗೆ ಸೇರಿರುವುದು ಒಂದು ಕಾರಣ ಎಂದು ಅಮರಾವತಿಯ ಭೂಸ್ವಾಧೀನದ ಬಗ್ಗೆ ಅಧ್ಯಯನ ನಡೆಸಿರುವ ಕರೋಲ್ ಉಪಾಧ್ಯ ಅವರ ಅನಿಸಿಕೆ. ಅಮರಾವತಿಯಲ್ಲಿ 'ಲ್ಯಾಂಡ್ ಪೂಲಿಂಗ್' ಒಂದು ವಿಫಲ ಯೋಜನೆಯಾಗಿದ್ದು, ಭಾರತದಲ್ಲಿ ಇದನ್ನು ಯಾರೂ ಅನುಸರಿಸಬಾರದು ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

**ವಿಫಲ ಪಿಆರ್‌ಆರ್:** ಕೇಂದ್ರದ ಭೂಸ್ವಾಧೀನ ಕಾಯ್ದೆ (2013) ಅನುಸಾರ ರೈತರಿಗೆ ಪರಿಹಾರ ನೀಡಲು ಸರ್ಕಾರಗಳು ದೊಡ್ಡ ಮೊತ್ತವನ್ನು ವ್ಯಯಿಸಬೇಕಾಗುತ್ತದೆ. ಆದರೆ, 'ಲ್ಯಾಂಡ್ ಪೂಲಿಂಗ್'ನಿಂದ ಸರ್ಕಾರಕ್ಕೆ ಆ ಹೊರೆ ತಪ್ಪುತ್ತದೆ. ಜತೆಗೆ, ನ್ಯಾಯಾಲಯದಲ್ಲಿ ಪ್ರಕರಣ ಎದುರಿಸುವ, ಯೋಜನೆ ಸ್ಥಗಿತಗೊಳಿಸುವ ಅಗತ್ಯ ಬರುವುದಿಲ್ಲ ಎನ್ನುವುದು ಕೆಲವರ ವಾದ. ಅದಕ್ಕೆ ಅವರು ಬೆಂಗಳೂರಿನ ಪೆರಿಫೆರಲ್ ರಿಂಗ್ ರಸ್ತೆ (ಪಿಆರ್‌ಆರ್) ಯೋಜನೆಯನ್ನು ಉದಾಹರಿಸುತ್ತಾರೆ. ಈ ಯೋಜನೆಗಾಗಿ 74 ಹಳ್ಳಿಗಳಲ್ಲಿ ಭೂಮಿ ವಶಪಡಿಸಿಕೊಳ್ಳಲು 2005ರಲ್ಲೇ ಅಧಿಸೂಚನೆ ಹೊರಡಿಸಲಾಯಿತು. ಆದರೆ, ರೈತರ ಪ್ರತಿಭಟನೆ ಮತ್ತು ನ್ಯಾಯಾಲಯದ ಪ್ರಕರಣಗಳಿಂದ ಈ ಯೋಜನೆ ಎರಡು ದಶಕಗಳಾದರೂ ಕಾರ್ಯಗತವಾಗಿಲ್ಲ. ಈ ಅವಧಿಯಲ್ಲಿ ರಾಜ್ಯ ಸರ್ಕಾರಗಳಿಗೆ ರೈತರಿಗೆ ಪರಿಹಾರ ನೀಡಲೂ ಆಗಲಿಲ್ಲ, ಭೂಮಿ ವಶಪಡಿಸಿಕೊಳ್ಳಲು ಆಗಲಿಲ್ಲ. ₹27 ಸಾವಿರ ಕೋಟಿ ವೆಚ್ಚದ ಈ ಯೋಜನೆಗೆ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ಎಂದು ಮರುನಾಮಕರಣ ಮಾಡಲಾಗಿದ್ದು, ಮರುಚಾಲನೆಗೆ ಸರ್ಕಾರ ಮುಂದಾಗಿದೆ.

ಇಂಥ ಪ್ರಕರಣಗಳಿಂದ ಪಾಠ ಕಲಿತಂತಿರುವ ಹಲವು ರಾಜ್ಯಗಳು 'ಲ್ಯಾಂಡ್ ಪೂಲಿಂಗ್'ಗೆ ಮುಂದಾಗಿವೆ. ರಾಜಸ್ಥಾನದಲ್ಲಿ ಜೈಪುರ ಅಭಿವೃದ್ಧಿ ಪ್ರಾಧಿಕಾರವು ಈ ಮಾದರಿಯಲ್ಲಿ ರಾಜ್ಯದ ಮೊದಲ ಯೋಜನೆಯನ್ನು ಜಾರಿ ಮಾಡುತ್ತಿದೆ. ರಾಜಸ್ಥಾನ 'ಲ್ಯಾಂಡ್ ಪೂಲಿಂಗ್' ಕಾಯ್ದೆ-2016ರ ಪ್ರಕಾರ 163 ಹೆಕ್ಟೇರ್‌ಗಳಲ್ಲಿ ರಸ್ತೆ ಕಾಮಗಾರಿ ಆರಂಭಿಸಿದ್ದು, ಅದಕ್ಕಾಗಿ ಜಮೀನು ಬಿಟ್ಟುಕೊಡುವ ರೈತರಿಗೆ ಅಭಿವೃದ್ಧಿಪಡಿಸಿದ ಭೂಮಿಯಲ್ಲಿ ಪಾಲು ನೀಡಲು ಸಮ್ಮತಿಸಿದೆ.





ಆಂಧ್ರ ಪ್ರದೇಶದ ರಾಜಧಾನಿ ಅಮರಾವತಿಯ ಒಂದು ನೋಟ

ಯೋಜನೆಗಳನ್ನು ಬೇಡ ಎನ್ನಲಾಗುವುದಿಲ್ಲ. ಹಾಗೆಂದು ರೈತರ ಜಮೀನನ್ನು ಕಿತ್ತುಕೊಳ್ಳುವುದೂ ಸಾಧುವಲ್ಲ. ಕರ್ನಾಟಕದಲ್ಲಿ ಸೂಕ್ತ ಭೂಸ್ವಾಧೀನ ಕಾಯ್ದೆ ರೂಪಿಸಬೇಕು; ಕೃಷಿ ಮತ್ತು ಕೈಗಾರಿಕೆ ಸಮಾನಾಂತರವಾಗಿ ಬೆಳೆಯುವಂತಿದ್ದು, ಆಹಾರ ಭದ್ರತೆಗೆ ಧಕ್ಕೆ ತರಬಾರದು; ಭೂಮಿ ಕಳೆದುಕೊಂಡವರ ಬದುಕು ನರಕವಾಗಬಾರದು ಎಂದರೆ ಕೃಷಿ, ಕೈಗಾರಿಕೆ ಹಾಗೂ ಭೂಸ್ವಾಧೀನ ನೀತಿಗಳನ್ನು ಒಂದಕ್ಕೊಂದು ಪೂರಕವಾಗಿ ರೂಪಿಸಬೇಕು ಎನ್ನುವುದು ರೈತ ಮುಖಂಡರ ಒತ್ತಾಯ.

### ಸರ್ಕಾರಕ್ಕೆ ಏನು ಲಾಭ?

- ಭೂಸ್ವಾಧೀನಕ್ಕೆ ಮಾಡುವ ವೆಚ್ಚಕ್ಕೆ ಹೋಲಿಸಿದರೆ ಲ್ಯಾಂಡ್ ಪೂಲಿಂಗ್‌ನಲ್ಲಿ ಹೆಚ್ಚು ಖರ್ಚು ಮಾಡುವುದು ಬೇಕಾಗಿಲ್ಲ
- ನಗರದ ಅಭಿವೃದ್ಧಿಯಲ್ಲಿ ಜಮೀನುಗಳ ಮಾಲೀಕರೂ ಭಾಗೀದಾರರಾಗುತ್ತಾರೆ
- ಭೂಮಾಲೀಕರೇ ಸ್ವಯಂಪ್ರೇರಣೆಯಿಂದ ಜಾಗವನ್ನು ಬಿಟ್ಟುಕೊಡುವುದರಿಂದ ಕಾನೂನು ಸಂಘರ್ಷಗಳು ಕಡಿಮೆ
- ಅಭಿವೃದ್ಧಿ ಯೋಜನೆಗಳು ವೇಗವಾಗಿ ಪೂರ್ಣಗೊಳ್ಳುತ್ತವೆ

### ರೈತರಿಗೆ ಉಪಯೋಗ ಏನು?

- ಉತ್ತಮ ಮೂಲಸೌಕರ್ಯ, ಸರ್ಕಾರಿ ಸವಲತ್ತುಗಳು ಸಿಗುತ್ತವೆ
- ದೀರ್ಘಾವಧಿಯ ಸಂಪತ್ತು ಸೃಷ್ಟಿ
- ಅಭಿವೃದ್ಧಿ ಯೋಜನೆಗಳಿಂದ ಕುಟುಂಬಗಳು ಸ್ಥಳಾಂತರಗೊಳ್ಳುವುದು ತಪ್ಪುತ್ತದೆ

**ಆಧಾರ:** ಬಿಬಿಎಂಪಿ ಪುನರ್‌ರಚನೆ, ಭೂಸ್ವಾಧೀನಕ್ಕೆ ಸಂಬಂಧಿಸಿದ ತಜ್ಞರ ಸಮಿತಿಯ ವರದಿ, ಕರೋಲ್ ಉಪಾಧ್ಯ ಅವರ 'ದ ರೈಸ್ ಆ್ಯಂಡ್ ಫಾಲ್ ಆಫ್ ಅಮರಾವತಿ', ಮಾಧ್ಯಮ ವರದಿಗಳು

**ಪೂರಕ ಮಾಹಿತಿ:** ಎಸ್‌ಎಸ್‌ಬಿ ಸುಧೀರ್

# ಸಾಲ ನೀಡಿಕೆ ಜಾಸ್ತಿ, ಠೇವಣಿ ಕಡಿಮೆ

## ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಹಣಕಾಸಿನ ಸ್ಥಿತಿ ಕುರಿತ ವಿಶ್ಲೇಷಣೆ

ಪ್ರಜಾವಾಣಿ ವಾರ್ತೆ

ಮುಂಬೈ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಉತ್ತಮ ಸಾಧನೆ ತೋರಿವೆ. ಈ ಬ್ಯಾಂಕ್‌ಗಳ ಸಾಲ ನೀಡಿಕೆ ಪ್ರಮಾಣವು ಎರಡು ಅಂಕಿಗಳ ಬೆಳವಣಿಗೆ ಸಾಧಿಸಿದೆ. ಆದರೆ ಠೇವಣಿ ಸಂಗ್ರಹವು ಸಾಲ ನೀಡಿಕೆಯ ಪ್ರಮಾಣಕ್ಕಿಂತ ಕಡಿಮೆ ಇದೆ.

ರಿಟೇಲ್ ಸಾಲಗಳು ಹೆಚ್ಚಿನ ಪ್ರಮಾಣದಲ್ಲಿ ವಿತರಣೆ ಆಗಿದೆ. ಇದೇ ವೇಳೆ ಕಡಿಮೆ ವೆಚ್ಚದಲ್ಲಿ ಬಂಡವಾಳವನ್ನು ಒದಗಿಸುವ ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ ಠೇವಣಿಗಳ ಸಂಗ್ರಹವು ಹಿಂದೆ ಬಿದ್ದಿದೆ.

ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳ ಪೈಕಿ ಒಟ್ಟು 9 ಬ್ಯಾಂಕ್‌ಗಳು ಜೂನ್ 30ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿನ ತಮ್ಮ ವಹಿವಾಟಿನ ಕುರಿತಾಗಿ ನೀಡಿರುವ ತಾತ್ಕಾಲಿಕ ವಿವರಗಳನ್ನು ಸುದ್ದಿಸಂಸ್ಥೆ ವಿಶ್ಲೇಷಿಸಿದ್ದು, ಸಾಲ ನೀಡಿಕೆ ಪ್ರಮಾಣವು ಗರಿಷ್ಠ 29ರಷ್ಟು ಹೆಚ್ಚಳವಾಗಿದೆ. ಇದೇ ವೇಳೆ ಠೇವಣಿ ಸಂಗ್ರಹ ಪ್ರಮಾಣವು ಗರಿಷ್ಠ ಶೇ 16ರವರೆಗೆ ಹೆಚ್ಚಳ ಕಂಡಿದೆ.

| ಬ್ಯಾಂಕ್ | ಸಾಲ ನೀಡಿಕೆ ಪ್ರಗತಿ | ಠೇವಣಿ ಹೆಚ್ಚಳ |
|---|---|---|
| ಬ್ಯಾಂಕ್ ಆಫ್ ಇಂಡಿಯಾ | 18.64 | 14.92 |
| ಪಂಜಾಬ್ ನ್ಯಾಷನಲ್ ಬ್ಯಾಂಕ್ | 12.85 | 8.5 |
| ಕೆನರಾ ಬ್ಯಾಂಕ್ | 18 | 11.7 |
| ಇಂಡಿಯನ್ ಬ್ಯಾಂಕ್ | 13.9 | 13.3 |
| ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ | 28.8 | 11.7 |
| ಯುಕೊ ಬ್ಯಾಂಕ್ | 21.3 | 11 |
| ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ | 19.5 | 12.2 |
| ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ | 12.5 | 3.5 |

(ಸಾಲ ನೀಡಿಕೆ ಹಾಗೂ ಠೇವಣಿ ಸಂಗ್ರಹ ಹೆಚ್ಚಳದ ಪ್ರಮಾಣವನ್ನು ಶೇಕಡಾವಾರು ಲೆಕ್ಕದಲ್ಲಿ ನೀಡಲಾಗಿದೆ)

ರಿಟೇಲ್ ಸಾಲ, ಕೃಷಿ ಸಾಲ ಹಾಗೂ ಎಂಎಸ್ಎಂಇ ವಲಯದ ಸಾಲ ನೀಡಿಕೆ ಪ್ರಮಾಣವು ಹೆಚ್ಚಳ ಕಂಡಿವೆ.

ಜನರು ಹೆಚ್ಚಿನ ಗಳಿಕೆಯನ್ನು ಬಯಸಿ ಷೇರು ಮಾರುಕಟ್ಟೆ ಉತ್ಪನ್ನಗಳು ಹಾಗೂ ಮ್ಯೂಚುವಲ್ ಫಂಡ್‌ಗಳಲ್ಲಿ ಜಾಸ್ತಿ ಹಣ ತೊಡಗಿಸುತ್ತಿರುವ ಪರಿಣಾಮವಾಗಿ ಬ್ಯಾಂಕ್‌ಗಳಿಗೆ ಠೇವಣಿ ಸಂಗ್ರಹವು ಸವಾಲಾಗಿ ಪರಿಣಮಿಸಿದೆ ಎಂದು ಆರ್‌ಬಿಐ ಈಚೆಗೆ ಬಿಡುಗಡೆ ಮಾಡಿರುವ ಹಣಕಾಸು ಸ್ಥಿರತೆ ವರದಿಯಲ್ಲಿ ಅಭಿಪ್ರಾಯಪಟ್ಟಿದೆ.

ಬ್ಯಾಂಕ್‌ಗಳ ಹೊಣೆಗಾರಿಕೆಯು ಈಗ ಕಡಿಮೆ ವೆಚ್ಚದ ಚಾಲ್ತಿ ಖಾತೆ, ಉಳಿತಾಯ ಖಾತೆಗಳಿಂದ ಹೆಚ್ಚಿನ ವೆಚ್ಚದ ಅವಧಿ ಠೇವಣಿಗಳು ಹಾಗೂ ಠೇವಣಿ ಪ್ರಮಾಣಪತ್ರದ ಕಡೆ ಸಾಗಿದೆ. ಇದರಿಂದಾಗಿ ಬ್ಯಾಂಕ್‌ಗಳ ಬಂಡವಾಳ ಸಂಗ್ರಹಣೆ ವೆಚ್ಚವು ಜಾಸ್ತಿ ಆಗಿದೆ ಎಂದು ಕೂಡ ಆರ್‌ಬಿಐ ಮಾರ್ಚ್ 30ರವರೆಗಿನ ಅಂಕಿ-ಅಂಶ ಆಧರಿಸಿ ಹೇಳಿದೆ.

# ‘ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ’

## ದೇವಸ್ಥಾನ ‘ಸಾರ್ವಜನಿಕ ಸಂಸ್ಥೆ’ಯಲ್ಲದಿದ್ದರೂ ಮಾಹಿತಿ ನೀಡುವಂತೆ ಸೂಚನೆ

ನವದೆಹಲಿ (ಪಿಟಿಐ): ಶ್ರೀ ವೇದಪುರೀಶ್ವರರ್ ಶ್ರೀವರದರಾಜ ಪೆರುಮಾಳ್ ದೇವಸ್ಥಾನಕ್ಕೆ ಸಂಬಂಧಿಸಿದ ಮಾಹಿತಿ ಕೇಳಿ ಸಲ್ಲಿಸಲಾಗಿರುವ ಆರ್‌ಟಿಐ ಅರ್ಜಿಯನ್ನು ಮರುಪರಿಶೀಲಿಸಿ, ತನ್ನಲ್ಲಿ ಲಭ್ಯವಿರುವ ದಾಖಲೆಗಳನ್ನು ಸಲ್ಲಿಸುವಂತೆ ಪುದುಚೆರಿಯ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ವಕ್ಫ್ ಇಲಾಖೆಗೆ ಕೇಂದ್ರೀಯ ಮಾಹಿತಿ ಆಯೋಗ (ಸಿಐಸಿ) ನಿರ್ದೇಶನ ನೀಡಿದೆ.

‘ದೇವಸ್ಥಾನವು ಸಾರ್ವಜನಿಕ ಸಂಸ್ಥೆಯಲ್ಲದಿದ್ದರೂ, ದೇವಸ್ಥಾನ ಕುರಿತಂತೆ ತಾನು ಹೊಂದಿರುವ ಮಾಹಿತಿಯನ್ನು ಬಹಿರಂಗಪಡಿಸುವ ಶಾಸನಬದ್ಧ ಬಾಧ್ಯತೆ ಇಲಾಖೆ ಹೊಂದಿದೆ. ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯ ಇಲ್ಲ’ ಎಂದು ಸಿಐಸಿ ಹೇಳಿದೆ.

‘ಅರ್ಜಿದಾರರು ಮಾಹಿತಿ ಕೇಳಿ ಇಲಾಖೆಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಆರ್‌ಟಿಐ ಅಡಿ ಇಲಾಖೆಯನ್ನು ಸರ್ಕಾರಿ ಪ್ರಾಧಿಕಾರ ಎಂದೇ ಪರಿಗಣಿಸಲಾಗುತ್ತದೆಯೇ ಹೊರತು ದೇವಸ್ಥಾನವನ್ನಲ್ಲ’ ಎಂದು ಮಾಹಿತಿ ಆಯುಕ್ತ ಪಿ.ಆರ್. ರಮೇಶ್ ಹೇಳಿದ್ದಾರೆ.

2021-22ರಿಂದ 2024-25ರ ಅವಧಿಯ ದೇವಸ್ಥಾನದ ವಾರ್ಷಿಕ ಬಜೆಟ್, 2020-21ರಿಂದ 2023-24 ಅವಧಿಯ ಲೆಕ್ಕಪರಿಶೋಧನೆಯಾಗಿರುವ ಲೆಕ್ಕಪತ್ರಗಳು, ಲೆಕ್ಕಪರಿಶೋಧಕರ ಆಕ್ಷೇಪಣೆಗಳು ಹಾಗೂ ಅವುಗಳಿಗೆ ಸಂಬಂಧಿಸಿ ಕೈಗೊಂಡ ಕ್ರಮಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸುವಂತೆ ಅರ್ಜಿದಾರರ ಕೋರಿದ್ದರು. ಕೂಡಲೇ ಈ ಎಲ್ಲ ಮಾಹಿತಿಯನ್ನು ಅರ್ಜಿದಾರರಿಗೆ ಒದಗಿಸುವಂತೆ ಸಿಐಸಿ ರಮೇಶ್ ಅವರು ಇಲಾಖೆಗೆ ಆದೇಶಿಸಿದ್ದಾರೆ.

2021ರಿಂದ ದೇವಸ್ಥಾನದ ಆಡಳಿತಾಧಿಕಾರಿ ಹಾಗೂ ಸಿಬ್ಬಂದಿ ವಿರುದ್ಧ ಇಲಾಖೆಗೆ ಸಲ್ಲಿಸಲಾಗಿರುವ ದೂರುಗಳು, ಆರೋಪಗಳಿಗೆ ಸಂಬಂಧಿಸಿ ತೆಗೆದುಕೊಂಡ ಶಿಸ್ತುಕ್ರಮ, ಬಾಕಿ ಇರುವ ದೂರುಗಳು, ಸಭೆಯ ನಡಾವಳಿಗಳು, ಪರಿಶೀಲನಾ ವರದಿಗಳು ಹಾಗೂ ದೇವಸ್ಥಾನದ ಆಸ್ತಿಗಳನ್ನು ಬೇರೆ ಉದ್ದೇಶಕ್ಕೆ ಬಳಸಿದ್ದರೆ ಅವುಗಳ ವಿವರಗಳನ್ನು ನೀಡುವಂತೆಯೂ ಅರ್ಜಿದಾರರ ಕೋರಿದ್ದರು.

ಈ ಅರ್ಜಿಯನ್ನು ಇಲಾಖೆಯು ಆರ್‌ಟಿಐ ಕಾಯ್ದೆ ಸೆಕ್ಷನ್ 6(3) ಅಡಿ, ದೇವಸ್ಥಾನದ ಆಡಳಿತ ಮಂಡಳಿಗೆ ವರ್ಗಾಯಿಸಿ, ಮಾಹಿತಿ ನೀಡುವಂತೆ ಸೂಚಿಸಿತ್ತು.

‘ಆರ್‌ಟಿಐ ಕಾಯ್ದೆ ಸೆಕ್ಷನ್ 2(ಎಚ್) ಅಡಿ ದೇವಸ್ಥಾನವು ‘ಸರ್ಕಾರಿ ಪ್ರಾಧಿಕಾರ ವಲ್ಲ. ಪುದುಚೆರಿ ಸರ್ಕಾರ ದೇವಸ್ಥಾನಕ್ಕೆ ಹಣಕಾಸು ನೆರವನ್ನೂ ನೀಡುವುದಿಲ್ಲ’ ಎಂದು ಹೇಳಿದ್ದ ದೇವಸ್ಥಾನ ಆಡಳಿತವು ಮಾಹಿತಿ ನೀಡುವುದಕ್ಕೆ ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ, ಅರ್ಜಿದಾರರು ಸಿಐಸಿಗೆ ಮೇಲ್ಮನವಿ ಸಲ್ಲಿಸಿದ್ದರು.

ಟಿ20 ಮಹಿಳಾ ವಿಶ್ವಕಪ್: ಬೆತ್ ಮೂನಿ, ಲಿಚ್‌ಫೀಲ್ಡ್ ಅಮೋಘ ಬ್ಯಾಟಿಂಗ್

# ಆಸ್ಟ್ರೇಲಿಯಾ ಮುಡಿಗೆ ಏಳನೇ ಕಿರೀಟ

ಲಂಡನ್ (ಪಿಟಿಐ): ಆಸ್ಟ್ರೇಲಿಯಾ ವನಿತೆಯರ ತಂಡವು ಏಳನೇ ಬಾರಿ ಟಿ20 ವಿಶ್ವಕಪ್ ಜಯಿಸಿತು.

ಭಾನುವಾರ ಲಾರ್ಡ್ಸ್‌ನಲ್ಲಿ ನಡೆದ ಮಹಿಳೆಯರ ಟಿ20 ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಇಂಗ್ಲೆಂಡ್ ಎದುರು 7 ವಿಕೆಟ್‌ಗಳಿಂದ ಜಯಿಸಿದ ಆಸ್ಟ್ರೇಲಿಯಾ ಟ್ರೋಫಿ ಎತ್ತಿಹಿಡಿಯಿತು.

151 ರನ್‌ಗಳ ಜಯದ ಗುರಿಯನ್ನು ಆಸ್ಟ್ರೇಲಿಯಾ ತಂಡವು 17.1 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಮುಟ್ಟಿತು. ಬೆತ್ ಮೂನಿ (64; 49ಎ, 4x10) ಮತ್ತು ಫೋಬಿ ಲಿಚ್‌ಫೀಲ್ಡ್ (48; 35ಎ, 4x6, 6x2) ಜಯವನ್ನು ಸುಲಭಗೊಳಿಸಿದರು. ಇವರಿಬ್ಬರನ್ನು ಕಟ್ಟಿಹಾಕಲು ಇಂಗ್ಲೆಂಡ್ ಬೌಲರ್‌ಗಳು ಮಾಡಿದ ಪ್ರಯತ್ನ ಸಾಕಾಗಲಿಲ್ಲ.

ಸೋಫಿ ಮಾಲಿನೆ ನಾಯಕತ್ವದ ಆಸ್ಟ್ರೇಲಿಯಾ, ಈ ಟೂರ್ನಿಯಲ್ಲಿ ಯಾವ ಪಂದ್ಯವನ್ನೂ ಸೋತಿಲ್ಲ.



ಆಸ್ಟ್ರೇಲಿಯಾ ತಂಡದ ಆಟಗಾರ್ತಿಯರು ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ಸಂಭ್ರಮಿಸಿದರು — ಎಎಫ್‌ಪಿ ಚಿತ್ರ

**ಬ್ರಂಟ್ ಆಟ:** ಆಸ್ಟ್ರೇಲಿಯಾ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಇಂಗ್ಲೆಂಡ್ ತಂಡ ಆರಂಭದಲ್ಲಿಯೇ ಆಘಾತ ಎದುರಿಸಿತು. ಐದು ಓವರ್ ಮುಗಿಯುವ ಮುನ್ನವೇ 32 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಬ್ರಂಟ್ (ಅಜೇಯ 58; 53ಎ, 4x5) ವಿಕೆಟ್ ಪತನ ತಡೆಯುವ ಯತ್ನ ಮಾಡಿದರು. ಅವರಿಗೆ ಅಲಿಸ್ ಕ್ಯಾಪ್ಸಿ (23; 20ಎ, 4x2, 6X1) ಮತ್ತು ಫ್ರೆಯಾ ಕೆಂಪ್ (ಅಜೇಯ 44; 28ಎ, 4x4, 6x1) ಅವರೂ ಉಪಯುಕ್ತ ಕಾಣಿಕೆ ನೀಡಿದರು. ಆದರಿಂದಾಗಿ ಇಂಗ್ಲೆಂಡ್ 20 ಓವರ್‌ಗಳಲ್ಲಿ 4ಕ್ಕೆ 150 ರನ್ ಗಳಿಸಿತು.

ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಆಸ್ಟ್ರೇಲಿಯಾ ಬೌಲರ್ ಲೂಸಿ ಹ್ಯಾಮಿಲ್ಟನ್ ಹಾಕಿದ ಎಸೆತವನ್ನು ಹೊಡೆಯುವ ಯತ್ನದಲ್ಲಿ ಆ್ಯಮಿ ಜೋನ್ಸ್ ಅವರು ಜಾರ್ಜಿಯಾ ವೋಲ್‌ಗೆ ಕ್ಯಾಚ್ ಕೊಟ್ಟರು. ಐದನೇ ಓವರ್‌ನಲ್ಲಿ ಡ್ಯಾನಿ ವ್ಯಾಟ್ ಹಾಜ್ (8ರನ್) ಅವರ ವಿಕೆಟ್ ಗಳಿಸಿದ ಅನಾಬೆಲ್ ಸದರ್‌ಲ್ಯಾಂಡ್ ಸಂಭ್ರಮಿಸಿದರು.

ಆದರೆ ಕ್ರೀಸ್‌ಗೆ ಬಂದ ಬ್ರಂಟ್, ನಿಧಾನವಾಗಿ ಇನಿಂಗ್ಸ್‌ಗೆ ಸ್ಥಿರತೆ ಒದಗಿಸಿದರು. ಕ್ಯಾಪ್ಸಿ ಅವರೊಡಗೂಡಿ ಮೂರನೇ ವಿಕೆಟ್ ಜೊತೆಯಾಟದಲ್ಲಿ 35 ರನ್ ಸೇರಿಸಿದರು. ಆದರೆ ಹತ್ತನೇ ಓವರ್‌ನಲ್ಲಿ ಕ್ಯಾಪ್ಸಿ ಮತ್ತು 11ನೇ ಓವರ್‌ನಲ್ಲಿ ಹೀಥರ್ ನೈಟ್ ಅವರು ಔಟ್ ಆದರು. ಇದರಿಂದ ಇಂಗ್ಲೆಂಡ್ ತಂಡದಲ್ಲಿ ಮತ್ತೆ ಆತಂಕ ಮೂಡಿತು.

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2026

ಬ್ರಂಟ್ ಮತ್ತು ಫ್ರೆ ಕೆಂಪ್ ಜೋಡಿಯು ಕೊನೆಯ 55 ಎಸೆತಗಳಲ್ಲಿ 80 ರನ್ ಸೂರೆ ಮಾಡಿದರು. ಇದರಿಂದಾಗಿ ತಂಡವು ಹೋರಾಟದ ಮೊತ್ತ ಗಳಿಸಿತು.

**ಸಂಕ್ಷಿಪ್ತ ಸ್ಕೋರು:** ಇಂಗ್ಲೆಂಡ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 150 (ನ್ಯಾಟ್ ಶಿವರ್ ಬ್ರಂಟ್ ಔಟಾಗದೇ 58, ಅಲಿಸ್ ಕ್ಯಾಪ್ಸಿ 23, ಫ್ರೆಯಾ ಕೆಂಪ್ ಔಟಾಗದೇ 44, ಕಿಮ್ ಗಾರ್ತ್ 20ಕ್ಕೆ1, ಲೂಸಿ ಹ್ಯಾಮಿಲ್ಟನ್ 19ಕ್ಕೆ1, ಸೋಫಿ ಮಾಲಿನೆ 32ಕ್ಕೆ1, ಅನಾಬೆಲ್ ಸದರ್ಲ್ಯಾಂಡ್ 34ಕ್ಕೆ1) ಆಸ್ಟ್ರೇಲಿಯಾ: 17.1 ಓವರ್‌ಗಳಲ್ಲಿ 3 ವಿಕೆಟ್‌ಗೆ 153 (ಬೆತ್ ಮೂನಿ 64, ಫೋಬಿ ಲಿಚ್‌ಫೀಲ್ಡ್ 48; ಚಾರ್ಲೀ ಡೀನ್ 28ಕ್ಕೆ1, ಲಾರೆನ್ ಬೆಲ್ 38ಕ್ಕೆ1, ಸೋಫಿ ಎಕ್ಲೆಸ್ಟೋನ್ 24ಕ್ಕೆ1). **ಪಂದ್ಯದ ಹಾಗೂ ಟೂರ್ನಿಯ ಆಟಗಾರ್ತಿ:** ಬೆತ್ ಮೂನಿ.

## ಕೈಗಾ:5 ಮತ್ತು 6ನೇ ಘಟಕ ನಿರ್ಮಾಣದಲ್ಲಿ ಎಂಇಐಎಲ್ ಮೈಲಿಗಲ್ಲು

# ರಿಯಾಕ್ಟರ್‌ಗೆ ಕಾಂಕ್ರೀಟ್ ಅಳವಡಿಕೆ ಪೂರ್ಣ

ಪ್ರಜಾವಾಣಿ ವಾರ್ತೆ

**ಕಾರವಾರ:** ತಾಲ್ಲೂಕಿನ ಕೈಗಾ ಅಣು ವಿದ್ಯುತ್ ಸ್ಥಾವರದ 5 ಮತ್ತು 6ನೇ ಘಟಕಗಳ ಭಾರಜಲ ರಿಯಾಕ್ಟರ್ ಸ್ಥಾಪನೆಗೆ ಬೃಹತ್ ಪ್ರಮಾಣದ ಏಕಶಿಲಾ (ಮೊನೊಲಿಥಿಕ್) ಕಾಂಕ್ರೀಟ್ ಅಳವಡಿಕೆ ಕಾಮಗಾರಿಯನ್ನು ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಸಂಸ್ಥೆ ಯಶಸ್ವಿಯಾಗಿ ಪೂರ್ಣಗೊಳಿಸಿದೆ.

'ಭಾರತೀಯ ಪರಮಾಣು ವಿದ್ಯುತ್ ನಿಗಮದ ಇತಿಹಾಸದಲ್ಲೇ ಅತ್ಯಂತ ವೇಗವಾಗಿ ಪೂರ್ಣಗೊಂಡ ಕಾಮಗಾರಿ ಇದಾಗಿದ್ದು, ಇದು ಸಂಸ್ಥೆಯ ಮೊದಲ ಪರಮಾಣು ವಲಯದ ಯೋಜನೆ' ಎಂದು ಸಂಸ್ಥೆಯು ತಿಳಿಸಿದೆ.



ಕಾರವಾರ ತಾಲ್ಲೂಕಿನ ಕೈಗಾದಲ್ಲಿ ಭಾರಜಲ ಅಣು ರಿಯಾಕ್ಟರ್ ನಿರ್ಮಾಣದ ಕಾಂಕ್ರೀಟ್ ಕಾಮಗಾರಿಗೆ ಮಳೆ ನೀರಿನಿಂದ ರಕ್ಷಣೆ ಒದಗಿಸಲಾಗಿದೆ

'ಪ್ರತಿ ಘನ ಮೀಟರ್‌ಗೆ 360 ಕೆ.ಜಿ ತೂಕದ ಕಬ್ಬಿಣದ ಸರಳುಗಳ ಸಾಂದ್ರತೆಯೊಂದಿಗೆ, ಸುಮಾರು 7,250 ಘನ ಮೀ.ನಷ್ಟು ಕಾಂಕ್ರೀಟ್ ಅನ್ನು ನಿರಂತರವಾಗಿ ಸುರಿಯಲಾಗಿದೆ. ಕಾಮಗಾರಿಗಾಗಿ ಪ್ರತಿ ಗಂಟೆಗೆ 360 ಘನ ಮೀಟರ್ ಸಾಮರ್ಥ್ಯದ ತಾಪಮಾನ ನಿಯಂತ್ರಿತ ಕಾಂಕ್ರೀಟ್ ಉತ್ಪಾದನಾ ಘಟಕ, ಗಂಟೆಗೆ 340 ಘನ ಮೀ. ಸಾಮರ್ಥ್ಯದ ಕಾಂಕ್ರೀಟ್ ಪಂಪ್‌ಗಳನ್ನು ನಿಯೋಜಿಸಲಾಗಿತ್ತು. ಕಾಂಕ್ರೀಟ್ ಮಿಶ್ರಣವನ್ನು ತಂಪಾಗಿಸಲು ಮತ್ತು ಉಷ್ಣಾಂಶವನ್ನು ನಿಯಂತ್ರಣದಲ್ಲಿಡಲು ದಿನಕ್ಕೆ 510 ಟನ್ ಸಾಮರ್ಥ್ಯದ ಮಂಜುಗಡ್ಡೆ ಉತ್ಪಾದನಾ ಘಟಕ ಹಾಗೂ 400 ಟನ್ ಸಾಮರ್ಥ್ಯದ ಮಂಜುಗಡ್ಡೆ ಸಂಗ್ರಹಣಾ ಗೋದಾಮನ್ನು ನಿರ್ಮಿಸಲಾಗಿತ್ತು. 2,600 ಟನ್ ಸಾಮರ್ಥ್ಯದ ಸಿಮೆಂಟ್ ಮತ್ತು ಹಾರುಬೂದಿ ಸಂಗ್ರಹಣಾ ವ್ಯವಸ್ಥೆಯನ್ನು ಮಾಡಿಕೊಳ್ಳಲಾಗಿತ್ತು' ಎಂದು ಹೇಳಿದೆ.

'ದಟ್ಟವಾದ ಮಳೆಕಾಡು ಹಾಗೂ ಭಾರಿ ಮಳೆಯಾಗುವ ಕೈಗಾ ಪ್ರದೇಶದ ಭೌಗೋಳಿಕ ಪರಿಸರವು ಭಾರಿ ಸವಾಲನ್ನು ಒಡ್ಡಿತ್ತು. ಮಳೆಯಿಂದ ಕಾಮಗಾರಿಗೆ ಯಾವುದೇ ಅಡ್ಡಿಯಾಗದಂತೆ ತಡೆಯಲು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ 75 ಮೀಟರ್ ವ್ಯಾಸದ ಬೃಹತ್ ಮಳೆ ರಕ್ಷಣಾ ವ್ಯವಸ್ಥೆಯನ್ನು ನಿರ್ಮಿಸಿಕೊಂಡಿದ್ದೆವು' ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

# ಶ್ರೀವಿಜಯ ಸಾಹಿತ್ಯ ದತ್ತಿ ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕನ್ನಡ ಸಾಹಿತ್ಯ ಪರಿಷತ್ತಿನ 'ಶ್ರೀ ವಿಜಯ ಸಾಹಿತ್ಯ ದತ್ತಿ' ಪ್ರಶಸ್ತಿಗೆ 2021 ರಿಂದ 2025ನೇ ಸಾಲಿನವರೆಗೆ ತಲಾ ಇಬ್ಬರಂತೆ ಹತ್ತು ಲೇಖಕರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ ₹60 ಸಾವಿರ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.



ಟಿ. ಸತೀಶ್ ಜವರೇಗೌಡ

**ಆಯ್ಕೆಯಾದವರು:** ಮಂಡ್ಯದ ಟಿ. ಸತೀಶ್ ಜವರೇಗೌಡ, ಮಂಗಳೂರಿನ ರವೀಂದ್ರ ನಾಯಕ್ ಸಣ್ಣಕ್ಕಿ ಬೆಟ್ಟು (2021). ದಕ್ಷಿಣ ಕನ್ನಡದ ವಿಲ್ಸನ್ ರೋಶನ್ ಸಿಕ್ವೇರಾ, ಹಾಸನದ ಮಮತಾ ಅರಸೀಕೆರೆ (2022). ಕಲಬುರಗಿಯ ಗಿರೀಶ್ ಚಂದ್ರಕಾಂತ್ ಜಕಾಪುರೆ, ಧಾರವಾಡದ ಹೆಬಸೂರ ರಂಜಾನ್ (2023). ಬೆಂಗಳೂರಿನ ಬೇಲೂರು ರಘುನಂದನ, ಕೋಲಾರದ ನೇತ್ರಾವತಿ ಕೆ.ವಿ (2024). ರಾಯಚೂರಿನ ಲಕ್ಷ್ಮಣ್ ಕನಕುಂಟ್ಲಾ, ಹಾವೇರಿಯ ರವಿ ಎಂ.ಸಿದ್ದಿಪುರ (2025).

ಪರಿಷತ್ತಿನ ಆಡಳಿತಾಧಿಕಾರಿ ಕೆ.ಎ.ದಯಾನಂದ ಅಧ್ಯಕ್ಷತೆಯ ಸಮಿತಿಯು ಆಯ್ಕೆ ಮಾಡಿದೆ. ಇತ್ತೀಚೆಗೆ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ಹಾಗೂ ಸಮಿತಿ ಸದಸ್ಯರಾದ ಅಬ್ದುಲ್ ಹೈ. ತೋರಣಗಲ್ ಮತ್ತು ಪಿ. ಚಂದ್ರಿಕಾ ಪಾಲ್ಗೊಂಡಿದ್ದರು.



ರವೀಂದ್ರ ನಾಯಕ್



ವಿಲ್ಸನ್ ರೋಶನ್



ಮಮತಾ ಅರಸೀಕೆರೆ



ಗಿರೀಶ್ ಚಂದ್ರಕಾಂತ್



ರವಿ ಎಂ. ಸಿದ್ದಿಪುರ



ಹೆಬಸೂರ ರಂಜಾನ್



ಬೇಲೂರು ರಘುನಂದನ



ನೇತ್ರಾವತಿ ಕೆ.ವಿ.



ಲಕ್ಷ್ಮಣ್ ಕನಕುಂಟ್ಲಾ

# ಡೇಟಾ ಸೆಂಟರ್

ಮುಂಬೈ, ವಿಶಾಖಪಟ್ಟಣ ಸೇರಿದಂತೆ ಹಲವೆಡೆ ಕೃತಕ ಬುದ್ಧಿಮತ್ತೆಯ (ಎಐ) ಬೃಹತ್ ಡೇಟಾ ಸೆಂಟರ್‌ಗಳನ್ನು ಸ್ಥಾಪಿಸಲಾಗುತ್ತಿದೆ. ಮೆಟಾ, ಅಮೆಜಾನ್, ಮೈಕ್ರೊಸಾಫ್ಟ್ ಕಂಪನಿಗಳಿಗೆ ಸರ್ಕಾರಗಳು ಭಾರಿ ಸಬ್ಸಿಡಿಯನ್ನೂ ನೀಡುತ್ತಿವೆ. ಆದರೆ, ರೈತರು ಸೇರಿದಂತೆ ಅಲ್ಲಿನ ಜನರು ಡೇಟಾ ಸೆಂಟರ್‌ಗಳ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಭೂಮಿ, ನೀರು, ವಿದ್ಯುತ್‌ನ ಬಕಾಸುರ ದಾಹವೇ ಡೇಟಾ ಸೆಂಟರ್‌ಗಳ ನಿರ್ಮಾಣವನ್ನು ಜನರು ವಿರೋಧಿಸಲು ಮುಖ್ಯ ಕಾರಣ ಎನ್ನಲಾಗಿದೆ. ಡೇಟಾ ಸೆಂಟರ್‌ಗಳು ಸ್ಥಾಪನೆಗೊಂಡರೆ ಕುಡಿಯುವ ನೀರಿಗೂ ಹಾಹಾಕಾರ ಆರಂಭವಾದೀತು ಎನ್ನುವ ಆತಂಕ ಜನರನ್ನು ಕಾಡುತ್ತಿದೆ



# ಸರ್ಕಾರಗಳ ಉತ್ಸಾಹ, ಜನರ ವಿರೋಧ

• ಬಿ.ವಿ.ಶ್ರೀನಾಥ್

2026ರ ಫೆಬ್ರುವರಿಯಲ್ಲಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕೃತಕ ಬುದ್ಧಿಮತ್ತೆ (ಎಐ) 'ಇಂಪ್ಯಾಕ್ಟ್' ಶೃಂಗಸಭೆ ನಡೆಯಿತು. ಪ್ರತ್ಯಕ್ಷವಾಗಿ ಮತ್ತು ಆನ್‌ಲೈನ್ ಮೂಲಕ 5 ಲಕ್ಷ ಮಂದಿ ಭಾಗವಹಿಸಿದ್ದ ಸಭೆಯಲ್ಲಿ ಮಾತನಾಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಭಾರತವನ್ನು ದಕ್ಷಿಣ ಜಗತ್ತಿನ ಎಐ ಶಕ್ತಿಕೇಂದ್ರ ಎಂದು ಬಣ್ಣಿಸಿದ್ದರು. ಜತೆಗೆ ಭಾರತದಲ್ಲಿ ಎಐ ಡೇಟಾ ಸೆಂಟರ್‌ಗಳನ್ನು (ದತ್ತಾಂಶ ಕೇಂದ್ರಗಳು) ನಿರ್ಮಿಸುವಂತೆ ಕರೆ ನೀಡಿದ್ದರು. ಜತೆಗೆ 20 ವರ್ಷ 'ತೆರಿಗೆ ರಜೆ' ಘೋಷಿಸಿದ್ದರು.

ಎಐ ಉದ್ಯಮ ಬೆಳೆದರೆ ಉದ್ಯೋಗ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ದೇಶ ಮುಂದುವರಿಯಲು ಸ್ವಲ್ಪಮಟ್ಟಿಗೆ ಅನುಕೂಲವಾಗಬಹುದು (ಡೇಟಾ ಸೆಂಟರ್‌ಗಳಿಂದ ಹೆಚ್ಚು ಉದ್ಯೋಗ ಸೃಷ್ಟಿ ಆಗುವುದಿಲ್ಲ ಎನ್ನಲಾಗುತ್ತದೆ). ಆದರೆ, ಅದಕ್ಕೆ ತೆರಬೇಕಾದ ಬೆಲೆ ಏನು ಎನ್ನುವುದರ ಬಗ್ಗೆ ಚರ್ಚೆ ತೀವ್ರಗೊಂಡಿದೆ. ಎಐ ಡೇಟಾ ಸೆಂಟರ್‌ಗಳ ನಿರ್ಮಾಣವನ್ನು ವಿರೋಧಿಸಿ ಮುಂಬೈ, ವಿಶಾಖಪಟ್ಟಣ ಮುಂತಾದೆಡೆ ನಡೆಯುತ್ತಿರುವ ಹೋರಾಟಗಳು ಎಐ ಬೆಳವಣಿಗೆಯ ಇನ್ನೊಂದು ಮುಖದತ್ತ ಬೊಟ್ಟು ಮಾಡುತ್ತಿವೆ.

ಭಾರತವು ಎಐ ಡೇಟಾ ಸೆಂಟರ್‌ಗಳಿಗೆ ಕೆಂಪುಹಾಸು ಹಾಸಿದ್ದರೆ, ಜಗತ್ತಿನ ಹಲವೆಡೆ ಇದಕ್ಕೆ ವಿರುದ್ಧವಾದ ಬೆಳವಣಿಗೆಗಳು ನಡೆಯುತ್ತಿವೆ. ಅಮೆರಿಕ, ಮಲೇಷ್ಯಾ, ಬ್ರಿಟನ್, ಲ್ಯಾಟಿನ್ ಅಮೆರಿಕದ ದೇಶಗಳಲ್ಲಿ ಡೇಟಾ ಸೆಂಟರ್‌ಗಳ ಸ್ಥಾಪನೆ ವಿರೋಧಿಸಿ ಪ್ರತಿಭಟನೆಗಳು ನಡೆಯುತ್ತಿವೆ. ವಿವಿಧ ರೀತಿಯ ರಾಜಕೀಯ, ಸಾಮಾಜಿಕ ವ್ಯವಸ್ಥೆ ಇರುವ ದೇಶಗಳು ಒಟ್ಟಾಗಿ ಎಐ ಡೇಟಾ ಸೆಂಟರ್‌ಗಳನ್ನು ವಿರೋಧಿಸುತ್ತಿರುವುದು ಗಮನಾರ್ಹ. ಅದರಲ್ಲೂ ಅಮೆರಿಕವು ಈ ಕುರಿತ ಪ್ರತಿಭಟನೆಗಳ ಕೇಂದ್ರವೆಂದಾಗಿದೆ. ಜಗತ್ತಿನಲ್ಲಿಯೇ ಅತಿ ಹೆಚ್ಚು ಡೇಟಾ ಸೆಂಟರ್‌ಗಳು ಅಮೆರಿಕದಲ್ಲಿದ್ದು, ಅದರ ಪರಿಣಾಮಗಳನ್ನು ಎದುರಿಸುತ್ತಿರುವ ಜನರು, ಸರ್ಕಾರದ ವಿರುದ್ಧ ಪ್ರತಿಭಟನೆಗೆ ಇಳಿದಿದ್ದಾರೆ.

ಡೇಟಾ ಸೆಂಟರ್‌ಗಳು ಭಾರಿ ಪ್ರಮಾಣದ ಭೂಮಿ, ನೀರು, ವಿದ್ಯುತ್ ಬೇಡುತ್ತವೆ ಎನ್ನುವುದು ಪ್ರತಿಭಟನೆಗೆ ಮೂಲ ಕಾರಣ. ಅದರ ಜತೆಗೆ, ತಾಪಮಾನದ ಏರಿಕೆ ಸೇರಿದಂತೆ ಪರಿಸರದ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಭಾರತದ ಬಹುತೇಕ ರಾಜ್ಯಗಳಲ್ಲಿ ಕುಡಿಯುವ ನೀರು, ವಿದ್ಯುತ್ ಕೊರತೆ ಇದ್ದು, ಡೇಟಾ ಸೆಂಟರ್‌ಗಳಿಂದ ಪರಿಸ್ಥಿತಿ ಮತ್ತಷ್ಟು ಹದಗೆಡಬಹುದು ಎನ್ನುವ ವಿಶ್ಲೇಷಣೆಯಿದೆ.


ಭಾರತದಲ್ಲಿ ದೆಹಲಿ, ಮುಂಬೈ, ಪುಣೆ, ಬೆಂಗಳೂರು, ನೋಯಿಡಾ, ಹೈದರಾಬಾದ್‌ನಲ್ಲಿ ಡೇಟಾ ಸೆಂಟರ್‌ಗಳಿವೆ. ಇವುಗಳ ಜತೆಗೆ ಮುಂಬೈ, ಚೆನ್ನೈ ಮತ್ತು ವಿಶಾಖಪಟ್ಟಣದಲ್ಲಿ ಬೃಹತ್ ಡೇಟಾ ಸೆಂಟರ್‌ಗಳು ನಿರ್ಮಾಣಗೊಳ್ಳುತ್ತಿವೆ. ಗುಜರಾತ್‌ನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್ ಮತ್ತು ಮೆಟಾ ಜಂಟಿಯಾಗಿ 168 ಮೆಗಾವಾಟ್ ಸಾಮರ್ಥ್ಯದ ಡೇಟಾ ಸೆಂಟರ್ ನಿರ್ಮಿಸುತ್ತಿವೆ. ರಾಜ್ಯ ಸರ್ಕಾರಗಳು ಡೇಟಾ ಸೆಂಟರ್‌ಗಳಿಗಾಗಿ ರೈತರಿಂದ ಭೂಮಿ ಪಡೆದುಕೊಳ್ಳುತ್ತಿದ್ದು, ಸ್ವಾಧೀನದ ವಿರುದ್ಧ ಹೋರಾಟಗಳು ನಡೆಯುತ್ತಿವೆ. ದಲಿತರು ಹೆಚ್ಚು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎನ್ನುವ ಆರೋಪ ಇದೆ. ಮುಂಬೈನಲ್ಲಿ ಹೀರಾನಂದಾನಿ ಸಮೂಹವು ಡೇಟಾ ಸೆಂಟರ್ ನಿರ್ಮಾಣಕ್ಕಾಗಿ ಸುಮಾರು 650 ದಲಿತ ಕುಟುಂಬಗಳನ್ನು ಒಕ್ಕಲೆಬ್ಬಿಸಿತ್ತು ಎಂದು ಆರೋಪಿಸಲಾಗಿದೆ.

ಡೇಟಾ ಸೆಂಟರ್‌ಗಳಿಗೆ ವಿದ್ಯುತ್ ಒದಗಿಸಲು ಅವುಗಳ ಸಮೀಪದಲ್ಲಿ ಪಳೆಯುಳಿಕೆ ಇಂಧನ ಆಧಾರಿತ ವಿದ್ಯುತ್ ಸ್ಥಾವರಗಳನ್ನು ನಿರಂತರವಾಗಿ, ಮುಚ್ಚಬೇಕಾದ ವಿದ್ಯುತ್ ಸ್ಥಾವರಗಳನ್ನೂ ಕಾರ್ಯನಿರ್ವಹಿಸುವಂತೆ ಮಾಡಲಾಗಿದೆ. ಉದಾಹರಣೆಗೆ, ಚೆನ್ನೈ ಹೊರವಲಯದ ಕಟ್ಟುಪಳ್ಳಿಯಲ್ಲಿ ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಥಾವರದಿಂದ ಪರಿಸರ ಮಾಲಿನ್ಯ ಉಂಟಾಗಿ, ಅದರ ವಿರುದ್ಧ ಮೀನುಗಾರರು ನಿರಂತರ ಹೋರಾಟ ನಡೆಸಿದ ಫಲವಾಗಿ 2017ರಲ್ಲಿ ಅದನ್ನು ಮುಚ್ಚಲಾಗಿತ್ತು. ಆದರೆ, ಡೇಟಾ ಸೆಂಟರ್ ಮತ್ತು ವಿದ್ಯುತ್ ಚಾಲಿತ ವಾಹನಗಳಿಗಾಗಿ ಇದೀಗ ಅದನ್ನು ಪುನರಾರಂಭಿಸಲಾಗಿದೆ. ಜತೆಗೆ, ಕಲ್ಲಿದ್ದಲು ಆಧಾರಿತವಾದ ಅನೇಕ ಹೊಸ ವಿದ್ಯುತ್ ಯೋಜನೆಗಳಿಗೆ ಅನುಮತಿ ನೀಡಲಾಗಿದೆ. ಡೇಟಾ ಸೆಂಟರ್‌ಗಳಿಗೆ ತಡೆಯಿಲ್ಲದ ವಿದ್ಯುತ್ ಮತ್ತು ನೀರು ಪೂರೈಕೆಯನ್ನು ಖಾತರಿಪಡಿಸಲಾಗಿದೆ. ಆದರೆ, ಅವುಗಳ ಪಕ್ಕದಲ್ಲೇ ಇರುವ ಅನೇಕ ಹಳ್ಳಿ–ಪಟ್ಟಣಗಳು ನೀರು ಮತ್ತು ವಿದ್ಯುತ್ ಪೂರೈಕೆಯ ಸಮಸ್ಯೆಗಳನ್ನು ಎದುರಿಸುತ್ತಿವೆ.

**ಚರ್ಚೆಯಲ್ಲಿ ಗೂಗಲ್ ಡೇಟಾ ಸೆಂಟರ್:** ಆಂಧ್ರಪ್ರದೇಶದ ಬಂದರು ನಗರಿ ವಿಶಾಖಪಟ್ಟಣದ ಬಳಿಯಿರುವ ತರ್ಲುವಾಡ ಮತ್ತು ಅನಕಾಪಲ್ಲಿಯಲ್ಲಿ ಎರಡು ಡೇಟಾ ಸೆಂಟರ್‌ಗಳು ನಿರ್ಮಾಣಗೊಳ್ಳುತ್ತಿವೆ. ಅದಾನಿ ಕಂಪನಿಯು ಗೂಗಲ್ ಸಹಭಾಗಿತ್ವದಲ್ಲಿ 1500 ಕೋಟಿ ಡಾಲರ್ ವೆಚ್ಚದ (ಅಂದಾಜು ₹1.43 ಲಕ್ಷ ಕೋಟಿ) 2 ಗಿಗಾವಾಟ್ ಸಾಮರ್ಥ್ಯದ ಡೇಟಾ ಸೆಂಟರ್ ನಿರ್ಮಿಸುತ್ತಿದ್ದು, ಅದಕ್ಕಾಗಿ 480 ಎಕರೆ ಭೂಮಿ ನೀಡಲಾಗಿದೆ. ಭೂಮಿ ಬೆಲೆಯಲ್ಲಿ ಶೇ 25ರಷ್ಟು ವಿನಾಯಿತಿ ನೀಡಲಾಗಿದ್ದು, ವಿದ್ಯುತ್ ಪೂರೈಕೆಗೆ 15 ವರ್ಷ, ನೀರು ಪೂರೈಕೆಗೆ 10 ವರ್ಷ ಸಬ್ಸಿಡಿ ನೀಡಲು, ರಾಜ್ಯದ ತೆರಿಗೆ ಕಡಿತ ಮಾಡಲು ಆಂಧ್ರಪ್ರದೇಶ ಸರ್ಕಾರ ಸಮ್ಮತಿಸಿದೆ. ಆದರೆ, ವಿಶಾಖಪಟ್ಟಣ ಮತ್ತು ಅನಕಾಪಲ್ಲಿ ಜಿಲ್ಲೆಗಳಲ್ಲಿ ತೀವ್ರವಾದ ನೀರಿನ ಸಮಸ್ಯೆ ಇದ್ದು, ಡೇಟಾ ಸೆಂಟರ್‌ಗಳಿಂದ ಅದು ಉಲ್ಬಣಿಸಲಿದೆ ಎಂದು ಹೋರಾಟಗಾರರು ಆತಂಕ ವ್ಯಕ್ತಪಡಿಸಿದ್ದಾರೆ. ಜತೆಗೆ, ಡೇಟಾ ಸೆಂಟರ್‌ಗಳಿಗೆ ಅನುಮತಿ ನೀಡುವಾಗ ಪರಿಸರ ಪರಿಣಾಮ ಅಧ್ಯಯನ ಮಾಡದೇ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎನ್ನುವ ಆರೋಪವೂ ಕೇಳಿಬಂದಿದೆ. ಯೋಜನೆ ವಿರುದ್ಧ ರೈತರು, ಸಾಮಾಜಿಕ ಕಾರ್ಯಕರ್ತರು ಸಂಘಟಿತ ಹೋರಾಟ ನಡೆಸುತ್ತಿದ್ದಾರೆ.

ಎಐ ಡೇಟಾ ಸೆಂಟರ್‌ಗಳನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಮತ್ತು ಹಲವು ರಾಜ್ಯ ಸರ್ಕಾರಗಳು ಭಾರಿ ಆಸಕ್ತಿ ತೋರುತ್ತಿದ್ದು, ಸಬ್ಸಿಡಿ ದರದಲ್ಲಿ ನೀರು, ಭೂಮಿ, ವಿದ್ಯುತ್ ನೀಡುತ್ತಿವೆ. ಆದರೆ, ಅವುಗಳಿಂದ ತಮ್ಮ ಜೀವ ಮತ್ತು ಜೀವನಕ್ಕೆ ಕುತ್ತುಗಳಿದ್ದು, ಇವು ವಿನಾಶಕಾರಿ ಯೋಜನೆಗಳು ಎನ್ನುವುದು ಸ್ಥಳೀಯರ ದೂರು.

**ಆಧಾರ:** ದ ಎನ್ವಿರಾನ್‌ಮೆಂಟ್ ರಿಪೋರ್ಟಿಂಗ್ ಕಲೆಕ್ಟಿವ್, ದೌನ್ ಟು ಅರ್ಥ್, ದ ವಾಲ್ ಸ್ಟ್ರೀಟ್ ಜರ್ನಲ್, ಯುಎನ್‌ಇಪಿ, ಎನ್ವಿರಾನ್‌ಮೆಂಟ್ ಆ್ಯಂಡ್ ಎನರ್ಜಿ ಸ್ಟಡಿ ಇನ್‌ಸ್ಟಿಟ್ಯೂಟ್



## ಹೆಚ್ಚು ವಿದ್ಯುತ್ ಬಳಕೆ

- ಇಂಟರ್‌ನೆಟ್ ಬಳಕೆ ಹೆಚ್ಚಾಗಿರುವುದು, ಅತ್ಯಾಧುನಿಕ ತಂತ್ರಜ್ಞಾನಗಳ ಅಭಿವೃದ್ಧಿ, ಎಐ ಬಳಕೆ ಹೆಚ್ಚಾಗಿರುವುದರಿಂದ ಡೇಟಾ ಸೆಂಟರ್‌ಗಳ ವಿದ್ಯುತ್ ಬೇಡಿಕೆ ಗಣನೀಯವಾಗಿ ಹೆಚ್ಚಿದೆ
- ಸಾಮಾನ್ಯ ವಾಣಿಜ್ಯ ಉದ್ದೇಶದ ಕಚೇರಿಯು ಬಳಸುವುದಕ್ಕಿಂತ 50 ಪಟ್ಟು ಹೆಚ್ಚು ವಿದ್ಯುತ್ ಅನ್ನು ಡೇಟಾ ಸೆಂಟರ್‌ಗಳು ಉಪಯೋಗಿಸುತ್ತವೆ
- ಡೇಟಾ ಸೆಂಟರ್‌ಗಳು ಒಟ್ಟಾಗಿ ಬಳಸುವ ವಿದ್ಯುತ್‌ನಲ್ಲಿ, ದತ್ತಾಂಶಗಳನ್ನು ಸಂಗ್ರಹಿಸುವ, ನಿರ್ವಹಿಸುವ ಸರ್ವರ್‌ಗಳ ಸೆಂಟ್ರಲ್ ಪ್ರೊಸೆಸಿಂಗ್ ಯೂನಿಟ್‌ಗಳು (ಸಿಪಿಯು) ಮತ್ತು ಗ್ರಾಫಿಕ್ಸ್ ಪ್ರೊಸೆಸಿಂಗ್ ಯೂನಿಟ್‌ಗಳು (ಜಿಪಿಯುಗಳು) ಶೇ 60ರಷ್ಟನ್ನು ಬಳಸುತ್ತವೆ
- ಕೇಂದ್ರೀಕೃತ ದತ್ತಾಂಶ ಸಂಗ್ರಹ, ಬ್ಯಾಕ್‌ಅಪ್ ವ್ಯವಸ್ಥೆಗೆ ಶೇ 5ರಷ್ಟು, ನೆಟ್‌ವರ್ಕಿಂಗ್ ಸಲಕರಣೆಗಳ ಸಂಪರ್ಕಕ್ಕಾಗಿ ಶೇ 5ರಷ್ಟು, ತಂಪಾಗಿಸುವ ವ್ಯವಸ್ಥೆಗೆ ಶೇ 7ರಷ್ಟು ವಿದ್ಯುತ್ ಬೇಕು
- ವಿದ್ಯುತ್ ಕೈಕೊಟ್ಟ ಸಂದರ್ಭದಲ್ಲೂ ನಿರಂತರವಾಗಿ ವಿದ್ಯುತ್ ಪೂರೈಸುವ ಅತ್ಯಂತ ಪ್ರಬಲ ಬ್ಯಾಟರಿಗಳು (ಯುಪಿಎಸ್) ಅತ್ಯಂತ ಅವಶ್ಯಕ. ಬ್ಯಾಕ್‌ಅಪ್ ವಿದ್ಯುತ್ ಜನರೇಟರ್ ವ್ಯವಸ್ಥೆಯೂ ಜೊತೆಗೆ ಬೇಕು
- ಡೇಟಾ ಸೆಂಟರ್‌ಗಳ ಕಟ್ಟಡ ಸೇರಿದಂತೆ ಇನ್ನಿತರ ಮೂಲಸೌಕರ್ಯಗಳಿಗೂ ವಿದ್ಯುತ್ ಅಗತ್ಯವಿದೆ
- ಈಗಿನ ಕಾಲದ ಅತ್ಯಾಧುನಿಕ ಡೇಟಾ ಸೆಂಟರ್‌ಗಳು ಅಂದಾಜು 415 ಟೆರಾವಾಟ್ ಗಂಟೆಗಳಷ್ಟು ವಿದ್ಯುತ್ ಬಳಸುತ್ತವೆ. (1 ಟೆರಾವಾಟ್ ಗಂಟೆ ಅಂದರೆ ಒಂದು ಲಕ್ಷ ವಾಟ್ ಗಂಟೆಗಳು. ಇದು, ಒಂದು ಗಿಗಾವಾಟ್‌ನಷ್ಟು ವಿದ್ಯುತ್ 1,000 ಗಂಟೆಗಳವರೆಗೆ ನಿರಂತರವಾಗಿ ಪೂರೈಕೆ ಮಾಡುವುದಕ್ಕೆ ಸಮ). 2024ರಲ್ಲಿ ಈ ಸೆಂಟರ್‌ಗಳ ವಿದ್ಯುತ್ ಬಳಕೆ ಜಾಗತಿಕ ಬಳಕೆಯ ಶೇ 1.5ರಷ್ಟಿತ್ತು.
- ಡೇಟಾ ಸೆಂಟರ್‌ಗಳ ವಿದ್ಯುತ್ ಬಳಕೆ ಕಳೆದ ಐದು ವರ್ಷಗಳಲ್ಲಿ ಪ್ರತಿ ವರ್ಷಕ್ಕೆ ಶೇ 12ರಷ್ಟು ಹೆಚ್ಚಾಗಿದೆ
- 2030ರ ವೇಳೆಗೆ ಈ ಕೇಂದ್ರಗಳ ವಿದ್ಯುತ್ ಬಳಕೆ ಈಗಿನದ್ದಕ್ಕಿಂತ ದುಪ್ಪಟ್ಟಾಗಲಿದೆ. 945 ಟೆರಾವಾಟ್ ಗಂಟೆಗಳಿಗೆ ಏರಲಿದೆ. ಅಂದರೆ, ಜಾಗತಿಕ ಬಳಕೆಯ ಶೇ 3ಕ್ಕೆ ಹೆಚ್ಚಲಿದೆ



## ಬಕಾಸುರ ದಾಹ

- ಡೇಟಾ ಸೆಂಟರ್‌ಗಳಲ್ಲಿರುವ ಸರ್ವರ್‌ಗಳನ್ನು ಸದಾ ತಂಪಾಗಿರಿಸಲು ನೀರಿನ ಅಗತ್ಯವಿದೆ
- ಮಧ್ಯಮ ಗಾತ್ರದ ಡೇಟಾ ಸೆಂಟರ್‌ಗಳು ವಾರ್ಷಿಕವಾಗಿ ಅಂದಾಜು 41.64 ಕೋಟಿ ಲೀಟರ್‌ಗಳಷ್ಟು ನೀರನ್ನು ಬಳಸುತ್ತವೆ. ಇದು 1,000 ಕುಟುಂಬಗಳು ವಾರ್ಷಿಕವಾಗಿ ಬಳಸುವ ನೀರಿನ ಪ್ರಮಾಣಕ್ಕೆ ಸಮ
- ದೊಡ್ಡ ಡೇಟಾ ಸೆಂಟರ್‌ಗಳು ದಿನವೊಂದಕ್ಕೆ 1.89 ಕೋಟಿ ಲೀಟರ್ ನೀರು ಬಳಸುತ್ತವೆ. ಇದು ಪಟ್ಟಣವೊಂದರಲ್ಲಿ 10 ಸಾವಿರದಿಂದ 50 ಸಾವಿರದಷ್ಟು ಜನಸಂಖ್ಯೆ ಬಳಸುವ ನೀರಿಗೆ ಸಮ
- ಅಮೆರಿಕ ಒಂದರಲ್ಲೇ 5,400ಕ್ಕೂ ಹೆಚ್ಚು ಡೇಟಾ ಸೆಂಟರ್‌ಗಳಿದ್ದು, ಪ್ರತಿ ದಿನ ಕೋಟ್ಯಂತರ ಲೀಟರ್ ನೀರು ಅವುಗಳ ಕಾರ್ಯನಿರ್ವಹಣೆಗೆ ಬೇಕು. 2021ರ ಅಂಕಿ ಅಂಶಗಳ ಪ್ರಕಾರ, ಅಲ್ಲಿನ ಡೇಟಾ ಸೆಂಟರ್‌ಗಳು 61,960 ಕೋಟಿ ಲೀಟರ್ ನೀರನ್ನು ಬಳಸಿದ್ದವು
- ಎಐ ತಂತ್ರಜ್ಞಾನ ಪ್ರವರ್ಧಮಾನಕ್ಕೆ ಬಂದ ನಂತರ ಡೇಟಾ ಸೆಂಟರ್‌ಗಳು ವಿಸ್ತಾರಗೊಂಡಿವೆ. ಹೀಗಾಗಿ ನೀರಿನ ಬಳಕೆ ಹೆಚ್ಚಿದೆ. ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ವಿಜ್ಞಾನಿಗಳು ನಡೆಸಿರುವ ಅಧ್ಯಯನದ ಪ್ರಕಾರ, ಎಐ ಟೂಲ್‌ನಲ್ಲಿ 100 ಪದಗಳಲ್ಲಿ ಕೇಳುವ ಒಂದು ಪ್ರಶ್ನೆಗೆ ಎಐ ಉತ್ತರಿಸುವಾಗ ಕನಿಷ್ಠ ಅರ್ಧ ಬಾಟಲಿ ನೀರನ್ನು ಬಳಸುತ್ತದೆ
- ಚಾಟ್ ಜಿಪಿಟಿ, ಮೆಟಾ ಎಐ ಸೇರಿದಂತೆ ಜಗತ್ತಿನಲ್ಲಿರುವ ವಿವಿಧ ಚಾಟ್‌ಬಾಟ್‌ಗಳಲ್ಲಿ ಬಳಕೆದಾರರು ಪ್ರತಿ ನಿಮಿಷಕ್ಕೆ ನೂರಾರು ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ. ಹೀಗಿರುವಾಗ ಡೇಟಾ ಸೆಂಟರ್‌ಗಳು ದಿನದ 24 ಗಂಟೆಯೂ ಕೆಲಸ ಮಾಡಬೇಕಾಗುತ್ತವೆ. ನಿರಂತರ ಕಾರ್ಯಾಚರಣೆಯಿಂದ ಸರ್ವರ್‌ಗಳು ಬಿಸಿಯಾಗುತ್ತವೆ. ಇದನ್ನು ತಪ್ಪಿಸಲು ಅವುಗಳನ್ನು ತಂಪಾಗಿಸುವ (ಕೂಲಿಂಗ್) ವ್ಯವಸ್ಥೆ ಅತ್ಯಗತ್ಯ, ಇದಕ್ಕೆ ಭಾರಿ ಪ್ರಮಾಣದಲ್ಲಿ ನೀರು ಬೇಕು

# ಸಹಕಾರಿ ವಿಮಾ ಕಂಪನಿ: ಶಾ ಘೋಷಣೆ

## ಸಹಕಾರ ಸಂಘಗಳ ವಹಿವಾಟನ್ನು ಹೊಸ ವಲಯಗಳಿಗೆ ವಿಸ್ತರಿಸುವ ಉದ್ದೇಶ

ನವದೆಹಲಿ (ಪಿಟಿಐ): ದೇಶದಲ್ಲಿ ಸಹಕಾರ ವಲಯವು ಹೆಚ್ಚು ವಿಸ್ತರಿಸಬೇಕು ಎಂಬ ಉದ್ದೇಶದಿಂದ ಸಹಕಾರಿ ಜೀವ ವಿಮಾ ಕಂಪನಿ ಯೊಂದನ್ನು ಆರಂಭಿಸಲಾಗುತ್ತದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ.

ಸಹಕಾರ ತತ್ತ್ವದ ಆಧಾರದಲ್ಲಿ ಜನಪ್ರಿಯವಾಗಿರುವ 'ಭಾರತ್ ಟ್ಯಾಕ್ಸಿ' ಸೇವೆಯನ್ನು ಮುಂದಿನ ಎರಡು ವರ್ಷಗಳಲ್ಲಿ 500 ನಗರಗಳಿಗೆ ವಿಸ್ತರಿಸಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಸಹಕಾರ ಸಚಿವಾಲಯದ ಐದನೆಯ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಈ ಸಚಿವಾಲಯದ ಸ್ಥಾಪನೆಯು ದೇಶದಲ್ಲಿ ಸಹಕಾರ ಚಳವಳಿಗೆ ಹೊಸ ಜೀವ ನೀಡಿದೆ ಎಂದಿದ್ದಾರೆ. ಸಹಕಾರ ವಲಯವನ್ನು ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ನಿರ್ಲಕ್ಷಿಸಲಾಗಿತ್ತು ಎಂದು ದೂರಿದ್ದಾರೆ.

ದೇಶದಲ್ಲಿ ಅಂದಾಜು 8.5 ಲಕ್ಷ ಸಹಕಾರ ಸಂಘಗಳು ಇವೆ, 30 ಕೋಟಿಗೂ ಹೆಚ್ಚು ಸದಸ್ಯರಿದ್ದಾರೆ.

'ನಾವು ಸಹಕಾರ ವಲಯದಲ್ಲಿ ಆರಂಭಿಸಲಿರುವ ಜೀವ ವಿಮಾ ಕಂಪನಿಯು ವಿಮಾ ವಲಯದಲ್ಲಿ ಸಹಕಾರ ಸಂಘಗಳ ಬೆಳವಣಿಗೆಗೆ ನೆರವಾಗಲಿದೆ' ಎಂದು ಶಾ ಅವರು ಹೇಳಿದ್ದಾರೆ. ದೇಶದಲ್ಲಿ ಈಗ 26 ಜೀವ ವಿಮಾ ಕಂಪನಿಗಳು ಇವೆ.



**ನಗರ ಸಹಕಾರ ಬ್ಯಾಂಕ್‌ಗಳ ನಿವ್ವಳ ಲಾಭವು ಸರಿಸುಮಾರು ದುಪ್ಪಟ್ಟಾಗಿದೆ. ಒಟ್ಟು ಎನ್‌ಪಿಎ ಪ್ರಮಾಣವು ಶೇ 12.8 ಇದ್ದಿದ್ದು ಶೇ 6.2ಕ್ಕೆ ತಗ್ಗಿದೆ**

**ಅಮಿತ್ ಶಾ,** ಕೇಂದ್ರ ಸಹಕಾರ ಸಚಿವ

ಸಹಕಾರ ಸಂಘಗಳು ಹೈನುಗಾರಿಕೆ, ಸಕ್ಕರೆ, ರಸಗೊಬ್ಬರ ಮತ್ತು ಬ್ಯಾಂಕಿಂಗ್ ವಹಿವಾಟು ಮಾತ್ರವೇ ಅಲ್ಲದೆ ಹೊಸದಾಗಿ ಹಲವು ವಲಯಗಳನ್ನು ಪ್ರವೇಶಿಸಿವೆ ಎಂದು ಶಾ ಹೇಳಿದ್ದಾರೆ. ಕೃಷಿ ಸಾಲಗಳಲ್ಲಿ ಶೇ 25ರಷ್ಟು ಪಾಲು, ರಸಗೊಬ್ಬರ ವಿತರಣೆಯಲ್ಲಿ ಶೇ 35ರಷ್ಟು ಪಾಲು, ಸಕ್ಕರೆ ಉತ್ಪಾದನೆಯಲ್ಲಿ ಶೇ 31ರಷ್ಟು ಪಾಲನ್ನು ಸಹಕಾರ ಸಂಘಗಳು ಹೊಂದಿವೆ ಎಂದು ತಿಳಿಸಿದ್ದಾರೆ.

ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು 25ಕ್ಕೂ ಹೆಚ್ಚು ಬಗೆಯ ವಹಿವಾಟುಗಳಲ್ಲಿ ತೊಡಗುವುದಕ್ಕೆ ಅವಕಾಶ ಕಲ್ಪಿಸುವ ಮಾದರಿ ಉಪನಿಯಮಗಳಿಗೆ ಎಲ್ಲ ರಾಜ್ಯಗಳು ಒಪ್ಪಿಗೆ ನೀಡಿವೆ ಎಂದು ಮಾಹಿತಿ ನೀಡಿದ್ದಾರೆ. ಗುಜರಾತ್‌ನ ಆನಂದ್‌ನಲ್ಲಿ 'ತ್ರಿಭುವನ ಸಹಕಾರ ವಿಶ್ವವಿದ್ಯಾಲಯ' ಸ್ಥಾಪಿಸಿ, ಈ ವಲಯಕ್ಕೆ ಅಗತ್ಯವಿರುವ ಮಾನವ ಸಂಪನ್ಮೂಲ ಒದಗಿಸಲಾಗುತ್ತದೆ ಎಂದಿದ್ದಾರೆ.

ಪ್ರಾಥಮಿಕ ಕೃಷಿ ಪತ್ತಿನ ಸಂಘಗಳು ರಿಟೇಲ್ ವಹಿವಾಟು, ದಾಸ್ತಾನು, ಆರೋಗ್ಯಸೇವೆ, ಇಂಧನ, ಡಿಜಿಟಲ್ ಸೇವಾ ವಹಿವಾಟುಗಳಲ್ಲಿ ತೊಡಗಲು ಅವಕಾಶ ಇದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ನಗರ ಸಹಕಾರ ಬ್ಯಾಂಕ್‌ಗಳು, ಜಿಲ್ಲಾ ಸಹಕಾರ ಬ್ಯಾಂಕ್‌ಗಳು ನಿಧಾನವಾಗಿ ಪ್ರಗತಿ ಹೊಂದುತ್ತಿವೆ. ಜಿಲ್ಲಾ ಸಹಕಾರ ಬ್ಯಾಂಕ್‌ಗಳ ಒಟ್ಟು ವಹಿವಾಟು ಹಿಂದೆ ₹19.6 ಲಕ್ಷ ಕೋಟಿ ಇದ್ದಿದ್ದು ಈಗ ₹25 ಲಕ್ಷ ಕೋಟಿ ದಾಟಿದೆ ಎಂದು ತಿಳಿಸಿದ್ದಾರೆ.

# 11ಕ್ಕೆ 'ಮಹೇಂದ್ರಗಿರಿ' ನೌಕಾಪಡೆಗೆ

ನವದೆಹಲಿ (ಪಿಟಿಐ): ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ ಭಾರತದಲ್ಲಿಯೇ ನಿರ್ಮಾಣಗೊಂಡ 'ಮಹೇಂದ್ರಗಿರಿ' ಯುದ್ಧನೌಕೆಯು ಇದೇ ಮಾರ್ಚ್ 11ರಂದು ತಮಿಳುನಾಡಿನ ವಿಶಾಖಪಟ್ಟಣದಲ್ಲಿ ನೌಕಾಪಡೆಗೆ ಸೇರಲಿದೆ.

ಭಾರತೀಯ ನೌಕಾಪಡೆಯ ವಾರ್‌ಶಿಪ್ ಡಿಸೈನ್ ಬ್ಯೂರೊ ಈ ಯುದ್ಧನೌಕೆಯ ವಿನ್ಯಾಸ ಮಾಡಿದ್ದು, ಮುಂಬೈನ 'ಮಜಗಾಂವ ಡಾಕ್ ಶಿಪ್‌ಬಿಲ್ಡರ್ಸ್ ಲಿಮಿಟೆಡ್' (ಎಂಡಿಎಲ್) ಸಂಸ್ಥೆ ಇದನ್ನು ನಿರ್ಮಿಸಿದೆ. 'ಪ್ರಾಜೆಕ್ಟ್ 17ಎ' ಯೋಜನೆ ಅಡಿ ನಿರ್ಮಾಣಗೊಂಡ ಆರನೇ ಯುದ್ಧನೌಕೆ ಇದಾಗಿದೆ.

## 'ಬಹುಭಾಗ ಭಾರತದಲ್ಲಿ ನಿರ್ಮಾಣ'

"'ಮಹೇಂದ್ರಗಿರಿ' ಯುದ್ಧನೌಕೆಯು ಕೇಂದ್ರ ಸರ್ಕಾರದ ಆತ್ಮನಿರ್ಭರ ಯೋಜನೆಗೆ ಉತ್ತಮ ಉದಾಹರಣೆಯಾಗಿದೆ. ಈ ಯುದ್ಧನೌಕೆಯ ಶೇ 75ರಷ್ಟು ಭಾರತದಲ್ಲಿಯೇ ನಿರ್ಮಾಣವಾಗಿದೆ. ಭಾರತದ ಸುಮಾರು 200 ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, ಸುಮಾರು 4 ಸಾವಿರ ಸಿಬ್ಬಂದಿ ನೇರವಾಗಿ ಮತ್ತು 10 ಸಾವಿರ ಸಿಬ್ಬಂದಿ ಪರೋಕ್ಷವಾಗಿ ಈ ನಿರ್ಮಾಣ ಕಾರ್ಯದಲ್ಲಿ ಕೆಲಸ ಮಾಡಿದ್ದಾರೆ. ಪೂರ್ವದ ಮಹೇಂದ್ರಗಿರಿ ಪರ್ವತ ಶ್ರೇಣಿ ಹೆಸರನ್ನು ಈ ಯುದ್ಧನೌಕೆಗೆ ಇಡಲಾಗಿದೆ" ಎಂದು ನೌಕಾ ಪಡೆ ಹೇಳಿದೆ.

### ವೈಶಿಷ್ಟ್ಯಗಳೇನು?

- ಪ್ರಾಜೆಕ್ಟ್ 17ರ ಹೋಲಿಕೆಯಲ್ಲಿ ಪ್ರಾಜೆಕ್ಟ್ 17ಎ ಅಡಿಯಲ್ಲಿ ನಿರ್ಮಾಣಗೊಂಡ ಈ ಯುದ್ಧನೌಕೆಯಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿವೆ. ಜೊತೆಗೆ, ಅತ್ಯಾಧುನಿಕವಾದ ಸೆನ್ಸರ್ ಕಣ್ಗಾವಲು ವ್ಯವಸ್ಥೆ ಇದೆ
- ವಾಯು ದಾಳಿ, ನೆಲಮಟ್ಟದಿಂದ ನಡೆಸಲಾಗುವ ದಾಳಿಗಳಿಗೆ ಮತ್ತು ಜಲಾಂತರ್ಗಾಮಿಗಳಿಗೆ ಸಶಕ್ತವಾಗಿ ತಡೆಯೊಡ್ಡಬಲ್ಲ ಸಾಮರ್ಥ್ಯವಿದೆ. ನೌಕೆಯಿಂದ ಭೂಮಿಗೆ ಚಿಮ್ಮುವ ಮತ್ತು ಆಕಾಶಕ್ಕೆ ಹಾರುವ ಅತ್ಯಾಧುನಿಕ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ಈ ಯುದ್ಧನೌಕೆ ಹೊಂದಿದೆ
- ಡೀಸೆಲ್ ಮತ್ತು ಅನಿಲ- ಎರಡೂ ಇಂಧನ ವ್ಯವಸ್ಥೆಯಿಂದ ಚಲಿಸುವ ನೌಕೆ ಇದಾಗಿದೆ. ಅತ್ಯಂತ ವೇಗವಾಗಿ ಕಾರ್ಯನಿರ್ವಹಿಸುವ ಸಾಮರ್ಥ್ಯವೂ ಈ ನೌಕೆಗೆ ಇದೆ
- ಅತ್ಯಂತ ದೀರ್ಘಕಾಲದವರೆಗೂ ಸಮುದ್ರದಲ್ಲಿ ಕಾರ್ಯನಿರ್ವಹಿಸುವ ಸಾಮರ್ಥ್ಯವಿದೆ. ವಿಪತ್ತಿನ ಸಂದರ್ಭಗಳಲ್ಲಿ ಮಾನವೀಯ ಸಹಕಾರ ನೀಡಲೂ ಈ ಯುದ್ಧನೌಕೆ ಸಮರ್ಥವಾಗಿದೆ

ಮಹೇಂದ್ರಗಿರಿಯು ಭಾರತೀಯ ನೌಕಾ ಪಡೆಯ ಶಕ್ತಿಯನ್ನು ಮತ್ತಷ್ಟು ಹೆಚ್ಚಿಸಲಿದೆ. ದೇಶದ ಕಡಲು ಕಣ್ಗಾವಲು ವ್ಯವಸ್ಥೆಗೂ ಹೆಚ್ಚಿನ ಬಲ ತುಂಬಲಿದೆ. ಹಿಂದೂ ಮಹಾಸಾಗರ-ಪೆಸಿಫಿಕ್ ಸಮುದ್ರದಲ್ಲಿ ಸ್ಥಿರತೆ ಸಾಧಿಸಲು ನೆರವಾಗಲಿದೆ

**ಭಾರತೀಯ ನೌಕಾಪಡೆ**



ಚಿತ್ರ: ಭಾರತೀಯ ನೌಕಾಪಡೆ ವೆಬ್‌ಸೈಟ್

Dr. Rajkumar IAS/KAS Academy

## ❖ ವಯನಾಡ್‌ನಲ್ಲಿ ಭಾರಿ ಮಳೆ: ಐವರು ನಾಪತ್ತೆ, ಶೋಧ ತೀವ್ರ: ಕೆಸರಿನ ಪ್ರವಾಹ: ಮೂರು ಸಾವು

- ವಯನಾಡ್ ಜಿಲ್ಲೆಯ ಮೇಪ್ಪಾಡಿ ಪಂಚಾಯಿತಿ ವ್ಯಾಪ್ತಿಯಲ್ಲಿ ಭಾರಿ ಮಳೆ ಸುರಿದಿದ್ದು, ಕಳ್ಳಾಡಿ ಬಳಿ ನಿರ್ಮಾಣ ಹಂತದಲ್ಲಿರುವ ಸುರಂಗದ ಮೇಲೆ ಮಂಗಳವಾರ ಮಣ್ಣು ಕುಸಿದ ಪರಿಣಾಮ ಮೂವರು ಮೃತಪಟ್ಟಿದ್ದಾರೆ. ಐವರು ಅವಶೇಷಗಳಡಿ ಸಿಲುಕಿಕೊಂಡಿದ್ದಾರೆ.
- ವಿವಿಧ ಸಂಸ್ಥೆಗಳು ಹಾಗೂ ಎನ್‌ಡಿಆರ್‌ಎಫ್ ಸಿಬ್ಬಂದಿ ನಾಪತ್ತೆಯಾಗಿರುವವರ ಶೋಧಕ್ಕಾಗಿ ಕಾರ್ಯಾಚರಣೆ ಕೈಗೊಂಡಿದ್ದಾರೆ.
- ಗಾಯಾಳುಗಳ ಪೈಕಿ ಏಳು ಜನರ ಸ್ಥಿತಿ ಗಂಭೀರವಾಗಿದ್ದು, ವಯನಾಡ್‌ನ ಖಾಸಗಿ ಆಸ್ಪತ್ರೆಯೊಂದರ ತೀವ್ರ ನಿಗಾ ಘಟಕದಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ಮೇಪ್ಪಾಡಿ ಸಬ್‌ಇನ್‌ಸ್ಪೆಕ್ಟರ್ ಸಂತೋಷ್ ಕುಮಾರ್ ಕೂಡ ಗಾಯಗೊಂಡವರಲ್ಲಿ ಸೇರಿದ್ದಾರೆ.ಸುರಂಗ ನಿರ್ಮಾಣಕ್ಕಾಗಿ ಭಾರಿ ಪ್ರಮಾಣದಲ್ಲಿ ಮಣ್ಣು ಅಗೆದು ಹಾಕಲಾಗಿತ್ತು. ಮಳೆಯಿಂದಾಗಿ ಈ ಮಣ್ಣು ಕುಸಿದಿದೆ ಎಂದು ಹೇಳಲಾಗುತ್ತಿದೆ.
- ಸಾವಿಗೀಡಾದವರನ್ನು ವಲಸೆ ಕಾರ್ಮಿಕರಾದ ಮಧ್ಯಪ್ರದೇಶದ ಚಂದ್ರಬಾನ್, ಬಿಹಾರದ ಬಿಕಾಶ್ ಕುಮಾರ್ ಮತ್ತು ಜಾರ್ಖಂಡ್‌ನ ಅನ್ನೋಲ್ ಎಂದು ಗುರುತಿಸಲಾಗಿದೆ.
- ಕೋಯಿಕ್ಕೋಡ್ ಹಾಗೂ ವಯನಾಡ್ ಸಂಪರ್ಕಿಸುವ ಈ ಸುರಂಗ ಮಾರ್ಗದ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಕಲ್ಲಾಡಿ ಬಳಿ ಇರುವ ಸುರಂಗದ ಹತ್ತಿರ ಮೀನಾಕ್ಷಿ ಸೇತುವೆಯೂ ಇದ್ದು, ಇಲ್ಲಿಯೇ ಮಣ್ಣು ಕುಸಿದು ಈ ಅವಘಡ ಸಂಭವಿಸಿದೆ.
- 2024ರಲ್ಲಿ ಈ ಸೇತುವೆಯಿಂದ ಐದು ಕಿ.ಮೀ. ದೂರವಿರುವ ಚೂರಲ್‌ಮಲಾ ದಲ್ಲಿ ಭೂಕುಸಿತವಾಗಿತ್ತು. ಈ ಘಟನೆಯಲ್ಲಿ 250ಕ್ಕೂ ಹೆಚ್ಚು ಜನ ಮೃತಪಟ್ಟಿದ್ದರು.
- ಸೋಮವಾರ ಭಾರಿ ಮಳೆ ಸುರಿದಿದ್ದರಿಂದ, ಈ ಸೇತುವೆ ಬಳಿ ಸಂಗ್ರಹವಾಗಿದ್ದ ಮಣ್ಣಿನ ರಾಶಿ ಹಠಾತ್ತನೆ ಕುಸಿದಿದೆ. ಮಣ್ಣಿನ ರಾಶಿ ಕುಸಿದ ರಭಸಕ್ಕೆ ಮರಗಳು ನೆಲಕ್ಕುರುಳುವ ಜೊತೆಗೆ, ನಿರ್ಮಾಣ ಸ್ಥಳದಲ್ಲಿ ಅಳವಡಿಸಿದ್ದ ತಡೆಗೋಡೆಗಳು ಕೊಚ್ಚಿ ಹೋದ ದೃಶ್ಯಗಳು ವಿಡಿಯೊದಲ್ಲಿ ಸೆರೆಯಾಗಿವೆ.
- ಮಣ್ಣಿನಲ್ಲಿ ಸಿಲುಕಿದ್ದ ಕೆಲವರು ಕೆಲ ದೂರದವರೆಗೆ ಕೊಚ್ಚಿಕೊಂಡು ಹೋಗಿದ್ದರೂ, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಟ್ಯಾಂಕರ್ ಲಾರಿ ಸೇರಿ ಹಲವು ವಾಹನಗಳು ಅವಶೇಷಗಳೊಂದಿಗೆ ಕೊಚ್ಚಿ ಹೋಗಿವೆ. ಕಾರ್ಮಿಕರನ್ನು ಕರೆದುಕೊಂಡು ಬರುವ ಖಾಸಗಿ ಬಸ್‌ವೊಂದನ್ನು ಘಟನಾ ಸ್ಥಳದಲ್ಲಿ ನಿಲ್ಲಿಸಲಾಗಿತ್ತು. ಭೂಕುಸಿತದ ರಭಸಕ್ಕೆ ಬಸ್ ಹತ್ತಿರದ ನದಿಗೆ ಬಿದ್ದಿದೆ.

Dr. Rajkumar IAS/KAS Academy

# ‘ಜೀವನವೇ ಮುಗಿಯಿತು ಅನಿಸಿತ್ತು...’

## ಭೂಕುಸಿತದ ಭೀಕರ ಕ್ಷಣಗಳನ್ನು ನೆನಪಿಸಿಕೊಂಡ ಬದುಕುಳಿದವರು

ಪ್ರಜಾವಾಣಿ ವಾರ್ತೆ

ತಿರುವನಂತಪುರ: ‘ನಮ್ಮ ಕಥೆ ಮುಗಿಯಿತು ಎಂದೇ ನಾವು ಭಾವಿಸಿದ್ದೆವು. ಇದು ನಮ್ಮ ಪಾಲಿಗೆ ನಿಜವಾಗಿಯೂ ಪುನರ್ಜನ್ಮವೇ ಸರಿ...’

ಚಹಾ ತೋಟದಲ್ಲಿ ದುಡಿಯುವ ಮಹಿಳೆ, 37 ವರ್ಷದ ಕೂಡಮ್ಮಾಳ್ ಅವರ ಮಾತುಗಳಿವು.

ವಯನಾಡ್ ಸಮೀಪದ ಕಳ್ಳಾಡಿ ಬಳಿ ಮಂಗಳವಾರ ಸಂಭವಿಸಿದ ಮಣ್ಣು ಕುಸಿತದ ಘಟನೆಯಲ್ಲಿ ಕೂದಲೆಳೆ ಅಂತರದಲ್ಲಿ ಬದುಕುಳಿದವರ ಪೈಕಿ ಕೂಡಮ್ಮಾಳ್ ಕೂಡ ಒಬ್ಬರು.

ಘಟನಾ ಸ್ಥಳದ ಬಳಿ ಇದ್ದ ಟ್ಯಾಂಕರ್ ಲಾರಿಯೊಂದಿಗೆ ಹಲವರು ಕುಸಿದ ಮಣ್ಣಿನ ರಾಶಿಯೊಂದಿಗೆ ಕೊಚ್ಚಿ ಹೋಗುತ್ತಿರುವ ದೃಶ್ಯಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿವೆ.

ತಮಿಳುನಾಡು ಮೂಲದ ಕೂಡಮ್ಮಾಳ್, ಪತಿಯೊಂದಿಗೆ ಮೇಪ್ಪಾಡಿಗೆ ಹೊರಟಿದ್ದ ವೇಳೆ ಸಂಭವಿಸಿದ ಭೂಕುಸಿತ ಹಾಗೂ ಅದರಿಂದ ಪಾರಾದ ಕ್ಷಣಗಳನ್ನು ವಿವರಿಸುತ್ತಾರೆ.

‘ಮಳೆ ಕಾರಣದಿಂದ ಚಹಾ ತೋಟದಲ್ಲಿ ಈ ದಿನ ಕೆಲಸ ಇರಲಿಲ್ಲ. ಮನೆಗೆ ಬೇಕಾದ ವಸ್ತುಗಳ ಖರೀದಿಗಾಗಿ ನಾವು ಮೇಪ್ಪಾಡಿಗೆ ಹೊರಟಿದ್ದೆವು’ ಎಂದು ಕೂಡಮ್ಮಾಳ್ ಹೇಳುತ್ತಾರೆ.

‘ಏನೋ ಶಬ್ದ ಕೇಳಿದಂತಾಗಿ ಹಿಂತಿರುಗಿ ನೋಡಿದಾಗ ನಮಗೆ ಗಾಬರಿಯಾಯಿತು. ಮಣ್ಣು ಮಿಶ್ರಿತ ನೀರು ರಭಸವಾಗಿ ನಮ್ಮತ್ತ ಹರಿದು ಬರುತ್ತಿತ್ತು. ಕೂಡಲೇ ನಾವು ಓಡತೊಡಗಿದೆವು. ಕೆಲ ದೂರ ಕ್ರಮಿಸಿರಬಹುದಷ್ಟೆ, ಆಗ ನಾವು ಕೆಳಗೆ ಬಿದ್ದೆವು. ಇಲ್ಲಿಗೆ ನಮ್ಮ ಜೀವನವೇ ಮುಗಿದು ಹೋಯ್ತು ಎಂದು ಅನಿಸಿತು’ ಎಂದು ಪರಿಹಾರ ಕೇಂದ್ರದಲ್ಲಿ ಆಶ್ರಯ ಪಡೆದಿರುವ ಕೂಡಮ್ಮಾಳ್ ಹೇಳಿದರು.

‘ಸುರಂಗ ಮಾರ್ಗಕ್ಕಾಗಿ ಭೂಮಿಯನ್ನು ಅಗೆದು, ಮಣ್ಣನ್ನು ಒಂದೆಡೆ ಗುಡ್ಡೆ ಹಾಕಲಾಗಿತ್ತು. ಇದರಿಂದ ಅಪಾಯ ಇದ್ದೇ ಇದೆ ಎಂಬುದನ್ನು ನಿರ್ಮಾಣದ ಹೊಣೆ ಹೊತ್ತಿದ್ದ ಸಂಸ್ಥೆಗಳಿಗೆ ಹಲವು ಬಾರಿ ತಿಳಿಸಿದ್ದೆವು’ ಎಂದು ಸ್ಥಳೀಯರು ಹೇಳುತ್ತಾರೆ.

### ‘ಮಾನವನಿರ್ಮಿತ’ ಮತ್ತೊಂದು ವಿಪತ್ತಿಗೆ ನಲುಗಿದ ವಯನಾಡ್

ವಯನಾಡ್ ಜಿಲ್ಲೆಯ ಮೇಪ್ಪಾಡಿ ಸಮೀಪದ ಕಳ್ಳಾಡಿಯಲ್ಲಿ ನಿರ್ಮಾಣ ಹಂತದ ಸುರಂಗ ಮಾರ್ಗದಲ್ಲಿ ಭೂಕುಸಿತ ಉಂಟಾಗಿ ಹಲವರು ಮೃತಪಟ್ಟ ಘಟನೆಯು, ಸೂಕ್ಷ್ಮ ಪರಿಸರ ಹೊಂದಿರುವ ಈ ಪ್ರದೇಶದಲ್ಲಿ ಸಂಭವಿಸುತ್ತಿರುವ ‘ಮಾನವ ನಿರ್ಮಿತ ವಿಪತ್ತು’ಗಳತ್ತ ಮತ್ತೊಮ್ಮೆ ಬೊಟ್ಟು ಮಾಡಿದೆ.

8.1 ಕಿ.ಮೀ. ಉದ್ದದ ಈ ಸುರಂಗ ರಸ್ತೆಗೆ ಒಪ್ಪಿಗೆ ಕೊಟ್ಟಿರುವ ತಜ್ಞರ ಸಮಿತಿಗಳು, ಈ ಪ್ರದೇಶದಲ್ಲಿ ಎದುರಾಗಬಹುದಾದ ಅಪಾಯಗಳ ಬಗ್ಗೆಯೂ ಎಚ್ಚರಿಸಿದ್ದವು ಎಂಬುದು ಗಮನಾರ್ಹ.

‘ಉದ್ದೇಶಿತ ಸುರಂಗ ಮಾರ್ಗವು ಪರಿಸರ ದೃಷ್ಟಿಯಿಂದ ಅತ್ಯಂತ ಸೂಕ್ಷ್ಮವಾದ, ಭೂಕುಸಿತಗಳಿಗೆ ತುತ್ತಾಗಬಲ್ಲ ಪ್ರದೇಶದ ಮೂಲಕ ಹಾಯ್ದು ಹೋಗಲಿದೆ. ಈ ಪ್ರದೇಶದಲ್ಲಿ 2019 ಹಾಗೂ 2024ರಲ್ಲಿ ವಿನಾಶಕಾರಿ ಭೂಕುಸಿತ ಸಂಭವಿಸಿದ್ದವು. ಹೀಗಾಗಿ ಸುರಂಗ ನಿರ್ಮಾಣ ವೇಳೆ ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು’ ಎಂದು ಕೇರಳಂನ ‘ರಾಜ್ಯ ಪರಿಸರ ಮೌಲ್ಯನಿರ್ಣಯ ಸಮಿತಿ’ (ಸಿಇಎಸಿ) ಕಳೆದ ಮಾರ್ಚ್‌ನಲ್ಲಿ ನೀಡಿದ್ದ ವರದಿಯಲ್ಲಿ ಹೇಳಿತ್ತು.

### ‘ದುರಂತ ತಪ್ಪಿಸಬಹುದಿತ್ತು’

ಗೃಹ ಸಚಿವ ರಮೇಶ್ ಚೆನ್ನಿತ್ತಲ ಅವರು ಸಹ ಈ ಅವಘಡವನ್ನು ‘ಮಾನವ ನಿರ್ಮಿತ ವಿಪತ್ತು’ ಎಂದು ಕರೆದಿದ್ದಾರೆ.

‘ಜಿಲ್ಲಾಡಳಿತ ನೀಡಿದ ನಿರ್ದೇಶನದಂತೆ, ನಿರ್ಮಾಣ ಗುತ್ತಿಗೆ ಕಂಪನಿಯು ಮಣ್ಣಿನ ರಾಶಿ ತೆರವು ಮಾಡಿದ್ದಲ್ಲಿ ಈ ದುರಂತ ತಪ್ಪಿಸಬಹುದಿತ್ತು. ಮಣ್ಣನ್ನು ಕಾಮಗಾರಿ ಸ್ಥಳದಿಂದ ಯಾಕೆ ತೆರವು ಮಾಡಿರಲಿಲ್ಲ ಎಂಬ ಬಗ್ಗೆ ಗುತ್ತಿಗೆದಾರ ಕಂಪನಿ ವಿವರಣೆ ನೀಡಬೇಕು’ ಎಂದರು.



ದುರಂತ ನಡೆದ ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದ ಸಿಬ್ಬಂದಿ –ಪಿಟಿಐ ಚಿತ್ರ

### ಪ್ರಮುಖ ಅಂಶಗಳು

- ಮಂಗಳವಾರ ಬೆಳಿಗ್ಗೆ ಕೊನೆಗೊಂಡ ಹಿಂದಿನ 24 ಗಂಟೆಯಲ್ಲಿ ವಯನಾಡ್ ಜಿಲ್ಲೆಯಲ್ಲಿ 26.5 ಸೆಂ.ಮೀ. ನಷ್ಟು ಮಳೆ ಬಿದ್ದಿದೆ ಎಂದು ಜಿಲ್ಲಾಡಳಿತ ಹೇಳಿದೆ
- 8.11 ಕಿ.ಮೀ. ಉದ್ದದ ‘ಅವಳಿ ಸುರಂಗ ಮಾರ್ಗ’ ಯೋಜನೆಯಿಂದ ಪರಿಸರದ ಮೇಲೆ ಗಂಭೀರ ಪರಿಣಾಮವಾಗಲಿದೆ ಎಂದಿದ್ದ ತಜ್ಞರ ಸಮಿತಿ, ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಶಿಫಾರಸು ಮಾಡಿತ್ತು
- ಸೂಕ್ಷ್ಮ ಪರಿಸರ ಪ್ರದೇಶವಾದ್ದರಿಂದ ಈ ಸುರಂಗ ಮಾರ್ಗ ಯೋಜನೆ ಕೈಬಿಡಬೇಕು ಎಂದು ಕೋರಿ ಕೆಲ ಪರಿಸರವಾದಿಗಳು ನ್ಯಾಯಾಲಯದ ಮೆಟ್ಟಿಲೇರಿದ್ದರು. ತಜ್ಞರ ಸಮಿತಿ ಒಪ್ಪಿಗೆ ನೀಡಿದ್ದನ್ನು ಪರಿಗಣಿಸಿದ್ದ ನ್ಯಾಯಾಲಯ, ಯೋಜನೆಗೆ ತಡೆ ನೀಡಲು ನಿರಾಕರಿಸಿತ್ತು
- ಈ ಮೊದಲಿನ ಎಲ್‌ಡಿಎಫ್ ನೇತೃತ್ವದ ಸರ್ಕಾರ ಸುರಂಗ ಮಾರ್ಗ ನಿರ್ಮಾಣ ಯೋಜನೆಗೆ ಚಾಲನೆ ನೀಡಿತ್ತು. ಆಗಿನ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಕಳೆದ ವರ್ಷ ಆಗಸ್ಟ್ 31ರಂದು ಕಾಮಗಾರಿಗೆ ಚಾಲನೆ ನೀಡಿದ್ದರು
- 8.11 ಕಿ.ಮೀ ಉದ್ದದ ಈ ‘ಅವಳಿ ಸುರಂಗ ಮಾರ್ಗ’ ದೇಶದಲ್ಲಿಯೇ ಮೂರನೇ ಅತಿ ಉದ್ದದ ಸುರಂಗ ರಸ್ತೆಯಾಗಲಿದೆ. ಕರ್ನಾಟಕ ಮತ್ತು ಕೇರಳಂ ನಡುವೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ 766ರಲ್ಲಿನ ತಾಮರಶ್ಶೇರಿ ಘಾಟಿ ರಸ್ತೆಗೆ ಈ ಸುರಂಗ ಮಾರ್ಗ ಪರ್ಯಾಯವಾಗಲಿದೆ
- ವಯನಾಡ್ ಜಿಲ್ಲೆ ಮೇಪ್ಪಾಡಿ ಹಾಗೂ ಕೋಯಿಕ್ಕೋಡ್ ಜಿಲ್ಲೆಯ ಆನಕ್ಕಂಪೊಯಿಲ್ ನಡುವಿನ ಈ ಸುರಂಗವು ಪೂರ್ಣಗೊಂಡಲ್ಲಿ, ಎರಡೂ ಜಿಲ್ಲಾ ಕೇಂದ್ರಗಳ ನಡುವಿನ ಅಂತರ 30 ಕಿ.ಮೀ.ನಷ್ಟು ಕಡಿಮೆಯಾಗಲಿದ್ದು, ಪ್ರಯಾಣದ ಸಮಯದಲ್ಲಿ ಒಂದೂವರೆ ಗಂಟೆಯಷ್ಟು ಉಳಿಯಲಿದೆ

**ಭೂಕುಸಿತಕ್ಕೆ ಲೋಕೋಪಯೋಗಿ ಇಲಾಖೆಯನ್ನು ದೂರಬಾರದು. ಈ ಹಿಂದಿನ ಸರ್ಕಾರ ಕೈಗೊಂಡಿದ್ದ ತೀರ್ಮಾನದಂತೆ, ಕೊಂಕಣ ರೈಲ್ವೆ ನಿಗಮವು ಸುರಂಗ ಮಾರ್ಗ ನಿರ್ಮಾಣ ಯೋಜನೆಯನ್ನು ಅನುಷ್ಠಾನ ಮಾಡುತ್ತಿದೆ**

**ಪಿ.ಕೆ.ಬಶೀರ್,** ಕೇರಳಂ ಲೋಕೋಪಯೋಗಿ ಸಚಿವ

**ಕಾಮಗಾರಿ ಸ್ಥಳದಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಬಗ್ಗೆ ಕಳೆದ ಮೂರು ವಾರ ಸಭೆಗಳನ್ನು ನಡೆಸಲಾಗಿದ್ದು, ಪ್ರತಿಕೂಲ ಹವಾಮಾನವಿದ್ದಾಗ ಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸದಂತೆ ಸಚಿವರು ಸೂಚಿಸಿದ್ದರು. ಹೀಗಾಗಿ, ಯಾವ ಕಾರ್ಮಿಕರೂ ಇಲ್ಲಿ ಮಣ್ಣಿನಡಿ ಸಿಲುಕಿಲ್ಲ**

**ಅದೀಲಾ ಅಬ್ದುಲ್ಲಾ,** ಪಿಡಬ್ಲ್ಯುಡಿ ಕಾರ್ಯದರ್ಶಿ



▶ ಮಣ್ಣು ಕುಸಿದ ಸ್ಥಳದಲ್ಲಿ ನದಿಗೆ ಉರುಳಿದ ಬಸ್ –ಪಿಟಿಐ ಚಿತ್ರ

### ‘ಗುತ್ತಿಗೆದಾರರು ನಿರ್ದೇಶನ ಪಾಲಿಸಿಲ್ಲ’

‘ಕಾಮಗಾರಿ ಸ್ಥಳದಲ್ಲಿ ಸಂಗ್ರಹವಾಗಿರುವ ಭಾರಿ ಪ್ರಮಾಣದ ಮಣ್ಣನ್ನು ತೆಗೆದು ಹಾಕುವಂತೆ ಜಿಲ್ಲಾಡಳಿತ ಹಾಗೂ ವಿಪತ್ತು ನಿರ್ವಹಣಾ ಪ್ರಾಧಿಕಾರವು ಗುತ್ತಿಗೆದಾರರಿಗೆ ಜೂನ್ 20ರಂದು ನಿರ್ದೇಶನ ನೀಡಿತ್ತು. ಸುರಂಗ ನಿರ್ಮಾಣ ಮಾಡುತ್ತಿರುವ ಗುತ್ತಿಗೆದಾರರು ಈ ನಿರ್ದೇಶನಗಳ ಪಾಲನೆ ಮಾಡಿಲ್ಲ’ ಎಂದು ಮುಖ್ಯಮಂತ್ರಿ ವಿ.ಡಿ.ಸತೀಶನ್ ಹೇಳಿದ್ದಾರೆ.

‘ಮಳೆಯಾಗುವ ಕುರಿತು ಸಮರ್ಪಕ ಮುನ್ಸೂಚನೆ ನೀಡದಿರುವುದು ಮಣ್ಣು ಕುಸಿತವಾಗುವುದಕ್ಕೆ ಕಾರಣವಲ್ಲ. ಅಗೆದು ಹಾಕಿದ ಮಣ್ಣನ್ನು ಸಕಾಲದಲ್ಲಿ ತೆರವು ಮಾಡದೇ ಇರುವುದು ಅವಘಡಕ್ಕೆ ಕಾರಣ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

## ❖ ಕುಗ್ರಾಮಗಳ ಜನರ ಬದುಕಿಗೆ ದಾರಿ ತೋರಿದ್ದ ಗಿರೀಶ ಭಾರದ್ವಾಜ: 'ತೂಗುಸೇತುವೆ'ಗಳ ಶಿಲ್ಪಿ ಇನ್ನಿಲ್ಲ



ಗಿರೀಶ ಭಾರದ್ವಾಜ

- ನದಿ, ತೊರೆಗಳ ಪ್ರವಾಹದಿಂದಾಗಿ ಮಳೆಗಾಲದಲ್ಲಿ ಹೊರ ಜಗದ ಸಂಪರ್ಕವನ್ನೇ ಕಡಿದುಕೊಳ್ಳುತ್ತಿದ್ದ ನೂರಾರು ಕುಗ್ರಾಮಗಳ ಜನರ ಬದುಕಿಗೆ 'ತೂಗು ಸೇತುವೆ'ಗಳ ಮೂಲಕ ದಾರಿ ತೋರಿದ ಎಂಜಿನಿಯರ್, ಪದ್ಮಶ್ರೀ ಪುರಸ್ಕೃತ ಗಿರೀಶ ಭಾರದ್ವಾಜ (76) ಮಂಗಳವಾರ ನಸುಕಿನಲ್ಲಿ ಇಲ್ಲಿನ ಕೆ.ವಿ.ಜಿ. ಆಸ್ಪತ್ರೆಯಲ್ಲಿ ನಿಧನರಾದರು. ಅವರಿಗೆ ಪುತ್ರರಾದ ಸುದರ್ಶನ್, ಪತಂಜಲಿ ಹಾಗೂ ಪುತ್ರಿ ರಷ್ಯಾ ಇದ್ದಾರೆ.
- ಸುಳ್ಯ ತಾಲ್ಲೂಕಿನ ಆಲೆಟ್ಟಿ ಗ್ರಾಮದ ಅರಂಬೂರಿನ ಬಿ.ಕೃಷ್ಣಭಟ್-ಲಕ್ಷ್ಮಿ ಅಮ್ಮ ದಂಪತಿ ಪುತ್ರ ಗಿರೀಶ ಭಾರದ್ವಾಜ ಮೆಕ್ಯಾನಿಕಲ್ ಎಂಜಿನಿಯರಿಂಗ್ ಪದವೀಧರ. ವಿದ್ಯಾಭ್ಯಾಸದಬಳಿಕ ಕೃಷಿ ಯಂತ್ರೋಪಕರಣಗಳ ದುರಸ್ತಿ, ಫ್ಯಾಬ್ರಿಕೇಷನ್ ಕೆಲಸ ಮಾಡುತ್ತಾ ತಂದೆಗೆ ಕೃಷಿಯಲ್ಲೂ ಹೆಗಲು ನೀಡಿದ್ದರು. ಸುಳ್ಯದಲ್ಲಿ 'ನ್ಯಾಷನಲ್ ಎಂಜಿನಿಯರಿಂಗ್' ವರ್ಕ್‌ಶಾಪ್ ಆರಂಭಿಸಿದರು. ಅದೇ ಈಗ 'ಆಯಶಿಲ್ಪ' ಹೆಸರಿನಿಂದ ಜನಪ್ರಿಯವಾಗಿದೆ.
- ತೂಗು ಸೇತುವೆ ನಿರ್ಮಾಣಕ್ಕೆ ತಮ್ಮದೇ ಕಾರ್ಯ ವಿಧಾನ ಅಭಿವೃದ್ಧಿ ಪಡಿಸಿದ್ದರು. ಅವರ ಮಾರ್ಗದರ್ಶನ ದಲ್ಲಿ ನಿರ್ಮಾಣವಾಗಿರುವ 142 ತೂಗುಸೇತುವೆಗಳು ಅವರ ಕಾರ್ಯತತ್ಪರತೆಗೆ ಸಾಕ್ಷಿಯಾಗಿವೆ.
- ಕುಶಾಲನಗರದ ಕಾವೇರಿ ನಿಸರ್ಗ ಧಾಮದಲ್ಲಿ ಕಾವೇರಿ ನದಿಗೆ ನಿರ್ಮಿಸಿದ 55 ಮೀ ಉದ್ದದ ತೂಗುಸೇತುವೆ ಅವರ ಮೊದಲ ಕೊಡುಗೆ. ಬಳಿಕ ಹುಟ್ಟೂರು ಸುಳ್ಯದ ಅರಂಬೂರಿನಲ್ಲಿ ಪಯಸ್ವಿನಿ ನದಿಗೆ 87 ಮೀಟರ್‌ನ ತೂಗುಸೇತುವೆ ನಿರ್ಮಿಸಿದರು. ಬೆಳಗಾವಿ ಜಿಲ್ಲೆಯ ಹುಕ್ಕೇರಿಯಲ್ಲಿ 1999ರಲ್ಲಿ 290 ಮೀಟರ್ ಉದ್ದದ ಸೇತುವೆ ನಿರ್ಮಿಸುವುದರ ಜೊತೆಗೆ ಹೊಸ ದಾಖಲೆಯನ್ನೂ ನಿರ್ಮಿಸಿದರು. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ, ಕೇರಳಂ, ಒಡಿಶಾ, ಆಂಧ್ರಪ್ರದೇಶ ಸೇರಿ ಹಲವು ರಾಜ್ಯಗಳೂ ಅವರ ವಿಶೇಷ ಜ್ಞಾನದ ಪ್ರಯೋಜನ ಪಡೆದಿವೆ.
- ಕಡಿಮೆ ವೆಚ್ಚದಲ್ಲಿ, ಪರಿಸರಸ್ನೇಹಿ ಸೇತುವೆ ನಿರ್ಮಿಸುವುದು ಅವರ ವೈಶಿಷ್ಟ್ಯ. 70ಕ್ಕೂ ಅಧಿಕ ನುರಿತ ಕಾರ್ಮಿಕರ ತಂಡ ಅವರ ಆಲೋಚನೆಗಳನ್ನು ಕಾರ್ಯರೂಪಕ್ಕೆ ಇಳಿಸುತ್ತಿತ್ತು. ಕೆಲಸ ಕೈಗೆತ್ತಿಕೊಂಡ ಬಳಿಕ ಅದನ್ನು ಪೂರ್ಣಗೊಳಿಸುವರೆಗೂ ಕಾಮಗಾರಿ ಸ್ಥಳದಲ್ಲಿನ ಡೇರೆಯಲ್ಲಿ ಕಾರ್ಮಿಕರ ಜೊತೆ ಉಳಿದುಕೊಂಡು ಹುರಿದುಂಬಿಸುತ್ತಿದ್ದರು.
- ಗಿರೀಶ ಅವರಿಗೆ 2017ರಲ್ಲಿ 'ಪದ್ಮಶ್ರೀ' ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಸೇರಿ ಹಲವು ಪುರಸ್ಕಾರಗಳು ಸಂದಿವೆ.
- ಹುಟ್ಟೂರಾದ ಅರಂಬೂರಿನಲ್ಲಿ ಮಂಗಳವಾರ ಸರ್ಕಾರಿ ಗೌರವದೊಂದಿಗೆ ಗಿರೀಶ ಅವರ ಅಂತ್ಯಕ್ರಿಯೆ ನೆರವೇರಿತು. ಜಿಲ್ಲಾಧಿಕಾರಿ ದರ್ಶನ್ ಎಚ್.ವಿ. ಹಾಗೂ ಜಿಲ್ಲಾ ಎಸ್ಪಿ ಅರುಣ್ ಕೆ ಅವರು ಸರ್ಕಾರದ ವತಿಯಿಂದ ಗೌರವ ಸಲ್ಲಿಸಿದರು.

Dr. Rajkumar IAS/KAS Academy

# ಅಹಮದಾಬಾದ್ ಬಾಂಬ್ ಸ್ಫೋಟ ಪ್ರಕರಣ: 38 ಉಗ್ರರಿಗೆ ಗಲ್ಲು ಶಿಕ್ಷೆ ವಿಧಿಸಿದ್ದ ಕೋರ್ಟ್

# ಮರಣದಂಡನೆ ಎತ್ತಿಹಿಡಿದ ಹೈಕೋರ್ಟ್

ಅಹಮದಾಬಾದ್(ಪಿಟಿಐ): ನಗರದಲ್ಲಿ 2008ರಲ್ಲಿ ಸಂಭವಿಸಿದ್ದ ಸರಣಿ ಬಾಂಬ್ ಸ್ಫೋಟ ಪ್ರಕರಣದಲ್ಲಿ ಇಂಡಿಯನ್ ಮುಜಾಹಿದೀನ್(ಐಎಂ) ಸಂಘಟನೆಯ 38 ಉಗ್ರರಿಗೆ ಮರಣ ದಂಡನೆ ಹಾಗೂ ಇತರ 11 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯ ಹೊರಡಿಸಿದ್ದ ಆದೇಶವನ್ನು ಅಹಮದಾಬಾದ್ ಹೈಕೋರ್ಟ್ ಮಂಗಳವಾರ ಎತ್ತಿ ಹಿಡಿದಿದೆ.

ಸರಣಿ ಸ್ಫೋಟಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ₹10 ಲಕ್ಷ ಹಾಗೂ ಗಂಭೀರವಾಗಿ ಗಾಯಗೊಂಡವರಿಗೆ ತಲಾ ₹5 ಲಕ್ಷ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಿಶೇಷ ನ್ಯಾಯಾಲಯವು 2022ರ ಫೆಬ್ರುವರಿಯಲ್ಲಿ ಈ ಆದೇಶ ಹೊರಡಿಸಿತ್ತು. ವಿಧ್ವಂಸಕ ಕೃತ್ಯಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಲಯವೊಂದು ಇಷ್ಟೊಂದು ಜನ ಅಪರಾಧಿಗಳಿಗೆ ಏಕಕಾಲಕ್ಕೆ ಮರಣ ದಂಡನೆ ವಿಧಿಸಿ ಆದೇಶಿಸಿರುವುದು ಇದೇ ಮೊದಲು.

ಕೆಳ ನ್ಯಾಯಾಲಯವು ತಮಗೆ ನೀಡಿದ ಶಿಕ್ಷೆ ಪ್ರಶ್ನಿಸಿ ಅಪರಾಧಿಗಳು ಸಲ್ಲಿಸಿದ್ದ ಎಲ್ಲ ಮೇಲ್ಮನವಿಗಳನ್ನು ನ್ಯಾಯಮೂರ್ತಿಗಳಾದ ಎ.ವೈ.ಕೋಗ್ಜೆ ಹಾಗೂ ಸಮೀರ್ ದವೆ ಅವರು ಇದ್ದ ಹೈಕೋರ್ಟ್ ವಿಭಾಗೀಯ ಪೀಠ ತಿರಸ್ಕರಿಸಿ, ಅವರಿಗೆ ನೀಡಲಾದ ಶಿಕ್ಷೆಯನ್ನು ದೃಢಪಡಿಸಿ ಆದೇಶಿಸಿತು.

ಸಿಮಿ ಸಂಘಟನೆಯ ಮಾಜಿ ನಾಯಕ ಸಫ್ದರ್ ನಗೋರಿ ಹಾಗೂ ಗುಜರಾತ್, ಮಧ್ಯಪ್ರದೇಶ, ಕೇರಳ ಮತ್ತು ಉತ್ತರ ಪ್ರದೇಶ ಸೇರಿ 11 ರಾಜ್ಯಗಳ ಆತನ ಸಹಚರರಿಗೆ ಶಿಕ್ಷೆ ವಿಧಿಸಲಾಗಿದೆ.

'ವಿಚಾರಣೆ ವೇಳೆ, ರಾಜ್ಯ ಸರ್ಕಾರವು ಅಪರಾಧಿಗಳ ವಿರುದ್ಧದ ಎಲ್ಲ ಸಾಕ್ಷ್ಯಾಧಾರಗಳನ್ನು ಹೈಕೋರ್ಟ್ ಮುಂದಿಟ್ಟಿತ್ತು' ಎಂದು ವಿಶೇಷ ಸರ್ಕಾರಿ ವಕೀಲ ಅಮಿತ್ ಪಟೇಲ್ ಹೇಳಿದರು.

'ಒಂದೂವರೆ ವರ್ಷಗಳಷ್ಟು ಸುದೀರ್ಘ ಪ್ರಕರಣದ ವಿಚಾರಣೆ ನಡೆದಿತ್ತು. ಹೈಕೋರ್ಟ್, ಪ್ರತಿ ದಿನವೂ ವಿಚಾರಣೆ ನಡೆಸಿತ್ತು' ಎಂದರು.

## 21 ಬಾಂಬ್ ಸ್ಫೋಟ...56 ಮಂದಿ ಸಾವು

ಅಹಮದಾಬಾದ್ ನಗರದಲ್ಲಿ 2008ರ ಜುಲೈ 26ರಂದು ಈ ವಿಧ್ವಂಸಕ ಕೃತ್ಯ ಸಂಭವಿಸಿತ್ತು. ನಗರದ ವಿವಿಧ ಭಾಗಗಳಲ್ಲಿ 70 ನಿಮಿಷಗಳಲ್ಲಿ 21 ಬಾಂಬ್‌ಗಳನ್ನು ಸ್ಫೋಟಿಸಲಾಗಿತ್ತು.

ಈ ಸ್ಫೋಟಗಳಿಂದಾಗಿ 56 ಜನರು ಮೃತಪಟ್ಟು, ಇತರ 200ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು. ಗಾಯಗೊಂಡವರನ್ನು ದಾಖಲಿಸಿದ್ದ ನಗರದ ಆಸ್ಪತ್ರೆಗಳನ್ನು ಗುರಿಯಾಗಿಸಿಯೂ ಬಾಂಬ್‌ಗಳನ್ನು ಸ್ಫೋಟಿಸಲಾಗಿತ್ತು. ವೈದ್ಯಕೀಯ ಮೂಲಸೌಕರ್ಯಗಳನ್ನು ಗುರಿಯಾಗಿಸಿ ನಡೆಸಿದ ಮೊದಲ ದಾಳಿ ಅದಾಗಿತ್ತು. ಘಟನೆಗೆ ಸಂಬಂಧಿಸಿ 78 ಜನರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. 49 ಜನರಿಗೆ ಶಿಕ್ಷೆ ವಿಧಿಸಿ ವಿಶೇಷ ನ್ಯಾಯಾಲಯ 2022ರ ಫೆಬ್ರುವರಿಯಲ್ಲಿ ಆದೇಶಿಸಿತ್ತು.



**ಈ ಸರಣಿ ಬಾಂಬ್ ಸ್ಫೋಟಗಳಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಹಾಗೂ ಗಾಯಾಳುಗಳಿಗೆ ಮುಂದಿನ ಮಾರ್ಚ್ 30ರ ಒಳಗಾಗಿ ಪರಿಹಾರ ವಿತರಣೆ ಮಾಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ**

**ಅಮಿತ್ ಪಟೇಲ್,** ವಿಶೇಷ ಸರ್ಕಾರಿ ವಕೀಲ

---



# ಫಿಫಾ ಅಂಗಳದಲ್ಲೂ ಟ್ರಂಪ್ 'ಆಟ'



ಫುಟ್‌ಬಾಲ್ ಕ್ರೀಡೆಯಲ್ಲಿ ಇದುವರೆಗೆ ಕೆಂಪು ಮತ್ತು ಹಳದಿ ಕಾರ್ಡ್‌ಗಳು ಇದ್ದವು. ಇದೀಗ ಈ ಸಾಲಿಗೆ 'ಟ್ರಂಪ್ ಕಾರ್ಡ್' ಕೂಡ ಸೇರಿದೆ. ಈ ಹಿಂದೆ ಕ್ರೀಡೆಯಲ್ಲಿ ಪರೋಕ್ಷವಾಗಿ ನಡೆಯುತ್ತಿದ್ದ ರಾಜಕೀಯ ಹಸ್ತಕ್ಷೇಪ ಈಗ ನೇರವಾಗಿ ನಡೆದಂತಾಗಿದೆ

ಚಿತ್ರ: ಸಂತೋಷ್ ಸಸಿಹಿತ್ಲು

• ಗಿರೀಶ ದೊಡ್ಡಮನಿ

**1936ರ** ಬರ್ಲಿನ್ ಒಲಿಂಪಿಕ್ಸ್‌ನಲ್ಲಿ ಭಾರತ ಹಾಕಿ ತಂಡವು ಆತಿಥೇಯ ಜರ್ಮನಿ ತಂಡವನ್ನು ಸರ್ವಾಧಿಕಾರಿ ಅಡಾಲ್ಫ್ ಹಿಟ್ಲರ್ ಸಮ್ಮುಖದಲ್ಲಿಯೇ ಮಣ್ಣುಮುಕ್ಕಿಸಿತ್ತು. ಆ ಪಂದ್ಯದ ಗೆಲುವಿನ ರೂವಾರಿ 'ಹಾಕಿ ಮಾಂತ್ರಿಕ' ಧ್ಯಾನಚಂದ್ ಅವರನ್ನು ಭೇಟಿಯಾದ ಹಿಟ್ಲರ್, 'ನಮ್ಮ ದೇಶದ ಪೌರತ್ವ, ಸೇನೆಯಲ್ಲಿ ಉನ್ನತ ಹುದ್ದೆ ಹಾಗೂ ಸಕಲ ಸೌಲಭ್ಯ ನೀಡುತ್ತೇನೆ. ಇಲ್ಲಿಗೆ ಬಂದುಬಿಡಿ' ಎಂದು ಆಹ್ವಾನ ನೀಡಿದ್ದರು. ಆದರೆ, ಅದಕ್ಕೆ ಪ್ರತ್ಯುತ್ತರ ನೀಡಿದ ಧ್ಯಾನಚಂದ್, 'ನನ್ನ ದೇಶಕ್ಕಾಗಿಯೇ ಆಡುತ್ತೇನೆ. ಇಲ್ಲಿಗೆ ಬರುವುದಿಲ್ಲ' ಎಂದು ಕಡ್ಡಿ ಮುರಿದಂತೆ ಹೇಳಿದ್ದರು. ಅವರ ಮಾತು ಕೇಳಿ ಹಿಟ್ಲರ್ ತಬ್ಬಿಬ್ಬಾಗಿದ್ದರು. ನಂತರ ಧ್ಯಾನಚಂದ್ ಅವರ ಇಚ್ಛಾಶಕ್ತಿಗೆ ತಲೆದೂಗಿದ್ದರು. ಅದರಿಂದಾಗಿಯೇ ಮೇಜರ್ ಧ್ಯಾನಚಂದ್ ಅವರ ಬಗ್ಗೆ ಇಂದಿಗೂ ವಿಶ್ವದಾದ್ಯಂತ ಗೌರವ ಇದೆ.

ಇಂತಹದೊಂದು ದಿಟ್ಟ ನಿಲುವಿನೊಂದಿಗೆ ದೊಡ್ಡ ಗೌರವವನ್ನು ಶಾಶ್ವತವಾಗಿ ಗಳಿಸಿಕೊಳ್ಳುವ ಅವಕಾಶವೊಂದನ್ನು ಫಿಫಾ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ ಕಳೆದುಕೊಂಡಿದ್ದಾರೆ. ಜೊತೆಗೆ ಫುಟ್‌ಬಾಲ್ ಕ್ರೀಡೆಯ ಗೌರವವನ್ನೂ ಮುಕ್ಕಾಗಿಸಿದ್ದಾರೆ. ಅಮೆರಿಕದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರ ಮಾತು ಕೇಳಿ ಕೆಟ್ಟಿದ್ದಾರೆ.

ಅಮೆರಿಕ, ಕೆನಡಾ ಹಾಗೂ ಮೆಕ್ಸಿಕೊ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ನಡೆದಿರುವ ಘಟನೆ ಈಗ ಕ್ರೀಡೆಯಲ್ಲಿ ರಾಜಕೀಯ ಹಸ್ತಕ್ಷೇಪದ ಚರ್ಚೆಯನ್ನು ಮುನ್ನೆಲೆಗೆ ತಂದಿದೆ. ಇಷ್ಟು ವರ್ಷ ತೆರೆಮರೆಯಲ್ಲಿ ರಾಜಕೀಯ ನಡೆಯುತ್ತಿದ್ದದ್ದನ್ನು ಯಾರೂ ಅಲ್ಲಗಳೆಯಲಾರರು. ಆದರೆ ಇದೀಗ ಟ್ರಂಪ್ ಒಂದು ಹೆಜ್ಜೆ ಮುಂದೆ ಹೋಗಿದ್ದು, ಫುಟ್‌ಬಾಲ್ ಅಂಗಳಕ್ಕೆ ನೇರವಾಗಿ ಧುಮುಕಿ 'ಕ್ರೀಡಾಗೌರವ'ವನ್ನು ಬೌಂಡರಿಯ ಹೊರಗೆ 'ಕಿಕ್' ಮಾಡಿದ್ದಾರೆ. ಅಮೆರಿಕ ತಂಡದ ಆಟಗಾರ ಫೊಲಾರಿನ್ ಬಾಲೋಗನ್ ಅವರಿಗೆ ಬೋಸ್ನಿಯಾ ಎದುರಿನ ಪಂದ್ಯದಲ್ಲಿ ಒರಟು ಆಟವಾಡಿದ್ದಕ್ಕಾಗಿ ರೆಫರಿ ರೆಡ್ ಕಾರ್ಡ್ ತೋರಿಸಿದ್ದರು. ಇದರಿಂದಾಗಿ ಬಾಲೋಗನ್ ಅವರು ಒಂದು ಪಂದ್ಯದ ನಿಷೇಧ ಅನುಭವಿಸಬೇಕಿತ್ತು. ಟ್ರಂಪ್ ಅವರು ಮಧ್ಯಸ್ಥಿಕೆ ವಹಿಸಿ ಬಾಲೋಗನ್ ಮೇಲಿನ ನಿಷೇಧ ತೆರವುಗೊಳ್ಳುವಂತೆ ಮಾಡಿದರು. ಅದಕ್ಕಾಗಿ ಫಿಫಾ ಅಧ್ಯಕ್ಷ ಇನ್ಫಾಂಟಿನೊ ಅವರ ಸ್ನೇಹವನ್ನೂ ಸಮರ್ಥವಾಗಿ ಬಳಸಿಕೊಂಡರು. ರೆಡ್‌ಕಾರ್ಡ್, ಯೆಲ್ಲೊ ಕಾರ್ಡ್‌ಗಳನ್ನು ರೆಫರಿಗಳು ಫುಟ್‌ಬಾಲ್ ಕ್ರೀಡೆಯಲ್ಲಿ ಬಳಸುವುದು ಹೊಸದೇನಲ್ಲ. ದೊಡ್ಡ ದೇಶವೊಂದರ ಅಧ್ಯಕ್ಷರೊಬ್ಬರು ಮಧ್ಯಸ್ಥಿಕೆ ವಹಿಸಿ ಪರಿಹರಿಸಬೇಕಾದ ದೊಡ್ಡ ವಿಷಯವೂ ಇದಾಗಿರಲಿಲ್ಲ. ಬಾಲೋಗನ್ ಆಡದಿದ್ದರೆ ಅವರ ಬದಲಿಗೆ ಇನ್ನೊಬ್ಬ ಆಟಗಾರ ಕಣಕ್ಕಿಳಿಯುತ್ತಿದ್ದರು ಅಷ್ಟೇ.



ಫೊಲಾರಿನ್ ಬಾಲೋಗನ್

ಸೋಮವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಅಮೆರಿಕವನ್ನು ಸೋಲಿಸಿದ ಬೆಲ್ಜಿಯಂ ಆಟಗಾರರು ಟ್ರಂಪ್ ಅವರು ಈ ಹಿಂದೆ ಮಾಡಿದ್ದ ನೃತ್ಯವೊಂದನ್ನು ಅಣಕ ಮಾಡಿದ್ದಾರೆ. ಫುಟ್‌ಬಾಲ್ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಟ್ರಂಪ್ ಅವರನ್ನು ವ್ಯಂಗ್ಯ ಮಾಡಿರುವ ಸಾವಿರಾರು ಮೀಮ್‌ಗಳು, ವಿಡಿಯೊಗಳು ತುಂಬಿಹೋಗಿವೆ. ಇನ್ಫಾಂಟಿನೊ ಅವರು ನುರಿತ ಕ್ರೀಡಾ ಆಡಳಿತಗಾರ. ಅವರು ಇಲ್ಲಿ ತಮ್ಮ ಸೂಕ್ಷ್ಮತೆ ಮತ್ತು ಅನುಭವ ಬಳಸಿ ಟ್ರಂಪ್ ಮನವೊಲಿಸಬಹುದಿತ್ತು. ಇಲ್ಲವೇ ತೀರ್ಪು ಬದಲಾವಣೆ ನಿರಾಕರಿಸುವ ದಿಟ್ಟತನ ತೋರಿದ್ದರೆ ಕ್ರೀಡಾ ವಲಯವು ಅವರನ್ನು ಬಹುಕಾಲ ನೆನಪಿನಲ್ಲಿಟ್ಟುಕೊಳ್ಳುತ್ತಿತ್ತು. ಆದರೆ, ರಾಜಕೀಯ ಹಸ್ತಕ್ಷೇಪ ಮತ್ತು ಫುಟ್‌ಬಾಲ್ ಕ್ರೀಡೆಯ ಚಾರಿತ್ರ್ಯಕ್ಕೆ ಧಕ್ಕೆ ತಂದಿರುವುದಕ್ಕೆ ಫಿಫಾ ನಿಯಮ 2 ಮತ್ತು 15ರ ಅಡಿಯಲ್ಲಿ ಅಮೆರಿಕ ತಂಡವನ್ನು ಅನರ್ಹಗೊಳಿಸಲು ಈಗಲೂ ಅವಕಾಶ ಇದೆ. ಈ ಕ್ರಮಕ್ಕೆ ಇನ್ಫಾಂಟಿನೊ ಮುಂದಾಗುವರೇ? ಅಂಥದ್ದೊಂದು ದಿಟ್ಟ ನಡೆಯನ್ನು ಅವರಿಂದ ನಿರೀಕ್ಷಿಸಬಹುದೇ?

### ರಾಜಕೀಯ ಲೆಕ್ಕಾಚಾರವೇ?

ಡೊನಾಲ್ಡ್ ಟ್ರಂಪ್ ಅವರು ಏಳು ವರ್ಷಗಳ ಹಿಂದೆ ಮೊದಲ ಬಾರಿ ಅಮೆರಿಕದ ಅಧ್ಯಕ್ಷರಾಗಿದ್ದರು. ಅವರ ಆ ಅಧಿಕಾರಾವಧಿಯಲ್ಲಿ ಕಪ್ಪು ಜನಾಂಗದ ವ್ಯಕ್ತಿಯೊಬ್ಬನ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದರು. ಅದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಕಪ್ಪು ವರ್ಣೀಯರ ಪರವಾಗಿ ವಿಶ್ವದ ಬೇರೆ ಬೇರೆ ದೇಶಗಳಲ್ಲಿ ಪ್ರತಿಭಟನೆಗಳು ನಡೆದವು. ಅದು ಟ್ರಂಪ್ ಅವರ ಅಧಿಕಾರಕ್ಕೆ ಕುತ್ತು ತಂದಿದ್ದು ಸುಳ್ಳಲ್ಲ.

ಎರಡನೇ ಅವಧಿಯಲ್ಲಿ ಟ್ರಂಪ್ ಅವರು ಇರಾನ್ ಎದುರಿನ ಯುದ್ಧದಿಂದಾಗಿ ಸ್ವದೇಶದಲ್ಲಿಯೇ ಟೀಕೆಗೆ ಗುರಿಯಾಗಿದ್ದಾರೆ. ಇಂತಹ ಸಂದರ್ಭದಲ್ಲಿ ತಮ್ಮ ದೇಶವಾಸಿಗಳಿಂದ ಮೆಚ್ಚುಗೆ ಗಳಿಸುವ ಲೆಕ್ಕಾಚಾರದಿಂದಾಗಿ ಅವರು ಬಾಲೋಗನ್ ಅವರ ನಿಷೇಧ ತೆರವಿಗೆ ಮುಂದಾಗಿರಬಹುದು ಎಂದೂ ವಿಶ್ಲೇಷಿಸಲಾಗುತ್ತಿದೆ. ಅಲ್ಲದೇ ಬಾಲೋಗನ್ ಅವರು ಕಪ್ಪು ವರ್ಣೀಯ ಆಟಗಾರನಾಗಿದ್ದಾರೆ. ಆದ್ದರಿಂದ ಅವರ ನೆರವಿಗೆ ನಿಂತರೆ ತಮ್ಮ ದೇಶದ ಕಪ್ಪು ವರ್ಣೀಯರು ಮೆಚ್ಚುಗೆಗೆ ಪಾತ್ರವಾಗುವ ಲೆಕ್ಕಾಚಾರವೂ ಅವರದ್ದಾಗಿರಬಹುದು ಎನ್ನಲಾಗಿದೆ.

### ಮೈದಾನ ಪ್ರವೇಶಿಸಿದ ರಾಜಕೀಯ

ಮೈದಾನದೊಳಗೂ ಪಂದ್ಯಗಳ ಮಧ್ಯೆ ರಾಜಕೀಯ ಇಣುಕಿ ಸದ್ದು ಮಾಡಿದ ಉದಾಹರಣೆಗಳೂ ಇವೆ. 1982ರಲ್ಲಿ ಫ್ರಾನ್ಸ್ ಮತ್ತು ಕುವೈತ್ ನಡುವಣ ಪಂದ್ಯ ನಡೆದಿತ್ತು. ಅದರಲ್ಲಿ ಫ್ರಾನ್ಸ್ ಆಟಗಾರರು ಗೋಲು ಗಳಿಸಿದರು. ಅದೇ ಹೊತ್ತಿಗೆ ಕುವೈತ್ ರಕ್ಷಣಾ ಆಟಗಾರರು ಆಟ ನಿಲ್ಲಿಸಿದರು. ಸ್ಟ್ಯಾಂಡ್‌ನಿಂದ ಶಿಳ್ಳೆಯ ಸದ್ದು ಬಂದಿತ್ತು ಎಂದು ದೂರಿದರು. ಆಗ ಕುವೈತ್ ದೇಶದ ರಾಜನ ಸಹೋದರ ಮತ್ತು ಅಲ್ಲಿಯ ಫುಟ್‌ಬಾಲ್ ಸಂಸ್ಥೆ ಅಧ್ಯಕ್ಷ ಶೇಖ್ ಫಹಾದ್ ಅಲ್ ಅಹ್ಮದ್ ಅಲ್ ಜಾಬರ್ ಅಲ್ ಸಬಾ ಅವರು ಆಟದಂಕಣ ಪ್ರವೇಶಿಸಿದರು. ಫ್ರಾನ್ಸ್‌ಗೆ ಗೋಲು ಕೊಡದಂತೆ ರೆಫರಿಯ ಮನವೊಲಿಸಿದ್ದರು ಎಂದು 'ಫಸ್ಟ್‌ಪೋಸ್ಟ್' ವೆಬ್‌ಸೈಟ್ ಉಲ್ಲೇಖಿಸಿದೆ. ಆ ಪಂದ್ಯದಲ್ಲಿ ಫ್ರಾನ್ಸ್ 3–1ರಿಂದ ಮುಂದಿತ್ತು. ಆದರೆ ನಾಲ್ಕನೇ ಗೋಲು ಹೊಡೆದರೂ ಶೇಖ್ ಮನವಿಯಿಂದಾಗಿ ರದ್ದಾಯಿತು.

1934ರಲ್ಲಿ ಇಟಲಿಯಲ್ಲಿ ನಡೆದ ವಿಶ್ವಕಪ್ ಟೂರ್ನಿಯನ್ನು ಫ್ಯಾಸಿಸ್ಟ್ ಸಿದ್ಧಾಂತದ ಪ್ರಚಾರಕ್ಕಾಗಿ ಬೆನೆಟೊ ಮುಸೊಲಿನಿ ಬಳಸಿಕೊಂಡಿದ್ದ. 3 ಲಕ್ಷಕ್ಕೂ ಹೆಚ್ಚು ಭಿತ್ತಿಚಿತ್ರಗಳನ್ನು ಅಂಟಿಸಲಾಗಿತ್ತು. ಅದರಲ್ಲಿ ಫ್ಯಾಸಿಸ್ಟ್ ಸೆಲ್ಯೂಟ್ ಚಿತ್ರ ಅಚ್ಚಾಗಿತ್ತು ಎಂದು 'ಸ್ಕೈ ಹಿಸ್ಟರಿ' ವೆಬ್‌ಸೈಟ್ ಲೇಖನದಲ್ಲಿ ಉಲ್ಲೇಖಿಸಲಾಗಿದೆ.

ಆದರೆ ಇತಿಹಾಸದ ಎಲ್ಲ ಪ್ರಕರಣಗಳನ್ನೂ 'ಟ್ರಂಪ್ ರೆಡ್ ಕಾರ್ಡ್' ಮೀರಿಸಿದೆ. ಅದರಲ್ಲೂ ಈ ಬಾರಿಯ ಫಿಫಾ ವಿಶ್ವಕಪ್ ಟೂರ್ನಿಯು ಕ್ವಾರ್ಟರ್‌ಫೈನಲ್ ಘಟ್ಟಕ್ಕೆ ತಲುಪುವ ಮುನ್ನವೇ ಹಲವಾರು ವಿವಾದಗಳಿಂದಾಗಿ ಸುದ್ದಿಯಾಗಿದೆ. ಕ್ರೀಡಾ ಸ್ಫೂರ್ತಿಯ ಬೆಳಕು ಮಂದವಾಗುತ್ತಿರುವಂತೆ ಭಾಸವಾಗುತ್ತಿದೆ.



ಜಿಯಾನಿ ಇನ್ಫಾಂಟಿನೊ

### ದೇಶಗಳ ಅಮಾನತು

ಕ್ರೀಡೆಯಲ್ಲಿ ರಾಜಕೀಯ ಹಸ್ತಕ್ಷೇಪ ಸಲ್ಲದು ಎಂಬುದು ಹಳೆಯ ಸಿದ್ಧಾಂತ. ಆದರೆ, ಅದನ್ನು ಮೀರುವ ಘಟನೆಗಳು ಹಿಂದೆಯೂ ನಡೆದಿವೆ. ಅದಕ್ಕಾಗಿ ಫಿಫಾದಿಂದ ಹತ್ತು ದೇಶಗಳು ಅಮಾನತು ಶಿಕ್ಷೆಗೆ ಒಳಗಾದ ನಿದರ್ಶನಗಳೂ ಇವೆ. 2007ರಲ್ಲಿ ಕುವೈತ್ ಸರ್ಕಾರವು ಆ ದೇಶದ ಫುಟ್‌ಬಾಲ್ ಸಂಸ್ಥೆಯ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ನಡೆಸಿತ್ತೆನ್ನಲಾಗಿದೆ. ಅದಕ್ಕಾಗಿ ಫಿಫಾ, ಕುವೈತ್ ಸಂಸ್ಥೆಯನ್ನು ಕೆಲಕಾಲ ಅಮಾನತು ಮಾಡಿತ್ತು. ಅಲ್ಲದೇ 2015ರಲ್ಲಿ ಕುವೈತ್‌ನಲ್ಲಿ ಸರ್ಕಾರವು ನೂತನ ಕ್ರೀಡಾ ನೀತಿ ಜಾರಿಗೊಳಿಸಲು ಸಾಧ್ಯವಾಗದೇ ಫುಟ್‌ಬಾಲ್ ಸಂಸ್ಥೆಯ ಮಾನ್ಯತೆ ರದ್ದಾಯಿತು. 2018ರ ವಿಶ್ವಕಪ್ ಅರ್ಹತೆಯೂ ಕೈತಪ್ಪಿತು. ಉಕ್ರೇನ್ ಮೇಲೆ ಯುದ್ಧ ಸಾರಿರುವ ರಷ್ಯಾ ತಂಡವನ್ನು ಈ ಬಾರಿಯ ಟೂರ್ನಿಯಲ್ಲಿ ಆಡುವುದರಿಂದ ಅನರ್ಹಗೊಳಿಸಲಾಗಿದೆ. ಅಲ್ಲದೇ ಯುಇಎಫ್‌ಎಯಿಂದಲೂ ರಷ್ಯಾವನ್ನು ಹೊರಗಿಡಲಾಗಿದೆ. ಇದಲ್ಲದೇ ಇರಾಕ್, ಬ್ರೂನಿ, ಇಂಡೊನೇಷ್ಯಾ, ಪಾಕಿಸ್ತಾನ, ಕೆನ್ಯಾ, ಕಾಂಗೊ, ಸಿಯೊರಾ ಲಿಯೊನ್, ಗ್ವಾಟೆಮಾಲಾ ದೇಶಗಳು ರಾಜಕೀಯದಾಟದಿಂದಾಗಿ ಫಿಫಾದ ಕೆಂಗಣ್ಣಿಗೆ ಗುರಿಯಾಗಿದ್ದವು.


### ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

#### ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

**ವಿಳಾಸ**

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001


### ಫಿಫಾ 2026ರ ಪ್ರಮುಖ ವಿವಾದಗಳು

- ಸೊಮಾಲಿಯಾದ ಪ್ರಶಸ್ತಿ ಪುರಸ್ಕೃತ ರೆಫರಿ ಒಮರ್ ಅರ್ತನ್ ಅವರಿಗೆ ಅಮೆರಿಕ ಪ್ರವೇಶಕ್ಕೆ ವೀಸಾ ನಿರಾಕರಿಸಲಾಯಿತು. ಅವರನ್ನು ರೆಫರಿಗಳ ಪಟ್ಟಿಯಿಂದ ಕೈಬಿಡಲಾಯಿತು. ಮಯಾಮಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಒಮರ್ ಅವರಿಗೆ ಈ ವಿಷಯ ತಿಳಿಸಲಾಯಿತು. ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಕಾರ್ಯನಿರ್ವಹಿಸಿದ ಸೊಮಾಲಿಯಾದ ಮೊದಲ ರೆಫರಿಯೆಂಬ ಹೆಗ್ಗಳಿಕೆ ಪಡೆಯುವ ಅವಕಾಶ ಅವರಿಗೆ ಕೈತಪ್ಪಿತು. ಫಿಫಾ ಕೂಡ ಅಸಹಾಯಕವಾಯಿತು. ಅಕ್ರಮ ವಲಸೆ ಹತ್ತಿಕ್ಕಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಜಾರಿಗೊಳಿಸಿದ ಅಮೆರಿಕಕ್ಕೆ 'ಪ್ರಯಾಣ ನಿರ್ಬಂಧವಿರುವ ದೇಶಗಳ ಪಟ್ಟಿ'ಯಲ್ಲಿ ಸೊಮಾಲಿಯಾ ಒಂದಾಗಿದೆ. ನಂತರ ಅವರು ಸ್ವದೇಶಕ್ಕೆ ಮರಳಿದರು. ಅಲ್ಲಿ ಅವರಿಗೆ ಭರ್ಜರಿ ನಾಗರಿಕ ಸಮ್ಮಾನ ದೊರೆಯಿತು
- ಫಿಫಾ ಪಂದ್ಯಗಳ ಟಿಕೆಟ್‌ಗಳ ಬೆಲೆಯನ್ನು ಅವೈಜ್ಞಾನಿಕವಾಗಿ ಹೆಚ್ಚಳ ಮಾಡಲಾಗಿದೆ ಎಂಬ ಆರೋಪಗಳು ಕೇಳಿಬಂದವು
- ತಾಪಮಾನ ಹೆಚ್ಚಳದಿಂದಾಗಿ ಆಟಗಾರರು ಅನಾರೋಗ್ಯಕ್ಕೆ ಒಳಗಾಗಲಿದ್ದಾರೆ ಎಂದು ಆರೋಗ್ಯ ವಿಜ್ಞಾನಿಗಳು ಎಚ್ಚರಿಸಿದ್ದರು. 40 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಹೆಚ್ಚಿನ ತಾಪಮಾನದಿಂದ ಆಟಗಾರರಿಗೆ ರಕ್ಷಣೆ ನೀಡುವ ಸವಲತ್ತುಗಳು ಇಲ್ಲಿ ಸಮಂಜಸವಾಗಿಲ್ಲ ಎಂದೂ ಆತಂಕ ವ್ಯಕ್ತಪಡಿಸಿದ್ದರು
- ಫ್ರಾನ್ಸ್ ತಂಡದ ಸೂಪರ್ ಸ್ಟಾರ್ ಕೈಲಿಯನ್ ಎಂಬಾಪೆ ಅವರ ವಿರುದ್ಧ ಪರಗ್ವೆಯ ಸೆನೆಟರ್ ಸೆಲೆಸ್ಟಿ ಅಮರಿಲಾ ಅವರು ಜನಾಂಗೀಯ ನಿಂದನೆ ಮಾಡಿದ್ದಾರೆ. ಈ ಹೇಳಿಕೆಗಳು 'ಜನಾಂಗೀಯ ನಿಂದನೆ' ಮತ್ತು 'ಅಸಹನೀಯ' ಎಂದು ಎಂಬಾಪೆ ಪ್ರತಿಕ್ರಿಯಿಸಿದ್ದಾರೆ. ಸೆಲೆಸ್ಟಿ ವಿರುದ್ಧ ಕಾನೂನು ಹೋರಾಟ ಮಾಡುವುದಾಗಿ ಹೇಳಿದ್ದಾರೆ
- ಲಾಸ್ ಏಂಜಲೀಸ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ನ್ಯೂಜಿಲೆಂಡ್ ಎದುರು ಗೋಲು ಗಳಿಸಿದ ಇರಾನ್ ದೇಶದ ಮೊಹಮ್ಮದ್ ಮೊಹಾಬಿ ಅವರು ಬಂದೂಕಿನಿಂದ ಗುಂಡು ಹಾರಿಸುವ ಶೈಲಿಯನ್ನು ತೋರಿಸಿ ಸಂಭ್ರಮಿಸಿದರು. ಇದರಿಂದಾಗಿ ಅವರ ಮೇಲೆ ಶಿಸ್ತುಕ್ರಮ ಜರುಗಿಸಲಾಯಿತು
- ಕೆಲವು ಪಂದ್ಯಗಳಲ್ಲಿ ವಿಡಿಯೊ ವಿಶ್ಲೇಷಣೆ (ವಿಎಆರ್) ತಂತ್ರಜ್ಞಾನ ಮೂಲಕ ಹೊರಹೊಮ್ಮಿದ ತೀರ್ಮಾನಗಳೂ ವಿವಾದಕ್ಕೆಡೆ ಮಾಡಿಕೊಟ್ಟವು
- ಫಿಫಾ ವಿಶ್ವಕಪ್ ಆರಂಭಕ್ಕೂ ಮುನ್ನ ಅಮೆರಿಕವು ಇರಾನ್ ಎದುರು ಯುದ್ಧ ಸಾರಿತ್ತು. ಅದರ ಬಿಸಿ ಫುಟ್‌ಬಾಲ್ ಅಂಗಳಕ್ಕೂ ತಟ್ಟಿತ್ತು. ಇರಾನ್ ತಂಡದ ಆಟಗಾರರು ಮತ್ತು ನೆರವು ಸಿಬ್ಬಂದಿಗೆ ಅಮೆರಿಕದ ವೀಸಾ ನಿರಾಕರಿಸಲಾಯಿತು. ಕಾನೂನು ಹೋರಾಟದ ನಂತರ ಅನುಮತಿ ಸಿಕ್ಕಿತು. ಆದರೆ ಮೈದಾನದಲ್ಲಿ ಇರಾನ್ ಬಾವುಟವನ್ನು ತೋರಿಸುವಂತಿಲ್ಲ ಎಂಬ ನಿರ್ಬಂಧ ಹೇರಲಾಯಿತು. ಇರಾನ್ ಗುಂಪು ಹಂತದಲ್ಲಿ ಆಡಿದ ಮೂರು ಪಂದ್ಯಗಳೂ ಡ್ರಾ ಆದವು. ಆದರೆ ನಾಕೌಟ್‌ಗೆ ಅರ್ಹತೆ ಪಡೆಯಲಿಲ್ಲ. ಈ ಗುಂಪಿನಿಂದ ತಲಾ ಐದು ಅಂಕ ಪಡೆದ ಬೆಲ್ಜಿಯಂ ಮತ್ತು ಈಜಿಪ್ಟ್ 32ರ ಘಟ್ಟಕ್ಕೆ ಪ್ರವೇಶಿಸಿದವು


Publication Date
08/07/2026

Presented by

# ಬ್ರಹ್ಮೋಸ್, ಅಸ್ತ್ರ ಕ್ಷಿಪಣಿ ಪೂರೈಕೆಗೆ ಒಪ್ಪಂದ

## ಮೂರು ದಿನಗಳ ಇಂಡೊನೇಷ್ಯಾ ಪ್ರವಾಸದಲ್ಲಿರುವ ಪ್ರಧಾನಿ ಮೋದಿ • ಹಲವು ಒಪ್ಪಂದಗಳಿಗೆ ಉಭಯ ನಾಯಕರ ಸಹಿ

ಜಕಾರ್ತ (ಪಿಟಿಐ): ಬ್ರಹ್ಮೋಸ್ ಕ್ಷಿಪಣಿಗಳ ಪೂರೈಕೆ, ಯುದ್ಧ ವಿಮಾನದಿಂದಲೇ ಶತ್ರುವಿನ ಯುದ್ಧ ವಿಮಾನವನ್ನು ಧ್ವಂಸಗೊಳಿಸಬಲ್ಲ ಅಸ್ತ್ರ ಕ್ಷಿಪಣಿಗಳ ಪೂರೈಕೆ, ಪೂರ್ವ ಜಾವಾದಲ್ಲಿ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ (ಐಐಎಂ) ಕ್ಯಾಂಪಸ್ ಸ್ಥಾಪನೆ– ಇವು ಭಾರತ ಮತ್ತು ಇಂಡೊನೇಷ್ಯಾ ಮಧ್ಯೆ ಏರ್ಪಟ್ಟ ಒಪ್ಪಂದದ ಪ್ರಮುಖ ಅಂಶಗಳು.

ಇಂಡೊನೇಷ್ಯಾದಲ್ಲಿ ಮೂರು ದಿನಗಳ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿನ ಅಧ್ಯಕ್ಷ ಪ್ರಬೊವೊ ಸುಬಿಯಾಂಟೊ ಅವರೊಂದಿಗೆ ಮಂಗಳವಾರ ಹಲವು ಒಪ್ಪಂದಗಳಿಗೆ ಸಹಿ ಹಾಕಿದರು. ಬಳಿಕ, ಸುದ್ದಿಗೋಷ್ಠಿಯಲ್ಲಿ ಒಪ್ಪಂದದ ಕುರಿತು ಪ್ರಧಾನಿ ಮೋದಿ ಅವರು ಮಾಹಿತಿಗಳನ್ನು ಹಂಚಿಕೊಂಡರು.

'ರಕ್ಷಣೆ, ಕಡಲ ಕಣ್ಗಾವಲು ಮತ್ತು ಭದ್ರತೆ ವಿಚಾರವಾಗಿ ಎರಡೂ ದೇಶಗಳ ಮಧ್ಯೆ ಮಹತ್ವದ ಒಪ್ಪಂದಗಳಾಗಿವೆ. ಭಾರತ ಮತ್ತು ಇಂಡೊನೇಷ್ಯಾದ ಸಂಬಂಧದ ಸುವರ್ಣ ಯುಗ ಈಗ ಆರಂಭವಾಗಿದೆ' ಎಂದು ಬಣ್ಣಿಸಿದರು. ಆಪರೇಷನ್ ಸಿಂಧೂರದ ವೇಳೆ ಅಸ್ತ್ರ ಕ್ಷಿಪಣಿಯ ಯಶಸ್ಸು ಗಮನಿಸಿ, ಇಂಡೊನೇಷ್ಯಾವು ಈ ಕ್ಷಿಪಣಿಗಳನ್ನು ಖರೀದಿಸಲು ನಿರ್ಧರಿಸಿದೆ ಎನ್ನಲಾಗುತ್ತಿದೆ.

ಶಿಕ್ಷಣ ಕ್ಷೇತ್ರದಲ್ಲಿಯೂ ಮಹತ್ವ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. 'ನಾವು ಬೆಂಗಳೂರಿನ ಐಐಎಂ ಕ್ಯಾಂಪಸ್ ಅನ್ನು ಇಂಡೊನೇಷ್ಯಾದಲ್ಲಿ ಸ್ಥಾಪಿಸಲಿದ್ದೇವೆ. ಇದರಿಂದ ಆಸಿಯಾನ್ ಪ್ರದೇಶದ ಯುವಕರಿಗೆ ಬಹಳ ಅನುಕೂಲವಾಗಲಿದೆ' ಎಂದರು.

ಭಾರತ ಬ್ಯುಸಿನೆಸ್ ಕಾಲೇಜುವೊಂದರ ಕ್ಯಾಂಪಸ್ ಅನ್ನು ಇತರೆ ದೇಶಗಳಲ್ಲಿ ಮೊದಲು ಸ್ಥಾಪಿಸಿದ್ದು ದುಬೈನಲ್ಲಿ. ಕಳೆದ ವರ್ಷ ಅಲ್ಲಿ ಐಐಎಂ ಅಹಮದಾಬಾದ್ ಕಾಲೇಜಿನ ಕ್ಯಾಂಪಸ್ ಅನ್ನು ಸ್ಥಾಪಿಸಲಾಗಿತ್ತು. ಬೆಂಗಳೂರಿನ ಐಐಎಂ, ಇತರೆ ದೇಶದಲ್ಲಿ ಕ್ಯಾಂಪಸ್ ತೆರೆದ ಎರಡನೇ ಕಾಲೇಜು ಎನಿಸಿಕೊಳ್ಳಲಿದೆ.

'ಟ್ಯಾಗೋರ್– ಕಿ ಹಜಾರ್ ದೇವಂತರ ಅವರ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ರಾಜತಾಂತ್ರಿಕತೆಯ ವರ್ಷ'ವನ್ನು ಆರಂಭಿಸುವುದಾಗಿ ಎರಡೂ ದೇಶಗಳ ನಾಯಕರು ಘೋಷಿಸಿದರು. ಕಿ ಹಜಾರ್ ದೇವಂತರ ಅವರು ಇಂಡೊನೇಷ್ಯಾದ ಮೊದಲ ಶಿಕ್ಷಣ ಸಚಿವರಾಗಿದ್ದರು. 1927ರಂದು ಟ್ಯಾಗೋರ್ ಅವರು ಇಂಡೊನೇಷ್ಯಾಕ್ಕೆ ಮೂರು ತಿಂಗಳ ಅವಧಿಗೆ ಪ್ರವಾಸ ಮಾಡಿದ್ದರು.



ಇಂಡೊನೇಷ್ಯಾದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಬಿಂತಾಂಗ್ ಆದಿಪೂರ್ಣ ಆಫ್ ದಿ ರಿಪಬ್ಲಿಕ್ ಆಫ್ ಇಂಡೊನೇಷ್ಯಾ' ಅನ್ನು ನರೇಂದ್ರ ಮೋದಿ ಅವರಿಗೆ ಅಧ್ಯಕ್ಷ ಪ್ರಬೊವೊ ಸುಬಿಯಾಂಟೊ ಅವರು ನೀಡಿ ಗೌರವಿಸಿದರು —ಪಿಟಿಐ ಚಿತ್ರ

### ಮೋದಿ ಅವರಿಗೆ ಅತ್ಯುನ್ನತ ಗೌರವ ಪ್ರದಾನ

ಪ್ರಧಾನಿ ಮೋದಿ ಅವರಿಗೆ ಇಂಡೊನೇಷ್ಯಾದ ಅತ್ಯುನ್ನತ ನಾಗರಿಕ ಪದಕ 'ಬಿಂತಾಂಗ್ ಆದಿಪೂರ್ಣ ಆಫ್ ದಿ ರಿಪಬ್ಲಿಕ್ ಆಫ್ ಇಂಡೊನೇಷ್ಯಾ' (ಇಂಡೊನೇಷ್ಯಾದ ಧ್ರುವತಾರೆ) ನೀಡಿ ಗೌರವಿಸಲಾಯಿತು.

'ಎರಡೂ ದೇಶಗಳ ಸ್ನೇಹವನ್ನು ಮತ್ತಷ್ಟು ಗಟ್ಟಿಗೊಳಿಸಿದ ಪ್ರಧಾನಿ ಮೋದಿ ಅವರ ನಾಯಕತ್ವವನ್ನು ಗುರುತಿಸಿ ಈ ಗೌರವ ನೀಡಲಾಗಿದೆ' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ.

'ನೆಹರೂ ಅವರಿಗೆ ಮರಣೋತ್ತರವಾಗಿ ಇದೇ ಪದಕವನ್ನು ನೀಡಲಾಗಿತ್ತು. ಆದರೆ, ಆಗ ಪದಕವನ್ನು ಪಡೆದುಕೊಂಡಿರಲಿಲ್ಲ' ಎಂದು ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪೋಸ್ಟ್ ಹಂಚಿಕೊಂಡಿದ್ದಾರೆ.

'ಮೋದಿ ಬೆಂಬಲಿಗರು ಸಂಭ್ರಮಿಸುತ್ತಿರುವ ಈ ಪದಕವನ್ನು ನೆಹರೂ ಅವರಿಗೆ 1995ರಲ್ಲಿಯೇ ನೀಡಲಾಗಿತ್ತು. ಇದೇ ಪದಕವನ್ನು ಬಿಜು ಪಟ್ನಾಯಕ್ ಅವರಿಗೂ ನೀಡಲಾಗಿದೆ. ಇಂಡೊನೇಷ್ಯಾದ ಸ್ವಾತಂತ್ರ್ಯ ಕ್ಕಾಗಿ ನಡೆದ ಹೋರಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದಕ್ಕಾಗಿ ಪಟ್ನಾಯಕ್ ಅವರಿಗೆ ಈ ಪದಕ ನೀಡಲಾಗಿದೆ' ಎಂದು ಕಾಂಗ್ರೆಸ್ ಸಂಸದ ಪವನ್ ಖೇರಾ ಪೋಸ್ಟ್ ಹಂಚಿಕೊಂಡಿದ್ದಾರೆ.

### ಸುಬಂಗ್ ಬಂದರು ಅಭಿವೃದ್ಧಿ

ಭಾರತದ ನಿಕೋಬಾರ್‌ನಲ್ಲಿ ಯೋಜಿಸಿರುವ ಗ್ರೇಟರ್ ನಿಕೋಬಾರ್ ಬಂದರು ಯೋಜನೆಯಿಂದ 100 ಕಿ.ಮೀ ದೂರದಲ್ಲಿರುವ ಇಂಡೊನೇಷ್ಯಾದ ಸುಬಂಗ್ ಬಂದರನ್ನು ಅಭಿವೃದ್ಧಿಪಡಿಸಲು ಎರಡೂ ದೇಶಗಳು ಒಪ್ಪಿಕೊಂಡಿವೆ. ಚೀನಾದೊಂದಿಗೆ ಸಮುದ್ರ ಸಂಪರ್ಕ ಸಾಧಿಸಲು ಅತ್ಯಂತ ಅನುಕೂಲಕರವಾಗಿರುವ ಮಲಕ್ಕಾ ಜಲಸಂಧಿ ಪ್ರದೇಶದಲ್ಲಿ ಹಿಡಿತ ಸಾಧಿಸಲು ಸುಬಂಗ್ ಬಂದರು ಅನುಕೂಲವಾಗಲಿದೆ.

**ಭಾರತವು ಅಭಿವೃದ್ಧಿ ಹಾದಿಯನ್ನು ಅನುಸರಿಸುತ್ತದೆಯೇ ಹೊರತು ಗಡಿ ವಿಸ್ತರಣೆ ಹಾದಿಯನ್ನಲ್ಲ**
**ನರೇಂದ್ರ ಮೋದಿ, ಪ್ರಧಾನಿ**
(ಇಂಡೊನೇಷ್ಯಾ ಸಂಸತ್ತಿನಲ್ಲಿ ಮಾಡಿದ ಭಾಷಣ: ಸೌತ್ ಚೀನಾ ಸಮುದ್ರದಲ್ಲಿ ಹೆಚ್ಚಿದ ಚೀನಾದ ಸೇನಾ ಬಲವನ್ನು ಉದ್ದೇಶಿಸಿ ಹೇಳಿದ್ದು)

Publication Date
08/07/2026

Presented by

# 'ಇ20ಯಿಂದ ಸಮಸ್ಯೆ ಎಲ್ಲಿದೆ ಹೇಳಿ?'

ನವದೆಹಲಿ (ಪಿಟಿಐ): ಇ20 ಪೆಟ್ರೋಲ್ ಬಳಕೆಯ ಕಾರಣದಿಂದಾಗಿ ತೊಂದರೆ ಅನುಭವಿಸಿದ ಒಂದೇ ಒಂದು ಕಾರನ್ನು ಹೆಸರಿಸುವಂತೆ ಕೇಂದ್ರ ಸಚಿವ ನಿತಿನ್ ಗಡ್ಕರಿ ಮಂಗಳವಾರ ಸವಾಲು ಹಾಕಿದ್ದಾರೆ.

ಇ20 ಪೆಟ್ರೋಲ್ ಬಳಕೆಯಿಂದಾಗಿ ವಾಹನದ ಇಂಧನ ದಕ್ಷತೆ ಕಡಿಮೆ ಆಗಿದೆ ಎಂಬ ದೂರುಗಳು ವ್ಯಾಪಕವಾಗಿರುವ ಸಂದರ್ಭದಲ್ಲಿ ಅವರು ಹೀಗೆ ಹೇಳಿದ್ದಾರೆ.

ಭಾರತವು ಪಳೆಯುಳಿಕೆ ಇಂಧನಗಳ ಮೇಲೆ ಅವಲಂಬಿತ ಆಗಿರುವುದು ಆರ್ಥಿಕ ಹೊರೆಯೂ ಹೌದು, ಪರಿಸರದ ಮೇಲೆ ಕೆಟ್ಟ ಪರಿಣಾಮ ಬೀರುವ ಸಮಸ್ಯೆಯೂ ಹೌದು. ಹೀಗಾಗಿ, ಶುದ್ಧ ಇಂಧನವನ್ನು ಬಳಸುವುದು ದೇಶದ ಪ್ರಗತಿಗೆ ಪೂರಕವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

'ಇ20 ಪೆಟ್ರೋಲ್ ಬಳಕೆಯಿಂದಾಗಿ ಯಾವ ಕಾರೂ ಸಮಸ್ಯೆ ಎದುರಿಸಿಲ್ಲ... ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಣ ಇರುವ ಪೆಟ್ರೋಲ್ ಬಳಕೆಯ ಬಗ್ಗೆ ಸುಳ್ಳು ಸಂಕಥನಗಳನ್ನು ಹರಡಲಾಗುತ್ತಿದೆ. ಇವೆಲ್ಲ ಹಣ ಪಾವತಿಸಿ ನಡೆಸುವ ಅಭಿಯಾನಗಳು' ಎಂದು ಅವರು ದೂರಿದ್ದಾರೆ.

ಭಾರತದ ಪೆಟ್ರೋಲ್ ಬಂಕ್‌ಗಳಲ್ಲಿ ಇ20 (ಶೇ 20ರಷ್ಟು ಎಥೆನಾಲ್ ಮಿಶ್ರಣವಿರುವ ಪೆಟ್ರೋಲ್) ಮಾರಾಟ ಮಾಡಲಾಗುತ್ತಿದೆ. ಇಲ್ಲಿ ವಾಹನ ಮಾಲೀಕರಿಗೆ ಬೇರೆ ಆಯ್ಕೆ ಇಲ್ಲ. ಬ್ರೆಜಿಲ್‌ನಲ್ಲಿ ಇಂಧನ ತುಂಬಿಸಿಕೊಳ್ಳುವಾಗ ಆಯ್ಕೆ ನೀಡಲಾಗುತ್ತಿದೆ. ಹೆಚ್ಚಿನ ಪ್ರಮಾಣದ ಎಥೆನಾಲ್ ಇರುವ ಪೆಟ್ರೋಲ್ ಆಯ್ಕೆ ಮಾಡಿಕೊಂಡರೆ ಅಲ್ಲಿ ರಿಯಾಯಿತಿ ಸಿಗುತ್ತದೆ.

'ಗಡ್ಕರಿ ಕುಟುಂಬ ಸದಸ್ಯರು ಎಥೆನಾಲ್ ಉತ್ಪಾದನಾ ಉದ್ಯಮದಲ್ಲಿ ಇದ್ದಾರೆ, ಹೀಗಾಗಿ ಗಡ್ಕರಿ ಅವರು ಹೆಚ್ಚಿನ ಪ್ರಮಾಣದ ಎಥೆನಾಲ್ ಮಿಶ್ರಣವಿರುವ ಪೆಟ್ರೋಲ್ ಬಳಕೆಗೆ ಒತ್ತು ನೀಡುತ್ತಿದ್ದಾರೆ' ಎಂಬ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಿದ ಸಚಿವರು, 'ಕುಟುಂಬದ ಸದಸ್ಯರು ಸಕ್ಕರೆ ಕಾರ್ಖಾನೆಗಳ ಮಾಲೀಕರು. ಅವರ ಕಂಪನಿಗಳು ಎಥೆನಾಲ್ ಉತ್ಪಾದನೆಯನ್ನು ಅವಲಂಬಿಸಿಲ್ಲ' ಎಂದಿದ್ದಾರೆ.

ಜೋಳದಿಂದ ಎಥೆನಾಲ್ ಉತ್ಪಾದಿಸುವ ಕ್ರಮದಿಂದಾಗಿ ಉತ್ತರ ಪ್ರದೇಶ, ಬಿಹಾರದ ರೈತರಿಗೆ ಹೆಚ್ಚುವರಿಯಾಗಿ ಒಟ್ಟು ₹45 ಸಾವಿರ ಕೋಟಿ ಆದಾಯ ದೊರೆತಿದೆ ಎಂದಿದ್ದಾರೆ.

Publication Date
08/07/2026

Presented by

## ❖ 'ಮಲಯಾಳಂ ಕಲಿಕೆ ಕಡ್ಡಾಯವಲ್ಲ'

- ಜಿಲ್ಲೆಯ ಭಾಷಾ ಅಲ್ಪಸಂಖ್ಯಾತರಿಗೆ ಮಲಯಾಳಂ ಕಲಿಕೆ ಕಡ್ಡಾಯ ಕಾಯ್ದೆ ಅನ್ವಯವಾಗದು ಎಂದು ಕೇರಳಂ ಸರ್ಕಾರದ ಆಡಳಿತ ಭಾಷಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತಿಳಿಸಿದ್ದಾರೆ.
- ಕಾಸರಗೋಡಿನ ಕರಾವಳಿ ಸಾಂಸ್ಕೃತಿಕ ಪ್ರತಿಷ್ಠಾನ ಅಧ್ಯಕ್ಷ ಶಿವರಾಮ ಕಾಸರಗೋಡು ಅವರು ಸಲ್ಲಿಸಿದ್ದ ಮನವಿಗೆ ಉತ್ತರ ನೀಡಿರುವ ಅವರು, ಕಾಯ್ದೆಯ 5 ಮತ್ತು 6ನೇ ವಿಭಾಗಗಳಲ್ಲಿ ಯಾವುದೇ ವಿದ್ಯಾರ್ಥಿ ಮಲಯಾಳಂ ಹೊರತಾಗಿಯೂ ತಮ್ಮ ಆಯ್ಕೆಯ ಭಾಷೆಯನ್ನು ಕಲಿಯುವ ಅವಕಾಶ ರಾಜ್ಯದಲ್ಲಿದೆ. ಇದು ರಾಷ್ಟ್ರೀಯ ಭಾಷಾ ಪಠ್ಯಕ್ರಮಕ್ಕೆ ಅನುಸಾರವಾಗಿದೆ ಎಂದು ವಿವರಿಸಿದ್ದಾರೆ.
- ಕೇರಳಂ ಸರ್ಕಾರ ಜಾರಿಗೊಳಿಸಿರುವ ಮಲಯಾಳಂ ಕಲಿಕೆ ಕಡ್ಡಾಯ ಕಾಯ್ದೆಯಿಂದ ಭಾಷಾ ಅಲ್ಪಸಂಖ್ಯಾತ ಮಕ್ಕಳಿಗೆ ತೊಂದರೆಯಾಗಲಿದ್ದು, ಜಿಲ್ಲೆಯಕನ್ನಡ ಶಾಲೆಗಳನ್ನು ಈ ಕಾಯ್ದೆ ವ್ಯಾಪ್ತಿಯಿಂದ ಹೊರಗಿಡುವಂತೆ ಕನ್ನಡಪರ ಸಂಘಟನೆಗಳು ಆಗ್ರಹಿಸಿದ್ದವು.

## ❖ ಭದ್ರಾ : ಒಂದೇ ದಿನ2.2 ಅಡಿ ಹೆಚ್ಚಳ: ಹುಲಿಕಲ್‌ನಲ್ಲಿ ದಾಖಲೆ ಮಳೆ

- ಮಲೆನಾಡಿನ ಕೆಲವು ಜಿಲ್ಲೆಗಳಲ್ಲಿ ಮುಂಗಾರು ಬಿರುಸಾಗಿದ್ದು, ಕೊಡಗು ಭಾಗದಲ್ಲಿ ಬಿರುಸಾಗಿ ಗಾಳಿ ಬೀಸುತ್ತಿದೆ. ಕರಾವಳಿ ಪ್ರದೇಶಗಳಲ್ಲಿ ಮಳೆ ಪ್ರಮಾಣ ಕೊಂಚ ತಗ್ಗಿದೆ.
- ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿ ವ್ಯಾಪಕ ಮಳೆಯಾಗುತ್ತಿದೆ. ಹುಲಿಕಲ್‌ನಲ್ಲಿ 22.7 ಸೆಂ.ಮೀ ಮಳೆ ದಾಖಲಾಗಿದೆ.
- ಮಳೆ ಬಿರುಸುಗೊಂಡಿರುವುದರಿಂದ ಜಿಲ್ಲೆಯ ಭದ್ರಾ, ತುಂಗಾ ಹಾಗೂ ಲಿಂಗನಮಕ್ಕಿ ಅಣೆಕಟ್ಟೆಗಳಿಗೆ ಒಳಹರಿವು ಹೆಚ್ಚಳಗೊಂಡಿದೆ. ಭದ್ರಾ ಜಲಾಶಯಕ್ಕೆ ಈ ಹಂಗಾಮಿನ ಅತಿ ಹೆಚ್ಚು ಅಂದರೆ, 17,818 ಕ್ಯುಸೆಕ್ ಒಳಹರಿವು ದಾಖಲಾಗಿದ್ದು, 24 ಗಂಟೆಗಳಲ್ಲಿ ಜಲಾಶಯದಲ್ಲಿ ನೀರಿನ ಸಂಗ್ರಹ ಮಟ್ಟ 2.2 ಅಡಿಯಷ್ಟು ಏರಿಕೆಯಾಗಿದೆ. 185 ಅಡಿ ಸಂಗ್ರಹಣಾ ಸಾಮರ್ಥ್ಯದ ಜಲಾಶಯದಲ್ಲಿ ಜುಲೈ 7ರಂದು 140.6 ಅಡಿಯಷ್ಟು ನೀರು ಇದ್ದು, ಬುಧವಾರ ಅದು 142.8 ಅಡಿಗೆ ಹೆಚ್ಚಳಗೊಂಡಿದೆ.
- ಗಾಜನೂರು ಬಳಿ ಇರುವ ತುಂಗಾ ಜಲಾಶಯ ಭರ್ತಿ ಆಗಿರುವುದರಿಂದ ನದಿಗೆ 40,144 ಕ್ಯುಸೆಕ್ ನೀರು ಬಿಡಲಾಗುತ್ತಿದ್ದು, ಶಿವಮೊಗ್ಗದಲ್ಲಿ ತುಂಗಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಲಿಂಗನಮಕ್ಕಿ ಜಲಾಶಯಕ್ಕೆ 41,792 ಕ್ಯುಸೆಕ್ ಒಳಹರಿವು ಇದೆ.
- ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹೆತ್ತೂರು, ಯಸಳೂರು, ಹಾನಬಾಳು ಹೋಬಳಿಯಲ್ಲಿ ನಿರಂತರ ಮಳೆ ಸುರಿಯುತ್ತಿದೆ. ನದಿಗಳಲ್ಲಿ ನೀರಿನ ಹರಿವು ಹೆಚ್ಚಾಗಿದ್ದು ಹೇಮಾವತಿ ಜಲಾಶಯಕ್ಕೆ 16,593 ಕ್ಯುಸೆಕ್, ಯಗಚಿ ಜಲಾಶಯಕ್ಕೆ 919 ಕ್ಯುಸೆಕ್, ವಾಟೆಹೊಳೆ ಜಲಾಶಯಕ್ಕೆ 156.17 ಕ್ಯುಸೆಕ್ ಒಳಹರಿವು ದಾಖಲಾಗಿದೆ.
- ಹಾಸನ ತಾಲ್ಲೂಕಿನ ಬಿಟ್ಟಹಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮೇಲ್ಛಾವಣಿ ಕುಸಿದಿದೆ. ಶಾಲೆಯಲ್ಲಿ 15ಕ್ಕೂ ಅಧಿಕ ಮಕ್ಕಳು ಓದುತ್ತಿದ್ದು, ಶಾಲೆ ಆರಂಭಕ್ಕೂ ಮುನ್ನವೇ ಘಟನೆ ನಡೆದಿದ್ದರಿಂದ ಅನಾಹುತ ತಪ್ಪಿದೆ.
- ಕಬಿನಿ ಒಳಹರಿವು ಹೆಚ್ಚಳ: ಕೇರಳದ ವಯನಾಡು ಭಾಗದಲ್ಲಿ ಉತ್ತಮ ಮಳೆಯಿಂದಾಗಿ ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚಿದೆ. ಬುಧವಾರ ಜಲಾಶಯಕ್ಕೆ 10,757 ಕ್ಯುಸೆಕ್ ನೀರು ಹರಿದುಬಂದಿದೆ. ಮಂಗಳವಾರಕ್ಕೆ ಹೋಲಿಸಿದರೆ ಒಳಹರಿವಿನ ಪ್ರಮಾಣ ದುಪ್ಪಟ್ಟಾಗಿದೆ. ಮೈಸೂರಿನ ವಿವಿಧೆಡೆ ಬುಧವಾರ ಸಾಧಾರಣ ಮಳೆ ಸುರಿಯಿತು.

Dr. Rajkumar IAS/KAS Academy

8ನೇ ತರಗತಿ ಸಮಾಜ ವಿಜ್ಞಾನ ಪಠ್ಯಪುಸ್ತಕ: ಹೊಸ ಚರ್ಚೆಗೆ ಕಾರಣವಾದ ಎನ್‌ಸಿಇಆರ್‌ಟಿ ಕ್ರಮ

# ಪರಿಷ್ಕರಣೆಯಲ್ಲಿ ಮತ್ತೆ ಹಲವು ಬದಲಾವಣೆ

ನವದೆಹಲಿ (ಪಿಟಿಐ): ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) 8ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ಪರಿಷ್ಕರಿಸಿದೆ. ನ್ಯಾಯಾಂಗದ ಕುರಿತ ಪಾಠಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ತೀವ್ರ ಆಕ್ರೋಶ ವ್ಯಕ್ತಪಡಿಸಿ, ಪಠ್ಯಪುಸ್ತಕವನ್ನು ರದ್ದು ಮಾಡಿತ್ತು. ಬಳಿಕ, ತಜ್ಞರ ಸಮಿತಿಯು ನ್ಯಾಯಾಂಗದ ಪಠ್ಯದಲ್ಲಿ ಪರಿಷ್ಕರಣೆ ಮಾಡಿದೆ. ಆದರೆ, ಇದೇ ವೇಳೆ ದೇಶ ವಿಭಜನೆ, ಕಾಂಗ್ರೆಸ್ ಪಾತ್ರ, ಹಿಟ್ಲರ್ ಕುರಿತ ಪಠ್ಯದಲ್ಲಿನ ಕೆಲವು ಭಾಗಗಳನ್ನು ಕೈಬಿಟ್ಟು ಅಥವಾ ಪರಿಷ್ಕರಿಸಿ ಹೊಸದೊಂದು ಚರ್ಚೆಯನ್ನು ಹುಟ್ಟುಹಾಕಿದೆ. ವಿ.ಡಿ ಸಾವರ್ಕರ್ ಅವರ ಹೆಸರನ್ನೂ ಸೇರಿಸಲಾಗಿದೆ

## ‘ವಿಭಜನೆಯೊಂದೇ ದಾರಿಯಾಗಿತ್ತು: ಈಗಲೂ ಚರ್ಚಾರ್ಹ’

**ಪಾಠದ ಹೆಸರು: ಭಾರತದ ಸ್ವಾತಂತ್ರ್ಯ ಸುದೀರ್ಘ ಪಯಣ**

**ಮೊದಲು ಇದ್ದದ್ದು:** ಹಿಂದೂ ಹಾಗೂ ಮುಸ್ಲಿಂ ನಾಯಕರ ಮಧ್ಯದ ಭಿನ್ನಾಭಿಪ್ರಾಯದ ಅನುಕೂಲ ಪಡೆದುಕೊಂಡು, ಬ್ರಿಟಿಷರು ಭಾರತವನ್ನು ವಿಭಜಿಸಲು ನಿರ್ಧರಿಸಿದರು. ಜೊತೆಗೆ, ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸ್‌ನ ಹಲವು ನಾಯಕರು ವಿಭಜನೆ ಮಾಡುವುದರ ವಿರುದ್ಧ ಇದ್ದರು. ಮುಂದಿರುವ ದಾರಿ ಇದೊಂದೇ ಎನ್ನುವುದನ್ನು ಅರಿತು ವಿಭಜನೆ ಮಾಡಬೇಕಾಯಿತು

**ಪರಿಷ್ಕರಣೆ ಮಾಡಿದ್ದು:** ವಿಭಜನೆಯನ್ನು ಕಾಂಗ್ರೆಸ್ ನಾಯಕರೂ ವಿರೋಧಿಸಿದ್ದರು. ಇದನ್ನು ಒಪ್ಪಿಕೊಳ್ಳುವುದೇ ಮುಂದಿದ್ದ ಏಕೈಕ ಮಾರ್ಗವಾಗಿತ್ತು ಎಂಬುದು ಈಗಲೂ ಚರ್ಚಾರ್ಹ

- ‘ಕೋಮು ಸಂಘರ್ಷದ ಕಾರಣ ಉಂಟಾದ ಹತ್ಯಾಕಾಂಡದಿಂದಾಗಿ ಕಾಂಗ್ರೆಸ್ ನಾಯಕರು ಅಸಹಾಯಕರಾಗಿದ್ದರು. ಇದೇ ವಿಭಜನೆಗೆ ಕಾರಣವಾಯಿತು’ ಎಂಬ ವಾಕ್ಯವನ್ನು ಪರಿಷ್ಕರಣೆ ವೇಳೆ ಕೈಬಿಡಲಾಗಿದೆ
- ಸಂಪೂರ್ಣ ಸ್ವರಾಜ್ಯದ ಘೋಷಣೆ ಕುರಿತ ಪಠ್ಯದಲ್ಲಿ, ‘ವಿ.ಡಿ. ಸಾವರ್ಕರ್ ಅವರು 1925ರಲ್ಲಿ ಸ್ವರಾಜ್ಯಕ್ಕಾಗಿ ಆಗ್ರಹಿಸಿದ್ದರು’ ಎಂದು ಸೇರಿಸಲಾಗಿದೆ

## ಹಿಟ್ಲರ್, ನಾಝಿ ಪ್ರಸ್ತಾಪ ಕೈಬಿಡಲಾಗಿದೆ

**ಮೊದಲು ಇದ್ದಿದ್ದು:** ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಸೇನೆಯೊಂದನ್ನು ಕಟ್ಟಲು ಹಿಟ್ಲರ್ ಸಹಕಾರವನ್ನು ಕೋರಿದ್ದರು. ಜರ್ಮನಿಯ ನಾಯಕ ಹಿಟ್ಲರ್ ಒಬ್ಬ ಸರ್ವಾಧಿಕಾರಿಯಾಗಿದ್ದು, ಆತನ ನಾಝಿ ಸಿದ್ಧಾಂತ ಮತ್ತು ತನ್ನ ದೇಶದ ಗಡಿಯನ್ನು ವಿಸ್ತರಿಸಿಕೊಳ್ಳುವ ಹಪಾಹಪಿತನವೇ ಎರಡನೇ ವಿಶ್ವಯುದ್ಧಕ್ಕೆ ದಾರಿ ಮಾಡಿಕೊಟ್ಟಿತು

**ಪರಿಷ್ಕರಣೆ ಮಾಡಿದ್ದು:** ನೇತಾಜಿ ಸುಭಾಷ್ ಚಂದ್ರ ಬೋಸ್ ಅವರು ಬ್ರಿಟಿಷ್ ವಿರೋಧಿ ಪಡೆಗಳಿಂದ ಸಹಕಾರ ಕೋರಿದ್ದರು

## ‘ಆರ್ಥಿಕವಾಗಿ ಹಿಂದುಳಿಯುವಿಕೆ ಆಧಾರದಲ್ಲಿ ತಾರತಮ್ಯವೂ ಕಾನೂನುಬಾಹಿರ’

**ಪಾಠ: ಪೌರತ್ವ: ಹಕ್ಕುಗಳು ಮತ್ತು ಕರ್ತವ್ಯಗಳು**

‘ಜಾತಿ, ಧರ್ಮ, ಲಿಂಗ, ಅಂಗವೈಕಲ್ಯ, ದೈಹಿಕವಾಗಿ ಹೇಗೆ ಕಾಣುತ್ತಾರೆ, ಜನಾಂಗದ ಆಧಾರದಲ್ಲಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಆಧಾರದಲ್ಲಿ ಯಾವುದೇ ವ್ಯಕ್ತಿಯನ್ನು ಅಥವಾ ಗುಂಪೊಂದನ್ನು ತಾರತಮ್ಯದಿಂದ ಕಾಣುವುದು ದುರ್ನಡತೆಯಾಗುತ್ತದೆ. ಇದು ನೈತಿಕವಾಗಿ ಮಾತ್ರವಲ್ಲ ಕಾನೂನಾತ್ಮಕವಾಗಿಯೂ ತಪ್ಪು. ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳಿಂದ ಬರುವ ಮಕ್ಕಳು, ಪಕ್ಷಪಾತವನ್ನು ಅನುಭವಿಸಬಹುದು. ಈ ಮಕ್ಕಳನ್ನು ತಾರತಮ್ಯದಿಂದ ನಡೆಸಿಕೊಳ್ಳಬಹುದು’ ಎಂದು ಪಠ್ಯದಲ್ಲಿ ಪರಷ್ಕರಣೆ ಮಾಡಲಾಗಿದೆ.

ಕೇಂದ್ರ ಸರ್ಕಾರದ ಯುಜಿಸಿ (ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆ ಉತ್ತೇಜನ) ನಿಯಮಾವಳಿಗಳು 2026ರಲ್ಲಿದ್ದ ‘ಜಾತಿ ತಾರತಮ್ಯದ ವ್ಯಾಖ್ಯಾನ’ದ ಕುರಿತು ದೊಡ್ಡ ಮಟ್ಟದ ವಿವಾದ ಸೃಷ್ಟಿಯಾಗಿತ್ತು. ಈ ಬಳಿಕ, ಪಠ್ಯಪುಸ್ತಕದಲ್ಲಿ ಈ ಪರಿಷ್ಕರಣೆ ಮಾಡಲಾಗಿದೆ.

# ವಯನಾಡ್ ಅಭಿವೃದ್ಧಿಯೋ ಉರುಳು?

ಕೇರಳಂನ ವಯನಾಡ್ ಜಿಲ್ಲೆಯ ಮೇಪ್ಪಾಡಿ ಬಳಿಯ ಕಳ್ಳಾಡಿಯಲ್ಲಿ ಮಣ್ಣು ಕುಸಿತ ಘಟನೆ ಸಂಭವಿಸಿದ್ದು, ವಯನಾಡ್‌ನ ಅವಘಡಗಳಿಗೆ ಮತ್ತೊಂದು ಸೇರ್ಪಡೆಯಾಗಿದೆ. ಈ ಪ್ರದೇಶದಲ್ಲಿ ಪದೇ ಪದೇ ಭೂಕುಸಿತ ಘಟನೆಗಳು ವರದಿಯಾಗುತ್ತಿವೆ. ಆದರೆ, ರಸ್ತೆ ನಿರ್ಮಾಣ, ಸುರಂಗ ನಿರ್ಮಾಣ, ಗಣಿಗಾರಿಕೆಯಂಥ ಚಟುವಟಿಕೆಗಳು ಮಾತ್ರ ನಿಂತಿಲ್ಲ. ಪ್ರಕೃತಿ ನೀಡುತ್ತಿರುವ ಎಚ್ಚರಿಕೆಯನ್ನು ನಿರ್ಲಕ್ಷಿಸುತ್ತಿರುವುದೇ ಇಂಥ ಅವಘಡಗಳು ಮರುಕಳಿಸಲು ಕಾರಣ. ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಅಭಿವೃದ್ಧಿ ಯೋಜನೆಗಳಿಂದ ಭಾರಿ ವಿನಾಶ ಸಂಭವಿಸುವ ಮುನ್ನ ಎಚ್ಚೆತ್ತುಕೊಳ್ಳಬೇಕಿದೆ ಎನ್ನುತ್ತಿದ್ದಾರೆ ತಜ್ಞರು

ಪ್ರಜಾವಾಣಿ ವಾರ್ತೆ

**2024ರ** ಜುಲೈ 30. ಕೇರಳಂನ ವಯನಾಡ್ ಜಿಲ್ಲೆ ಭಾರಿ ಅವಘಡಕ್ಕೆ ಸಾಕ್ಷಿಯಾಗಿತ್ತು. ಮುಂಡಕ್ಕೈ, ಚೂರಲ್‌ಮಲದಲ್ಲಿ ಭೂಕುಸಿತ ಉಂಟಾಗಿ ಸುಮಾರು 400 ಮಂದಿ ಮಣ್ಣಾಗಿಹೋಗಿದ್ದರು. ಎರಡು ವರ್ಷಗಳ ನಂತರ ಅದೇ ವಯನಾಡ್ ಜಿಲ್ಲೆಯಲ್ಲಿ ಅಂಥದೇ ಅವಘಡ ಸಂಭವಿಸಿದೆ. ಅನಕ್ಕಂಪೊಯಿಲ್ ಕಳ್ಳಾಡಿ ಮೇಪ್ಪಾಡಿ ಅವಳಿ ಸುರಂಗ ನಿರ್ಮಾಣ ಕಾಮಗಾರಿ ಸ್ಥಳದ ಬಳಿ ಭಾರಿ ಪ್ರಮಾಣದಲ್ಲಿ ಮಣ್ಣುಕುಸಿದು ಐವರು ಸಾವಿಗೀಡಾಗಿದ್ದು, ಹಲವರು ಕಣ್ಮರೆಯಾಗಿದ್ದಾರೆ. ಬಿಹಾರ, ಜಾರ್ಖಂಡ್, ಮಧ್ಯಪ್ರದೇಶದಿಂದ ಜೀವನೋಪಾಯಕ್ಕಾಗಿ ಬಂದಿದ್ದವರು ಜೀವ ಬಿಟ್ಟಿದ್ದಾರೆ. ಭೂಮಿಯೇ ಚಲಿಸಿದಂತೆ ಕಾಣುವ, ವಾಹನಗಳು, ಜನರನ್ನು ಆವರಿಸುವ ದೃಶ್ಯಗಳು ಘಟನೆಯ ಭೀಕರತೆಯನ್ನು ಹೇಳುತ್ತಿವೆ.

ಅವಳಿ ಸುರಂಗಕ್ಕಾಗಿ ಅಗೆದ ಮಣ್ಣನ್ನು ಬೃಹತ್ ಪ್ರಮಾಣದಲ್ಲಿ ಗುಡ್ಡೆ ಹಾಕಿದ್ದರು. ಒಂದೇ ದಿನ 20 ಸೆಂ.ಮೀ.ಗೂ ಹೆಚ್ಚು ಮಳೆ ಬಿದ್ದಿದ್ದರಿಂದ ಮಣ್ಣು ಕುಸಿದಿದೆ ಎನ್ನುವುದು ಕೇರಳಂ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರ ಅಭಿಪ್ರಾಯ. ಆದರೆ, ಪರಿಸರವಾದಿಗಳು ಅದನ್ನು ಒಪ್ಪಲು ಸಿದ್ಧರಿಲ್ಲ. 2024ರಲ್ಲಿ ದುರ್ಘಟನೆ ಸಂಭವಿಸಿದ್ದ ಮುಂಡಕ್ಕೈ, ಚೂರಲ್‌ಮಲಕ್ಕೂ, ಪ್ರಸ್ತುತ ಘಟನೆ ಸಂಭವಿಸಿರುವ ಕಳ್ಳಾಡಿಗೂ ಐದು ಕಿ.ಮೀ. ಅಂತರ. 2019ರಲ್ಲಿ ಪುತ್ತುಮಲದಲ್ಲಿ ಭೂಕುಸಿತವಾಗಿತ್ತು. ಪುತ್ತುಮಲಕ್ಕೂ ಕಳ್ಳಾಡಿಗೂ ಕೇವಲ 800 ಮೀ. ದೂರ. ಕೆಲವೇ ಕಿ.ಮೀ.ಅಂತರದಲ್ಲಿ ಪದೇ ಪದೇ ಭೂಕುಸಿತವ ಸಂಭವಿಸುತ್ತಿದೆ. ಪ್ರಸ್ತುತ ಕಳ್ಳಾಡಿಯಲ್ಲಿ ಕುಸಿದಿರುವುದು ರಾಶಿಹಾಕಿದ ಮಣ್ಣಿನ ಗುಡ್ಡ ಅಲ್ಲ; ಅಲ್ಲಿ ಭೂಕುಸಿತವಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಕೋಯಿಕ್ಕೋಡ್-ವಯನಾಡ್ ನಡುವಿನ, 8 ಕಿ.ಮೀ. ಉದ್ದದ, ₹2,134 ಕೋಟಿ ವೆಚ್ಚದ ಸುರಂಗ ಮಾರ್ಗವು ಈ ಭಾಗದ ಜನರ ಬದುಕನ್ನೇ ಬದಲಾಯಿಸಲಿದೆ ಎಂದೇ ಇದುವರೆಗಿನ ಸರ್ಕಾರಗಳು ಪ್ರತಿಪಾದಿಸಿವೆ. ಆದರೆ, ಭೂಗರ್ಭಶಾಸ್ತ್ರಜ್ಞರು, ಪರಿಸರವಾದಿಗಳು ಮತ್ತು ಸ್ಥಳೀಯರು ಆರಂಭದಿಂದಲೂ ಈ ಯೋಜನೆಯನ್ನು ವಿರೋಧಿಸುತ್ತಲೇ ಇದ್ದಾರೆ.



ಕಳ್ಳಾಡಿಯಲ್ಲಿ ಮಣ್ಣುಕುಸಿತ ಸಂಭವಿಸಿದ ಸ್ಥಳದಲ್ಲಿ ಬುಧವಾರ ರಕ್ಷಣಾ ಕಾರ್ಯಾಚರಣೆ ನಡೆಯಿತು —ಪಿಟಿಐ ಚಿತ್ರ

ಕೇಂದ್ರ ಸರ್ಕಾರದಿಂದ ಯೋಜನೆಗೆ ಅನುಮತಿ ಪಡೆಯಲು ಕೇರಳಂ ಸರ್ಕಾರವು ತಪ್ಪು ಮಾಹಿತಿ ನೀಡಿತ್ತು ಎಂದು ಪರಿಸರವಾದಿಗಳು ಆರೋಪಿಸಿದ್ದರು. ಪರಿಸರ ಸೂಕ್ಷ್ಮ ವಲಯದಲ್ಲಿ ಹಾದುಹೋಗುವುದು, ಭೂಕುಸಿತದ ಸಂಭವ ಇರುವುದು, ಆದಿವಾಸಿಗಳ ನೆಲೆಯಾಗಿರುವುದು ಇಂಥ ಅಂಶಗಳನ್ನು ಮರೆಮಾಚಿ ಅನುಮತಿ ಪಡೆಯಲಾಗಿದೆ ಎನ್ನಲಾಗಿತ್ತು. ಈ ಸಂಬಂಧ ಕೆಲವರು ಕೇರಳ ಹೈಕೋರ್ಟ್‌ನಲ್ಲಿ ದಾವೆ ಹೂಡಿದರು. ಆದರೆ, ಮೊದಲು ಹೈಕೋರ್ಟ್ ಮತ್ತು ನಂತರ ಸುಪ್ರೀಂ ಕೋರ್ಟ್- ಎರಡೂ ಯೋಜನೆಯ ಪರವಾಗಿಯೇ ಆದೇಶ ನೀಡಿದವು.

ವೆಲ್ಲಾರಿಮಲ-ಚೆಂಬ್ರಾ-ಆರನ್‌ಮಲ ಭೂಪ್ರದೇಶವು ಭಾರತದ ಪ್ರಸ್ಥಭೂಮಿಯಲ್ಲಿಯೇ ಅತ್ಯಂತ ಹಳೆಯ ರಚನೆಯಾಗಿದೆ. ಆದರೆ, ಲಕ್ಷಾಂತರ ವರ್ಷಗಳ ಪ್ರಾಕೃತಿಕ ಬದಲಾವಣೆಗಳು ಈ ರಚನೆಗಳಲ್ಲಿ ಬಿರುಕು ಮೂಡಿಸಿದ್ದು, ಭಾರಿ ಪ್ರಮಾಣದಲ್ಲಿ ಎಡೆಬಿಡದೆ ಮಳೆ ಸುರಿದರೆ ಅವು ಕುಸಿಯುವ ಅಪಾಯ ಇರುತ್ತದೆ ಎಂದು ತಜ್ಞರು ಎಚ್ಚರಿಸಿದ್ದರು. ಸುರಂಗ, ರಸ್ತೆ ನಿರ್ಮಾಣದಂಥ ಚಟುವಟಿಕೆಗಳಿಂದ ಮಣ್ಣಿನ ರಚನೆ ಮತ್ತಷ್ಟು ಸಡಿಲಗೊಂಡಿರುತ್ತದೆ. ಹವಾಮಾನ ಬದಲಾವಣೆಯ ಕಾರಣಕ್ಕೆ ಕೆಲವೇ ಗಂಟೆಗಳಲ್ಲಿ ಭಾರಿ ಪ್ರಮಾಣದಲ್ಲಿ ಮಳೆ ಸುರಿಯವುದು ಹೆಚ್ಚಾಗಿದೆ. ಈ ಎಲ್ಲವೂ ಕಳ್ಳಾಡಿ ಘಟನೆಗೆ ಕಾರಣ ಎಂದು ತಜ್ಞರು ವಿಶ್ಲೇಷಿಸುತ್ತಿದ್ದಾರೆ.

ಪಶ್ಚಿಮ ಘಟ್ಟಗಳು ಪರಿಸರ ಸೂಕ್ಷ್ಮ ಪ್ರದೇಶಗಳಾಗಿದ್ದು, ಜೀವವೈವಿಧ್ಯ ಮತ್ತು ಸಸ್ಯವೈವಿಧ್ಯಕ್ಕೆ ಹೆಸರುವಾಸಿಯಾಗಿವೆ, ಯುನೆಸ್ಕೊ ಪಾರಂಪರಿಕ ಪಟ್ಟಿಯಲ್ಲೂ ಸ್ಥಾನ ಪಡೆದಿವೆ. ಆದರೆ, ಈ ಭಾಗದಲ್ಲಿ ನಡೆಯುತ್ತಿರುವ ಅವೈಜ್ಞಾನಿಕವಾದ ಅಭಿವೃದ್ಧಿ ಯೋಜನೆಗಳು ಜೀವಿ ಪರಿಸರ ಮತ್ತು ಸಸ್ಯ ಪರಿಸರ ಎರಡನ್ನೂ ಹಾಳು ಮಾಡುತ್ತಿರುವುದಲ್ಲದೇ ಪ್ರಾಕೃತಿಕ ವಿಕೋಪಗಳಿಗೂ ಕಾರಣವಾಗುತ್ತಿವೆ. ಪಶ್ಚಿಮ ಘಟ್ಟಗಳಲ್ಲಿ ಮನುಷ್ಯರ ಹಸ್ತಕ್ಷೇಪ, ಪರಿಸರ ವಿನಾಶದ ಪರಿಣಾಮಗಳ ಬಗ್ಗೆ ಮಾಧವ ಗಾಡ್ಗೀಳ್ ಮತ್ತು ಕಸ್ತೂರಿ ರಂಗನ್ ವರದಿಯಲ್ಲಿ ಎಚ್ಚರಿಸಲಾಗಿತ್ತು. ಆದರೆ, ಅವು ಅವಾಸ್ತವಿಕ ಎಂದು ತಳ್ಳಿಹಾಕಲಾಯಿಯತು. ಪಶ್ಚಿಮ ಘಟ್ಟಗಳ ಮೇಲಿನ ನಿರಂತರ ಮಾನವ ಹಸ್ತಕ್ಷೇಪ, ಬೃಹತ್ ಅಭಿವೃದ್ಧಿ ಯೋಜನೆಗಳು ಮುಂದುವರಿದಿದ್ದು, ಅದರ ಪರಿಣಾಮವನ್ನು ಪದೇ ಪದೇ ಕಾಣುವಂತಾಗಿದೆ. ಪ್ರಸ್ತುತ ಕಳ್ಳಾಡಿಯಲ್ಲಿ ಸಂಭವಿಸಿರುವುದು ಅದೇ ಎನ್ನುತ್ತಾರೆ ಪರಿಸರ ತಜ್ಞರು.

ಒಂದು ಕಾಲದಲ್ಲಿ ಪ್ರಾಕೃತಿಕ ಸೌಂದರ್ಯ, ಕರಿಮೆಣಸು ಮತ್ತು ಅರಿಸಿನಕ್ಕೆ ದೇಶದಾಚೆಗೂ ಹೆಸರಾಗಿದ್ದ ವಯನಾಡ್ ಇಂದು ಕೇವಲ ಪ್ರಾಕೃತಿಕ ವಿಕೋಪ, ಭೂಕುಸಿತದಂಥ ಅವಘಡಗಳಿಂದ ಸುದ್ದಿಯಾಗುತ್ತಿದೆ.


ಆಧಾರ: ಪಿಟಿಐ, 2024ರ ವಯನಾಡ್ ದುರಂತಕ್ಕೆ ಸಂಬಂಧಿಸಿದ ವರ್ಲ್ಡ್ ವೆದರ್ ಆಟ್ರಿಬ್ಯೂಷನ್‌ನ ತಜ್ಞರ ವರದಿ, ಡೌನ್ ಟು ಅರ್ಥ್, ಕೇರಳಂ ಕಂದಾಯ ಇಲಾಖೆಯ 2024ರ ವಯನಾಡ್ ಭೂಕುಸಿತ ಕುರಿತ ವರದಿ, ಮಾಧ್ಯಮ ವರದಿಗಳು

### ಭೂಕುಸಿತದ ಅಪಾಯ ಹೆಚ್ಚು

ಕೇರಳ, ಕರ್ನಾಟಕ ಸೇರಿದಂತೆ ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಭೂಕುಸಿತದ ಅಪಾಯ ಹೆಚ್ಚು ಎನ್ನುವುದನ್ನು ಹಲವು ಅಧ್ಯಯನ, ಸಂಶೋಧನೆಗಳು ಹೇಳಿವೆ.

ಮುಂಗಾರಿನಲ್ಲಿ ಭಾರಿ ಮಳೆ, ಇಳಿಜಾರು ಪ್ರದೇಶ ಹೆಚ್ಚಾಗಿರುವುದು, ಪಶ್ಚಿಮ ಘಟ್ಟ ಪ್ರದೇಶದ ಮಣ್ಣು ಜೇಡಿ, ಮರಳು ಮಿಶ್ರಿತವಾಗಿರುವುದರಿಂದ ಮಣ್ಣಿನ ಸವಕಳಿ ಹೆಚ್ಚಿರುವುದು ಭೂಕುಸಿತಕ್ಕೆ ಪ್ರಮುಖ ಕಾರಣ.

ಕೇರಳಂನ ವಯನಾಡ್, ಮಲಪ್ಪುರ, ಪಾಲಕ್ಕಾಡ್, ಇಡುಕ್ಕಿ, ಕರ್ನಾಟಕದ ಕೊಡಗು, ಚಿಕ್ಕಮಗಳೂರು, ಉತ್ತರ ಕನ್ನಡ ಸೇರಿದಂತೆ ಪಶ್ಚಿಮ ಘಟ್ಟ ವ್ಯಾಪ್ತಿಯ ಹಲವು ಜಿಲ್ಲೆಗಳಲ್ಲಿ ಭೂ ಬಳಕೆ ಮತ್ತು ಅದರ ಮೇಲ್ಮೈನ ಸ್ವರೂಪ ಬದಲಾವಣೆಯಾಗಿದೆ. ಗಣಿಗಾರಿಕೆಗೆ ಕಡಿವಾಣ ಬಿದ್ದಿಲ್ಲ. ಪ್ಲಾಂಟೇಷನ್ ವಿಸ್ತರಿಸಲಾಗುತ್ತಿದೆ. ಮೂಲಸೌಕರ್ಯ ಯೋಜನೆಗಳ ಅವೈಜ್ಞಾನಿಕ ಕಾಮಗಾರಿಗಳು ಹೆಚ್ಚುತ್ತಿವೆ. ಇದರೊಂದಿಗೆ ಹವಾಮಾನ ಬದಲಾವಣೆಯ ಪರಿಣಾಮವಾಗಿ ಕಡಿಮೆ ಅವಧಿಯಲ್ಲಿ ಸುರಿಯುವ ಭಾರಿ ಮಳೆಯು ಭೂಮಿಯ ಮೇಲ್ಪದರವನ್ನು ಸಡಿಲಗೊಳಿಸಿ ಭಾರಿ ಪ್ರಮಾಣದಲ್ಲಿ ಭೂಮಿ ಕುಸಿಯುವಂತೆ ಮಾಡುತ್ತಿದೆ ಎಂಬುದು ತಜ್ಞರ ವಾದ.




## ಪರಿಸರ ಸೂಕ್ಷ್ಮ ಪಶ್ಚಿಮ ಘಟ್ಟ

### ಗಾಡ್ಗೀಳ್ ವರದಿ ಹೇಳಿದ್ದೇನು?

- ಆರು ರಾಜ್ಯಗಳಲ್ಲಿ ಹರಡಿರುವ ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿತ್ತು. ಆ ಪ್ರದೇಶದ ಮಣ್ಣಿನ ಗುಣಲಕ್ಷಣ, ಅರಣ್ಯ, ಜೀವ ವೈವಿಧ್ಯದ ಆಧಾರದ ಮೇಲೆ ಪರಿಸರ ಸೂಕ್ಷ್ಮ ವಲಯವನ್ನು ಮೂರು ರೀತಿಯಲ್ಲಿ ವರ್ಗೀಕರಣ ಮಾಡಿತ್ತು (ಇಎಸ್‌ಝಡ್-1, 2 ಮತ್ತು 3).
- ಅತ್ಯಂತ ಹೆಚ್ಚು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಲಾಗಿರುವ ಪ್ರದೇಶಗಳಲ್ಲಿ (ಇಎಸ್‌ಝಡ್-1, ಇಎಸ್‌ಝಡ್-2) ಅಭಿವೃದ್ಧಿ ಕಾರ್ಯಗಳನ್ನು (ರಸ್ತೆಗಳು, ಅಣೆಕಟ್ಟು, ರೈಲು ಮಾರ್ಗ, ಬೃಹತ್ ವಸತಿ ಯೋಜನೆ ಇನ್ನಿತರ ಮೂಲಸೌಕರ್ಯ ಯೋಜನೆಗಳು) ಸಂಪೂರ್ಣವಾಗಿ ನಿರ್ಬಂಧಿಸಬೇಕು. ಅತ್ಯಂತ ಅವಶ್ಯಕ ಎಂದು ಕಂಡು ಬಂದರೆ ಮಾತ್ರ ಕೈಗೆತ್ತಿಕೊಳ್ಳಬಹುದು ಎಂದು ಹೇಳಿತ್ತು
- ಗಣಿಗಾರಿಕೆ, ಕ್ವಾರಿ, ಪರಿಸರಕ್ಕೆ ಹಾನಿ ಮಾಡುವ ಕಾರ್ಖಾನೆಗಳ ಸ್ಥಾಪನೆಗೆ ಅವಕಾಶ ನೀಡಬಾರದು
- ಪರಿಸರ ಸೂಕ್ಷ್ಮ ವಲಯದ ವ್ಯಾಪ್ತಿಯಲ್ಲಿ ಕುಲಾಂತರಿ ಬೆಳೆಗಳು, ಒಂದೇ ರೀತಿಯ ವಾಣಿಜ್ಯ ಬೆಳೆಗಳಿಗೆ ಅವಕಾಶ ನೀಡಬಾರದು. ಪರಿಸರ ಸ್ನೇಹಿ, ಸುಸ್ಥಿರವಾದ ಕೃಷಿ ಚಟುವಟಿಕೆಗಳಿಗೆ ಮಾತ್ರ ಅವಕಾಶ ನೀಡಬೇಕು



### ಕಸ್ತೂರಿ ರಂಗನ್ ವರದಿ ಹೇಳಿದ್ದೇನು?

- ಪಶ್ಚಿಮ ಘಟ್ಟದ ಒಟ್ಟಾರೆ ವಿಸ್ತೀರ್ಣದಲ್ಲಿ ಶೇ 37ರಷ್ಟು ಅಂದಾಜು 60 ಸಾವಿರ ಚದರ ಕಿ.ಮೀ ಪ್ರದೇಶ ಸೂಕ್ಷ್ಮ ಪರಿಸರ ಎಂದು ಪರಿಗಣಿಸಲು ಹೇಳಿತ್ತು
- ಪರಿಸರ ಸೂಕ್ಷ್ಮ ವಲಯದಲ್ಲಿ ಗಣಿಗಾರಿಕೆ, ಕ್ವಾರಿ, ಮರಳು ಗಣಿಗಾರಿಕೆಗೆ ಸಂಪೂರ್ಣ ನಿರ್ಬಂಧ ಹೇರಬೇಕು
- ಕೂಲಂಕಷ ಅಧ್ಯಯನದ ಬಳಿಕವಷ್ಟೇ ಉಷ್ಣ ವಿದ್ಯುತ್ ಸ್ಥಾವರ ಅಥವಾ ಜಲವಿದ್ಯುತ್ ಸ್ಥಾವರ ನಿರ್ಮಾಣಕ್ಕೆ ಅವಕಾಶ ನೀಡಬೇಕು
- ಪರಿಸರಕ್ಕೆ ಹಾನಿ ಮಾಡುವ ಕೈಗಾರಿಕೆಗಳಿಗೆ ಸಂಪೂರ್ಣ ನಿರ್ಬಂಧ ವಿಧಿಸಬೇಕು


### ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

**ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ**

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

**ವಿಳಾಸ**

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001




### ಆಗುಂಬೆ, ಶಿರಾಡಿ ಸುರಂಗ ಮಾರ್ಗ ಚರ್ಚೆ

ವಯನಾಡ್‌ನಲ್ಲಿ ಮಂಗಳವಾರ ದುರಂತ ನಡೆದ ಬೆನ್ನಿಗೇ, ರಾಜ್ಯದ ಆಗುಂಬೆ ಮತ್ತು ಶಿರಾಡಿ ಘಾಟಿಗಳಲ್ಲಿ ನಿರ್ಮಿಸಲು ಪ್ರಸ್ತಾಪಿಸಲಾಗಿರುವ ಸುರಂಗ ಮಾರ್ಗಗಳ ಕುರಿತ ಚರ್ಚೆ ಮುನ್ನೆಲೆಗೆ ಬಂದಿದೆ.

ಶಿವಮೊಗ್ಗ ಜಿಲ್ಲೆಯ ಆಗುಂಬೆ ಮತ್ತು ಉಡುಪಿ ಜಿಲ್ಲೆಯ ಹೆಬ್ರಿ ನಡುವೆ 20.85 ಕಿ.ಮೀ ಪಾದಚಾರಿ ಮಾರ್ಗ ಒಳಗೊಂಡ ದ್ವಿಪಥ ರಸ್ತೆ ನಿರ್ಮಾಣಕ್ಕೆ ಡಿಪಿಆರ್ ತಯಾರಿಸಲು ಕೇಂದ್ರದ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ₹2.33 ಕೋಟಿ ಮೊತ್ತದ ಟೆಂಡರ್ ಅನ್ನು ಈ ವರ್ಷದ ಫೆಬ್ರುವರಿಯಲ್ಲಿ ಕರೆದಿದೆ. ಡಿಪಿಆರ್ ವ್ಯಾಪ್ತಿಯು ನಿರ್ದಿಷ್ಟವಾಗಿ ಸುರಂಗ ವಿನ್ಯಾಸ ತಜ್ಞರು ಮತ್ತು ಹಿರಿಯ ಭೂ-ಭೌತಶಾಸ್ತ್ರಜ್ಞರ ತೊಡಗಿಸಿಕೊಳ್ಳುವಿಕೆಯನ್ನೂ ಒಳಗೊಂಡಿದೆ. ಸುರಂಗ ಮಾರ್ಗ ನಿರ್ಮಾಣದ ಆಯ್ಕೆಯ ಕಾರ್ಯಸಾಧ್ಯತೆ ಪರೀಕ್ಷಿಸಲು, ವಿವರವಾದ ಭೂ-ತಾಂತ್ರಿಕ ಪರಿಶೀಲನೆಗೂ ಇದರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಇದಕ್ಕೆ ಸ್ಥಳೀಯರು ಸೇರಿದಂತೆ ಪರಿಸರವಾದಿಗಳು ವಿರೋಧಿಸುತ್ತಿದ್ದಾರೆ. ವಯನಾಡ್ ಮಾದರಿಯಲ್ಲಿ ಆಗುಂಬೆ ಪರಿಸರ ಕೂಡ ಅತ್ಯಂತ ಸೂಕ್ಷ್ಮವಾಗಿದ್ದು, ಮಣ್ಣು ಸದೃಢವಾಗಿಲ್ಲ. ಅಲ್ಲಿ ಸುರಂಗ ನಿರ್ಮಾಣ ಕೈಗೆತ್ತಿಕೊಂಡರೆ ಪರಿಸರಕ್ಕೆ ತೀವ್ರ ಹಾನಿಯಾಗಲಿದೆ. ಮತ್ತೊಂದು ಭಾರಿ ದುರಂತಕ್ಕೆ ನಾವೇ ದಾರಿ ಮಾಡಿಕೊಟ್ಟಂತಾಗುತ್ತದೆ ಎಂಬರ್ಥದ ಅಭಿಪ್ರಾಯಗಳನ್ನು ಜಾಲತಾಣಿಗರು, ಪರಿಸರವಾದಿಗಳು ವ್ಯಕ್ತಪಡಿಸುತ್ತಿದ್ದಾರೆ.

ಇತ್ತ ಶಿರಾಡಿ ಘಾಟಿಯಲ್ಲಿ ಸುರಂಗ ಮಾರ್ಗ ನಿರ್ಮಾಣ ಮಾಡುವ ಪ್ರಸ್ತಾವ ಕೇಂದ್ರದ ಮುಂದೆ ಇದ್ದು, ಈ ಯೋಜನೆಯ ಡಿಪಿಆರ್ ತಯಾರಿಸಲಾಗುತ್ತಿದೆ. ಸುರಂಗ ರಸ್ತೆ ವಿನ್ಯಾಸಕ್ಕೆ ವಿನ್ಯಾಸ ಅನುಮೋದನೆ ಸಮಿತಿ ಒಪ್ಪಿಗೆಯನ್ನೂ ನೀಡಿದೆ.

‘ಈಗ ನಡೆಯುತ್ತಿರುವ ಅವೈಜ್ಞಾನಿಕ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯಿಂದಾಗಿ ಈ ರೀತಿ ಆಗುತ್ತಿದೆ. ಎತ್ತಿನ ಹೊಳೆ ಯೋಜನೆ ಕೂಡ ಭೂಕುಸಿತದ ಹಿಂದಿದೆ. ಈಗಾಗಲೇ ಕಿರು ಜಲವಿದ್ಯುತ್ ಯೋಜನೆ ಕೂಡ ಅನುಷ್ಠಾನ ಮಾಡಲಾಗಿದೆ. ಸುರಂಗ ಮಾರ್ಗ ನಿರ್ಮಾಣ ಮಾಡಿದರೆ, ಘಾಟಿಯ ಭೂಪ್ರದೇಶದ ಮೇಲೆ ಇನ್ನಷ್ಟು ಒತ್ತಡ ಉಂಟಾಗಲಿದೆ. ಇದು ಇನ್ನಷ್ಟು ಅಪಾಯ ತಂದೊಡ್ಡಲಿದೆ’ ಎಂಬುದು ಪರಿಸರವಾದಿಗಳ ಆತಂಕ.

## ❖ ಪ್ರಧಾನಿ ಮೋದಿ ಆಸ್ಟ್ರೇಲಿಯಾ ಭೇಟಿ

- ಪ್ರಧಾನಿ ನರೇಂದ್ರ ಮೋದಿ ಅವರು ಮೂರು ದಿನಗಳ ಇಂಡೊನೇಷ್ಯಾ ಭೇಟಿ ಬಳಿಕ ಬುಧವಾರ ರಾತ್ರಿ ವೇಳೆಗೆ ಆಸ್ಟ್ರೇಲಿಯಾ ತಲುಪಿದರು. ಆಸ್ಟ್ರೇಲಿಯಾದಲ್ಲಿ ಪ್ರಧಾನಿ ಮೋದಿ ಅವರು ಜುಲೈ 10ರವರೆಗೆ ಇರಲಿದ್ದಾರೆ.
- ಈ ಬಗ್ಗೆ ಪೋಸ್ಟ್ ಹಂಚಿಕೊಂಡಿರುವ ಪ್ರಧಾನಿ ಮೋದಿ, 'ಮೆಲ್ಬರ್ನ್‌ನಲ್ಲಿಬಂದಿಳಿದಿದ್ದೇನೆ. ಈ ಪ್ರವಾಸವು ಭಾರತ-ಆಸ್ಟ್ರೇಲಿಯಾದ ಸಂಬಂಧಕ್ಕೆ ಚೈತನ್ಯ ತುಂಬಲಿದೆ. ಪ್ರಧಾನಿ ಅಂಥೋನಿ ಅಲ್ಬನೀಸ್ ಅವರೊಂದಿಗೆ ಮಾತುಕತೆ ನಡೆಸಲು ಉತ್ಸುಕನಾಗಿದ್ದೇನೆ. ಇಲ್ಲಿರುವ ಭಾರತೀಯರೊಂದಿಗೂ ಸಂವಾದ ನಡೆಸಲಿದ್ದೇನೆ' ಎಂದಿದ್ದಾರೆ.
- ದೇವಾಲಯ ಜೀರ್ಣೋದ್ಧಾರಕ್ಕೆ ಒಪ್ಪಂದ: ಇಂಡೊನೇಷ್ಯಾದಿಂದ ಹೊರಡುವ ಮೊದಲು ಪ್ರಧಾನಿ ಮೋದಿ ಹಾಗೂ ಅಧ್ಯಕ್ಷ ಪ್ರಬೊವೊ ಸುಬಿಯಾಂಟೊ ಅವರು ಜಕಾರ್ತ ದಲ್ಲಿರುವ ಶಿವನ ಅತಿದೊಡ್ಡ ದೇವಾ ಲಯ 'ಪ್ರಂಬಾನನ್ ದೇವಾಲಯ'ಕ್ಕೆ ಭೇಟಿ ನೀಡಿದರು. ಯುನೆಸ್ಕೋ ವಿಶ್ವ ಪಾರಂಪರಿಕ ಪಟ್ಟಿಗೆ ಸೇರಿರುವ ಈ ದೇವಾಲಯದ ಸಂರಕ್ಷಣೆ ಗಾಗಿ 'ಪ್ರಂಬಾನನ್ ದೇವಾಲಯ ಜೀರ್ಣೋದ್ಧಾರ ಯೋಜನೆ'ಗೆ ಇಬ್ಬರೂ ನಾಯಕರು ಸಹಿ ಹಾಕಿದರು.
- ದೇವಾಲಯದ ಆವರಣದಲ್ಲಿಯೇ ಏರ್ಪಡಿಸಲಾಗಿದ್ದ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೋದಿ, 'ನಾನು ಇಲ್ಲಿ ಮಾತನಾಡುತ್ತಿರುವ ವೇಳೆಯೇ ಇಲ್ಲಿನ ಗಾಳಿಯಲ್ಲಿ ಸಾಂಸ್ಕೃತಿಕವಾಗಿರುವ ಸುವಾಸನೆ ತೇಲಿ ಬರುತ್ತಿದೆ. ಇದೇ ರೀತಿಯ ಸುವಾಸನೆಯನ್ನು ಪ್ರತಿ ಕ್ಷಣವೂ ನಾನು ಭಾರತದ ನೆಲದಲ್ಲಿಯೂ ಅನುಭವಿಸುತ್ತೇನೆ. ಇದು ನಮ್ಮ ಎರಡೂ ದೇಶಗಳನ್ನು ಒಗ್ಗೂಡಿಸಿದೆ' ಎಂದರು.
- 'ಮೃತ್ಯುಂಜಯ ಮಂತ್ರಘೋಷಗಳು ಮತ್ತು ಓಂ ನಮಃ ಶಿವಾಯ ಉಚ್ಚಾರಣೆಯು ಇಲ್ಲಿ ಕೇಳಿಸುತ್ತಿದೆ. ಇದು ನನ್ನ ಹೃದಯವನ್ನು ತಟ್ಟಿತು. ಒಮ್ಮೆ ಇಲ್ಲಿ ಜೀರ್ಣೋದ್ಧಾರ ಕಾರ್ಯಗಳು ಪೂರ್ಣಗೊಂಡರೆ, ಭಾರತದ ಪ್ರವಾಸಿಗರು ಇಲ್ಲಿಗೆ ಖಂಡಿತ ಬರುತ್ತಾರೆ' ಎಂದರು.

## ❖ ನ್ಯಾಟೊ ವಿರುದ್ಧ ಹರಿಹಾಯ್ದ ಡೊನಾಲ್ಡ್ ಟ್ರಂಪ್

- 'ನ್ಯಾಟೊದಿಂದ ನನಗೆ ತೀವ್ರ ನಿರಾಸೆ ಯಾಗಿದೆ... ಏಕೆಂದರೆ, ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ಅವರು ನಮ್ಮ ಪರ ನಿಲ್ಲಲಿಲ್ಲ. ಇರಾನ್ ವಿರುದ್ಧದ ಯುದ್ಧದಲ್ಲೂ ನಮಗೆ ಸಹಕಾರ ನೀಡಲಿಲ್ಲ' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.
- ಇಲ್ಲಿ ಬುಧವಾರ ನಡೆದ ನ್ಯಾಟೊ ದೇಶಗಳ ಶೃಂಗಸಭೆಯಲ್ಲಿ ಅವರು ಮಾತನಾಡಿದರು. 'ಸ್ಪೇನ್ ಅಂತೂ ನ್ಯಾಟೊದಲ್ಲಿನ ಅತ್ಯಂತ ಭಯಾನಕ ದೇಶ. ಅದೊಂದು ನಿಷ್ಪ್ರಯೋಜಕ ದೇಶ. ಸ್ಪೇನ್‌ನೊಂದಿಗೆ ನಾವು ಇನ್ನೆಂದೂ ವ್ಯಾಪಾರ ನಡೆಸುವುದಿಲ್ಲ' ಎಂದರು. ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ನ್ಯಾಟೊದ ಮತ್ತೊಂದು ದೇಶ ಡೆನ್ಮಾರ್ಕ್ ಕುರಿತೂ ಮಾತನಾಡಿದರು.
- 'ಅಮೆರಿಕದ ಪಾಲಿಗೆ ಗ್ರೀನ್‌ಲ್ಯಾಂಡ್ ಬಹಳ ಮುಖ್ಯ ವಿಚಾರವಾಗಿದೆ. ಆದರೆ, ಡೆನ್ಮಾರ್ಕ್‌ಗೆ ಇದು ಮುಖ್ಯವಾಗಿಲ್ಲ. ಅಮೆರಿಕಕ್ಕಾಗಿ ಮಾತ್ರವಲ್ಲ ಇಡೀ ವಿಶ್ವದ ರಕ್ಷಣೆಗಾಗಿಯೇ ನಮಗೆ ಗ್ರೀನ್‌ಲ್ಯಾಂಡ್ ಬೇಕು. ಇದರಿಂದ ಡೆನ್ಮಾರ್ಕ್‌ಗೆ ಪ್ರಯೋಜನ ಇಲ್ಲದೆಯೇ ಇರಬಹುದು, ಅಮೆರಿಕಕ್ಕೆ ಇದೆ' ಎಂದರು.

Dr. Rajkumar IAS/KAS Academy

# ‘ಮ್ಯಾರಥಾನ್’ ಹಣಾಹಣಿಯಲ್ಲಿ ಸೋತ ಫೆಲಿಕ್ಸ್
# ಸಿನ್ನರ್–ಜೊಕೊ ಮುಖಾಮುಖಿ



ಗೆಲುವಿನ ಸಂಭ್ರಮದಲ್ಲಿ ನೊವಾಕ್ ಜೊಕೊವಿಚ್ ಎಎಫ್‌ಪಿ ಚಿತ್ರ

ಲಂಡನ್ (ಎಎಫ್‌ಪಿ): ದಿಗ್ಗಜ ಆಟಗಾರ ನೊವಾಕ್ ಜೊಕೊವಿಚ್ ಅವರು ಮಂಗಳವಾರ ತಡರಾತ್ರಿಯವರೆಗೆ ನಡೆದ ಸಮಬಲದ ಹಣಾಹಣಿಯಲ್ಲಿ ಕೆನಡಾದ ಫೆಲಿಕ್ಸ್ ಊಜರ್ ಆ್ಯಲಿಯಾಸಿಮ್ ವಿರುದ್ಧ ರೋಚಕ ಜಯ ಸಾಧಿಸಿದರು. ಅದರೊಂದಿಗೆ, ವಿಂಬಲ್ಡನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಯಾನಿಕ್ ಸಿನ್ನರ್ ವಿರುದ್ಧ ಸೆಣಸಾಡಲು ವೇದಿಕೆ ಸಿದ್ಧಪಡಿಸಿಕೊಂಡರು.

ಆಲ್ ಇಂಗ್ಲೆಂಡ್ ಕ್ಲಬ್‌ನ ಸೆಂಟರ್ ಕೋರ್ಟ್‌ನಲ್ಲಿ ನಡೆದ ಪಂದ್ಯದಲ್ಲಿ ಜೊಕೊವಿಚ್ 7–6 (12–10), 3–6, 6–3, 6–7 (4–7), 7–6 (10–4)ರಿಂದ ಮೂರನೇ ಶ್ರೇಯಾಂಕದ ಆಟಗಾರನ ಸವಾಲನ್ನು ಮೆಟ್ಟಿನಿಂತರು. 5 ಗಂಟೆ 15 ನಿಮಿಷಗಳವರೆಗೆ ಸಾಗಿದ ಈ ಪಂದ್ಯವು ಟೂರ್ನಿಯ ಇತಿಹಾಸದಲ್ಲಿ ಸುದೀರ್ಘ ಕ್ವಾರ್ಟರ್‌ಫೈನಲ್ ಪಂದ್ಯ ಎನಿಸಿತು.

39 ವರ್ಷ ವಯಸ್ಸಿನ ‘ಜೊಕೊ’ ಸ್ನಾಯು ಸೆಳೆತದ ನಡುವೆಯೂ ಸ್ವಲ್ಪವೂ ಉತ್ಸಾಹ ಕಳೆದುಕೊಳ್ಳಲಿಲ್ಲ. ‘ಈ ವಯಸ್ಸಲ್ಲೂ 14 ವರ್ಷ ಕಿರಿಯ ವಯಸ್ಸಿನ ಆಟಗಾರರನ್ನು ಸೋಲಿಸಿದ್ದು ಅಚ್ಚರಿ ಮೂಡಿಸಿತು’ ಎಂದು ಅವರು ಪಂದ್ಯದ ನಂತರ ಪ್ರತಿಕ್ರಿಯಿಸಿದರು. ದಾಖಲೆಯ 25ನೇ ಗ್ರ್ಯಾನ್‌ಸ್ಲಾಮ್ ಗೆಲ್ಲಲು ಶತಪ್ರಯತ್ನ ಹಾಕುತ್ತಿರುವ ಸರ್ಬಿಯಾದ ತಾರೆ, ನಾಲ್ಕರ ಘಟ್ಟದಲ್ಲಿ ಸಿನ್ನರ್ ಅವರ ಸವಾಲನ್ನು ಮೆಟ್ಟಿನಿಲ್ಲುವರೇ ಎಂಬ ಕುತೂಹಲ ಟೆನಿಸ್ ಪ್ರೇಮಿಗಳಲ್ಲಿದೆ.

ಉಕ್ರೇನ್‌ನ ಮಾರ್ತಾ ಕೊಸ್ಟಯುಕ್ ಹಾಗೂ ಜೆಕ್ ಗಣರಾಜ್ಯದ ಲಿಂಡಾ ನೊಸ್ಕೊವಾ ಅವರು ಮಹಿಳೆಯರ ಸಿಂಗಲ್ಸ್‌ನಲ್ಲಿ ನಾಲ್ಕರ ಘಟ್ಟಕ್ಕೆ ಮುನ್ನಡೆದರು. ಸೆಂಟರ್ ಕೋರ್ಟ್‌ನಲ್ಲಿ ಬುಧವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಮಾರ್ತಾ 6–3, 6–2ರಿಂದ ನೇರ ಸೆಟ್‌ಗಳಲ್ಲಿ ಇಟಲಿಯ ಜಾಸ್ಮಿನ್ ಪಾವೊಲಿನಿ ಅವರನ್ನು ಸೋಲಿಸಿದರು. ಲಿಂಡಾ 6–3, 7–5ರಿಂದ ಬೆಲ್ಜಿಯಂನ ಅನುಭವಿ ಆಟಗಾರ್ತಿ ಎಲೀಸಾ ಮೆರ್ಟೆನ್ಸ್ ಅವರನ್ನು ಹಿಮ್ಮೆಟ್ಟಿಸಿದರು.

**ಜ್ವರೇವ್ ಮುನ್ನಡೆ:** ಎರಡನೇ ಶ್ರೇಯಾಂಕದ ಆಟಗಾರ ಜ್ವರೇವ್ ಅವರು 6–4, 6–4, 6–2ರಿಂದ ನೇರಸೆಟ್‌ಗಳಲ್ಲಿ ಅಮೆರಿಕದ ಟೇಲರ್ ಫ್ರಿಟ್ಜ್ ಅವರನ್ನು ಮಣಿಸಿ, ನಾಲ್ಕರ ಘಟ್ಟ ಪ್ರವೇಶಿಸಿದರು. ವಿಂಬಲ್ಡನ್‌ನಲ್ಲಿ 9 ವರ್ಷಗಳಿಂದ ಸ್ಪರ್ಧಿಸುತ್ತಿರುವ ಅವರು ಈ ಹಿಂದೆ ಎಂದೂ 16ರ ಘಟ್ಟ ದಾಟಿರಲಿಲ್ಲ.

ಇಲ್ಲಿ ಆರನೇ ಶ್ರೇಯಾಂಕ ಪಡೆದಿರುವ ಫ್ರಿಟ್ಜ್ ಅವರು ಎರಡು ವರ್ಷಗಳಲ್ಲಿ ನಡೆದ ಎಂಟು ಮುಖಾಮುಖಿಗಳಲ್ಲಿ ಮೊದಲ ಸಲ ಜರ್ಮನಿಯ ಆಟಗಾರನ ಎದುರು ಪರಾಭವಗೊಂಡರು.

ಜ್ವರೇವ್ ಅವರು ಸೆಮಿಫೈನಲ್‌ನಲ್ಲಿ ಆತಿಥೇಯ ಬ್ರಿಟನ್‌ನ ಆರ್ಥರ್ ಫೆರಿ ಅವರನ್ನು ಎದುರಿಸಲಿದ್ದಾರೆ. ವೈಲ್ಡ್‌ಕಾರ್ಡ್ ಪ್ರವೇಶ ಪಡೆದ ಫೆರಿ ಸೆಂಟರ್‌ಕೋರ್ಟ್‌ನಲ್ಲಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ 6–4, 7–6 (7–4), 6–0 ಯಿಂದ ಇಟಲಿಯ ಫ್ಲಾವಿಯೊ ಕೊಬೊಲ್ಲಿ ಅವರನ್ನು ಸೋಲಿಸಿದರು.

ಆ ಮೂಲಕ, ವಿಂಬಲ್ಡನ್‌ನಲ್ಲಿ ಕಳೆದ 25 ವರ್ಷಗಳಲ್ಲಿ ವೈಲ್ಡ್‌ಕಾರ್ಡ್ ಪಡೆದ ಆಟಗಾರನೊಬ್ಬ ಇದೇ ಮೊದಲ ಬಾರಿ ಪುರುಷರ ಸಿಂಗಲ್ಸ್ ಸೆಮಿಫೈನಲ್ ತಲುಪಿದಂತಾಗಿದೆ. ಸ್ಪರ್ಧೆಯಲ್ಲಿ ಉಳಿದಿರುವ ಆತಿಥೇಯ ರಾಷ್ಟ್ರದ ಏಕೈಕ ಆಟಗಾರ ಫೆರಿ ಅವರು ನಿರೀಕ್ಷೆಯಂತೆ ಪ್ರೇಕ್ಷಕರ ಒಕ್ಕೊರಲ ಬೆಂಬಲ ಪಡೆದರು.

Publication Date
09/07/2026

Presented by ಪ್ರಜಾವಾಣಿ

## ❖ ಅಣುವಿದ್ಯುತ್ ಸ್ಥಾವರ ಸೇರಿ ಇರಾನ್ 90 ನೆಲೆಗಳ ಮೇಲೆ ಅಮೆರಿಕ ದಾಳಿ, 14 ಸಾವು: ಪಶ್ಚಿಮ ಏಷ್ಯಾ ಯುದ್ಧ ಬಿರುಸು

- ಪಶ್ಚಿಮ ಏಷ್ಯಾ ಸಂಘರ್ಷ ಮತ್ತೆ ಉಲ್ಬಣಗೊಂಡಿದ್ದು, ಗುರುವಾರ ನಸುಕಿನಲ್ಲಿ ಇರಾನ್ ಕರಾವಳಿಯಲ್ಲಿರುವ ಅಣುವಿದ್ಯುತ್ ಸ್ಥಾವರ, ಬಂದರು, ವಿಮಾನ ನಿಲ್ದಾಣ, ಕ್ಷಿಪಣಿ ಉಡಾವಣಾ ಕೇಂದ್ರಗಳು, ತೈಲ ಮತ್ತು ನಿರ್ಲವಣೀಕರಣ ಘಟಕ ಸೇರಿ 90 ನೆಲೆಗಳನ್ನು ಗುರಿಯಾಗಿಸಿ ಅಮೆರಿಕ ಸೇನೆ ಭಾರಿ ದಾಳಿ ನಡೆಸಿದೆ.
- ಅಣುವಿದ್ಯುತ್ ಸ್ಥಾವರಗಳ ಸಂಕೀರ್ಣ ಎಂದೇ ಕರೆಯಲಾಗುವ ಬುಶೇರ್ ನಗರ, ದಕ್ಷಿಣ ಇರಾನ್‌ನ ಬಂದರು ನಗರಗಳಾದ ಚಾಬಹಾರ್, ಕೊನಾರ್ಕ್, ಅಬ್ಬಾಸ್ ಮತ್ತು ಶಿರಿಕ್‌ನ ಹಲವೆಡೆ ಸರಣಿ ಸ್ಫೋಟಗಳು ವರದಿಯಾಗಿವೆ. ಬುಶೇರ್ ನಗರದಲ್ಲಿ ರುವ ಅಣು ವಿದ್ಯುತ್ ಸ್ಥಾವರವನ್ನು ರಷ್ಯಾದ ತಂತ್ರಜ್ಞರು ನಿರ್ವಹಣೆ ಮಾಡುತ್ತಿದ್ದು, ಇಲ್ಲಿ ಆಗಿರುವ ಹಾನಿಯ ಬಗ್ಗೆ ಅಧಿಕೃತ ಮಾಹಿತಿ ತಿಳಿದುಬಂದಿಲ್ಲ.
- ಅಮೆರಿಕದ ದಾಳಿಗೆ ಪ್ರತಿಯಾಗಿ ಬಹರೇನ್, ಕುವೈತ್, ಕತಾರ್‌ನಲ್ಲಿರುವ ಅಮೆರಿಕದ ಸೇನಾ ನೆಲೆಗಳ ಮೇಲೆ ದಾಳಿ ಮಾಡಿರುವುದಾಗಿ ಇರಾನ್ ಸೇನೆ ಹೇಳಿದೆ. ಬಹರೇನ್‌ನಲ್ಲಿ ಅಮೆರಿಕದ ನೌಕಾಪಡೆಯ 5ನೇ ಪ್ರಧಾನ ಕಚೇರಿ ಇದ್ದು, ಈ ಕೇಂದ್ರದ ಸಮೀಪ ಸ್ಫೋಟಗಳು ವರದಿಯಾಗಿವೆ. ಆದರೆ, ಪಶ್ಚಿಮ ಏಷ್ಯಾದ ಯಾವುದೇ ರಾಷ್ಟ್ರ ಇರಾನ್ ನಡೆಸಿದ ದಾಳಿಯಿಂದ ಆಗಿರುವ ಹಾನಿಯ ಕುರಿತು ಅಧಿಕೃತ ಮಾಹಿತಿಯನ್ನು ಬಹಿರಂಗಪಡಿಸಿಲ್ಲ.
- 'ಅಮೆರಿಕ ಸೇನೆ ಎರಡು ದಿನಗಳಿಂದ ನಡೆಸುತ್ತಿರುವ ವೈಮಾನಿಕ ದಾಳಿಯಲ್ಲಿ 14 ಮಂದಿ ಮೃತಪಟ್ಟಿದ್ದು, 78ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ' ಎಂದು ಇರಾನ್ ಆರೋಗ್ಯ ಸಚಿವಾಲಯದ ವಕ್ತಾರ ಹುಸೈನ್ ಕೆರ್ಮನ್ ಪೋರ್ ಗುರುವಾರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.
- *48 ಗಂಟೆಗಳಲ್ಲಿ ಇರಾನ್ 178 ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದೇವೆ. ಹೊರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಮೇಲೆ ದಾಳಿ ನಡೆಸಿದ್ದಕ್ಕೆ ಪ್ರತಿಯಾಗಿ ಈ ದಾಳಿ ನಡೆದಿದೆ ಎಂದು ಅಮೆರಿಕ ಪುನರುಚ್ಚರಿಸಿದೆ. ಹೊರ್ಮುಜ್‌ನಲ್ಲಿ ಹಡಗುಗಳ ಸಂಚಾರಕ್ಕೆ ಅಡ್ಡಿಪಡಿಸಿದರೆದಾಳಿ ಮತ್ತಷ್ಟು ತೀವ್ರಗೊಳ್ಳುತ್ತದೆ ಎಂದು ಅಮೆರಿಕ ಸೇನೆಯ ಸೆಂಟ್ರಲ್ ಕಮಾಂಡ್ ಇರಾನ್ ಗೆ ಎಚ್ಚರಿಕೆ ನೀಡಿದೆ.
- 'ಬೆದರಿಕೆಗೆ ಮಣಿಯುವುದಿಲ್ಲ, ಮಧ್ಯಂತರ ಒಪ್ಪಂದದ ಪ್ರಕಾರ, ಇರಾನ್ ಮುಂದಿಟ್ಟಿರುವ ನಿಬಂಧನೆಗಳ ಅಡಿಯಲ್ಲೇ ಹೊರ್ಮುಜ್ ತೆರೆಯಲಾಗುತ್ತದೆ' ಎಂದು ಇರಾನ್ ಸ್ಪಷ್ಟಪಡಿಸಿದೆ.

## ❖ ಭಾರತ-ಆಸ್ಟ್ರೇಲಿಯಾ ನಡುವಿನ ದ್ವಿಪಕ್ಷೀಯ ಒಪ್ಪಂದಕ್ಕೆ ಸಹಿ: ಯುರೇನಿಯಂ ಪೂರೈಕೆಗೆ ಒಪ್ಪಿಗೆ

- ಅಣು ವಿದ್ಯುತ್ ಉತ್ಪಾದನೆಗಾಗಿ ಭಾರತಕ್ಕೆ ಯುರೇನಿಯಂ ರಫ್ತು ಮಾಡಲು ಆಸ್ಟ್ರೇಲಿಯಾ ಒಪ್ಪಿಕೊಂಡಿದೆ. ಈ ಐತಿಹಾಸಿಕ ಒಪ್ಪಂದಕ್ಕೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಆಸ್ಟ್ರೇಲಿಯಾ ಪ್ರಧಾನಿ ಆ್ಯಂಟನಿ ಅಲ್ಬನೀಸ್ ಗುರುವಾರ ಸಹಿ ಹಾಕಿದರು.
- ಪ್ರಧಾನಿ ಮೋದಿ ಅವರು ಎರಡು ದಿನಗಳ ಆಸ್ಟ್ರೇಲಿಯಾ ಪ್ರವಾಸದಲ್ಲಿ ಇದ್ದಾರೆ. 'ಯುರೇನಿಯಂ ಅನ್ನು ವಿಧ್ವಂಸಕಾರಿ ಕೃತ್ಯಕ್ಕಾಗಿ ಬಳಸಿಕೊಳ್ಳಲೇಬಾರದುಎಂಬ ಷರತ್ತಿನ ಮೇಲೆ ರಫ್ತಿಗೆ ಅನುವು ಮಾಡಿಕೊಡಲಾಗಿದೆ' ಎಂದು ಎರಡೂದೇಶಗಳು ತಮ್ಮ ಜಂಟಿ ಹೇಳಿಕೆಯಲ್ಲಿ ತಿಳಿಸಿವೆ. ಜಗತ್ತಿನಲ್ಲಿರುವ ಯುರೇನಿಯಂನ ಒಟ್ಟು ಸಂಪನ್ಮೂಲದಲ್ಲಿ ಶೇಕಡ 28ರಷ್ಟು ಆಸ್ಟ್ರೇಲಿಯಾ ಬಳಿ ಇದೆ.
- 2027ರ ಹೊತ್ತಿಗೆ 100 ಗಿಗಾವಾಟ್ ಅಣುವಿದ್ಯುತ್ ಸಾಮರ್ಥ್ಯ ಹೊಂದುವುದು ಭಾರತದ ಗುರಿಯಾಗಿತ್ತು. ಇದನ್ನು ಸಾಧಿಸಲು ಈ ಒಪ್ಪಂದವು ಸಹಕಾರಿಯಾಗಲಿದೆ. ಅತ್ತ ಆಸ್ಟ್ರೇಲಿಯಾ ಕೂಡ ತನ್ನ ವ್ಯಾಪಾರವನ್ನು ಇನ್ನಷ್ಟು ದೇಶಗಳಿಗೆ ವಿಸ್ತರಿಸಿಕೊಳ್ಳಲು ಉದ್ದೇಶಿಸಿದೆ.
- 'ಅಣುವಿದ್ಯುತ್ ಕ್ಷೇತ್ರಕ್ಕೆ ಸಂಬಂಧಿಸಿ ನಾವು ಅತ್ಯಂತ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ. ಅಣುವಿದ್ಯುತ್ ಉತ್ಪಾದಿಸುವ ನಮ್ಮ ಉದ್ದೇಶಕ್ಕೆ ಈ ಒಪ್ಪಂದವು ಹೊಸ ಚೈತನ್ಯ ತುಂಬಲಿದೆ' ಎಂದು ಪ್ರಧಾನಿ ಮೋದಿ ಹರ್ಷ ವ್ಯಕ್ತಪಡಿಸಿದರು.

Dr. Rajkumar IAS/KAS Academy

- 'ನಮ್ಮ ಎರಡೂ ದೇಶಗಳ ಮಧ್ಯೆ ಉತ್ತಮ ಸಂಬಂಧ ಇದೆ. ಜೊತೆಗೆ, ನಾವು ಉತ್ತಮ ಸ್ನೇಹಿತರು ಕೂಡ. ನಮ್ಮ ಸಂಪನ್ಮೂಲಗಳ ರಫ್ತನ್ನು ಈ ಒಪ್ಪಂದ ವಿಸ್ತರಿಸಲಿದೆ' ಎಂದು ಅಲ್ಬನೀಸ್ ಹೇಳಿದರು.
- ಅಣು ವಿದ್ಯುತ್ ಉತ್ಪಾದನಾ ಘಟಕಗಳ ಸಂಖ್ಯೆಯನ್ನು ಭಾರತವು ದಶಕದಿಂದ ಹೆಚ್ಚಿಸುತ್ತಿದೆ. ಆದರೆ, ಈ ಘಟಕಗಳಿಂದ ಶೇ 3ರಷ್ಟು ವಿದ್ಯುತ್ ಅನ್ನು ಮಾತ್ರವೇ ಉತ್ಪಾದಿಸಲು ಸಾಧ್ಯವಾಗುತ್ತಿದೆ. ವಿದ್ಯುತ್ ಉತ್ಪಾದನೆಗೆ ಭಾರತವು ಕಲ್ಲಿದ್ದಲಿನ ಮೇಲೆಯೇ ಹೆಚ್ಚು ಅವಲಂಬಿತವಾಗಿದೆ.

**ಹಲವು ವರ್ಷಗಳ ಯತ್ನಕ್ಕೆ ಸಂದ ಯಶಸ್ಸು**

- 'ಅಣ್ವಸ್ತ್ರ ತಯಾರಿಕೆಯಲ್ಲಿ ಅಣುಶಕ್ತಿ ಬಳಕೆ ತಡೆ ಒಪ್ಪಂದ'ಕ್ಕೆ ಅಸ್ಟ್ರೇಲಿಯಾ ಸಹಿ ಹಾಕಿತ್ತು. ಅಮೆರಿಕ, ಚೀನಾ, ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾವನ್ನು ಮಾತ್ರವೇ 'ಅಣ್ವಸ್ತ್ರ ಹೊಂದಿರುವ ದೇಶಗಳು' ಎಂದು ಈ ಒಪ್ಪಂದ ಹೇಳುತ್ತದೆ. ಅಣ್ವಸ್ತ್ರ ಇರುವ ಭಾರತವೂ ಸೇರಿ ಈ ಒಪ್ಪಂದಕ್ಕೆ ಸಹಿ ಹಾಕದ ಇತರೆ ಯಾವ ದೇಶಕ್ಕೂ ಯುರೇನಿಯಂ ಮಾರಾಟವನ್ನು ಈ ಒಪ್ಪಂದ ನಿಷೇಧಿಸುತ್ತದೆ
- ಈ ಒಪ್ಪಂದವು ತಾರತಮ್ಯದಿಂದ ಕೂಡಿದೆ ಎಂದು ಭಾರತ ಹೇಳಿತ್ತು. 1967 ಜನವರಿಗೂ ಮೊದಲೇ ಅಣ್ವಸ್ತ್ರ ಪರೀಕ್ಷಿಸಿದ ದೇಶಗಳನ್ನು ಮಾತ್ರವೇ 'ಅಣ್ವಸ್ತ್ರ ಹೊಂದಿರುವ ದೇಶಗಳು' ಎಂದು ಈ ಒಪ್ಪಂದವು ಕರೆಯುತ್ತದೆ. ಇದು ಸರಿಯಲ್ಲ ಎಂದು ಭಾರತ ವಾದಿಸಿತ್ತು. ಭಾರತವು 1974ರಲ್ಲಿ ಮೊದಲ ಬಾರಿಗೆ ಅಣ್ವಸ್ತ್ರ ಪರೀಕ್ಷೆ ನಡೆಸಿತ್ತು. ಈ ಕಾರಣ. ಭಾರತವನ್ನು ಅಣ್ವಸ್ತ್ರ ಹೊಂದಿದ ದೇಶ ಎಂದು ಈ ಒಪ್ಪಂದ ಒಪ್ಪಿಕೊಳ್ಳುವುದಿಲ್ಲ. 1998ರಲ್ಲಿ ಅಣ್ವಸ್ತ್ರ ಪರೀಕ್ಷೆ ನಡೆದ ಬಳಿಕ, ಭಾರತಕ್ಕೆ ಯುರೇನಿಯಂ ರಫ್ತು ಮಾಡುವುದಕ್ಕೆ ನಿರ್ಬಂಧ ಹೇರಲಾಯಿತು
- 2008ರಲ್ಲಿ ಪರಿಸ್ಥಿತಿಗಳು ಬದಲಾದವು. 'ನಮ್ಮ ಸದಸ್ಯ ರಾಷ್ಟ್ರಗಳಿಂದ ಭಾರತವು ಯುರೇನಿಯಂ ಖರೀದಿಸಬಹುದು' ಎಂದು ಅಮೆರಿಕವೂ ಸೇರಿದಂತೆ ಪರಮಾಣು ಪೂರೈಕೆದಾರರ ಗುಂಪಿನ ದೇಶಗಳು ಒಪ್ಪಿಗೆ ನೀಡಿದವು. ಅಲ್ಲಿಂದ ಈಚೆಗೆ ಭಾರತವು ಹಲವು ಒಪ್ಪಂದಗಳನ್ನು ಮಾಡಿಕೊಳ್ಳುವುದರ ಮೂಲಕ ವಿವಿಧ ದೇಶಗಳಿಂದ ಯುರೇನಿಯಂ ಖರೀದಿಸುತ್ತಿದೆ
- 2015ರಲ್ಲಿ ಭಾರತ ಮತ್ತು ಆಸ್ಟ್ರೇಲಿಯಾವು 'ನಾಗರಿಕ ಪರಮಾಣು ಸಹಕಾರ' ಒಪ್ಪಂದ ಮಾಡಿಕೊಂಡವು. ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಅನ್ವಯ ಯುರೇನಿಯಂ ರಫ್ತಿಗೆ ಒಪ್ಪಿಗೆ ದೊರೆಯಿತು.

Dr. Rajkumar IAS/KAS Academy

## ಮೆಲ್ಬರ್ನ್‌ನಲ್ಲಿರುವ ಭಾರತೀಯರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ಮೋದಿ

# ‘ಅಭಿವೃದ್ಧಿ ಹೊಂದಿದ ದೇಶವಾಗುವತ್ತ ಭಾರತ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ಮೆಲ್ಬರ್ನ್: ‘ಅಲ್ಲಿ ಉಗ್ರರ ನೆಲೆಗಳು ಸ್ಫೋಟಗೊಳ್ಳುತ್ತಿದ್ದರೆ, ಅದರ ಮಾರ್ದನಿಯು ಜಗತ್ತಿಗೇ ಕೇಳಿಸುತ್ತಿತ್ತು. ಆಪರೇಷನ್ ಸಿಂಧೂರದ ವೇಳೆ ಭಾರತದ ಸೇನಾ ಸಾಮರ್ಥ್ಯವನ್ನು ಜಗತ್ತೇ ವೀಕ್ಷಿಸಿತು’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಮೆಲ್ಬರ್ನ್‌ನಲ್ಲಿ ಇರುವ ಭಾರತೀಯರನ್ನು ಉದ್ದೇಶಿಸಿ ಅವರು ಗುರುವಾರ ಮಾತನಾಡಿದರು. ‘ಮೆಲ್ಬರ್ನ್ ಮೀಟ್ಸ್ ಮೋದಿ’ ಹೆಸರಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಅವರೂ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ 30,000 ಭಾರತೀಯರು ಭಾಗವಹಿಸಿದ್ದರು.

‘ಉಗ್ರರ ನೆಲೆಗಳ ವಿರುದ್ಧ ಕ್ರಮ ಕೈಗೊಂಡಿದ್ದಕ್ಕೆ ನಿಮಗೆ ಹೆಮ್ಮೆ ಇದೆಯೇ’ ಎಂದು ಪ್ರಧಾನಿ ಮೋದಿ ಅವರು ಸಭಿಕರನ್ನು ಪ್ರಶ್ನಿಸಿದರು. ಸಭಿಕರು ತಮ್ಮ ಕರತಾಡನದ ಮೂಲಕ ಪ್ರಧಾನಿ ಅವರ ಮಾತಿಗೆ ಒಪ್ಪಿಗೆ ಸೂಚಿಸಿದರು.

‘ಭಾರತವು ಅಭಿವೃದ್ಧಿ ಹೊಂದಿದ ದೇಶವಾಗುವ ಗುರಿಯನ್ನು ತಲುಪುವತ್ತ ಕಾರ್ಯಪ್ರವೃತ್ತವಾಗಿದೆ. ‘ಬೆಳವಣಿಗೆ ಹೊಂದು, ಸಾಧನೆ ಮಾಡು’ (ಗ್ರೋ ಮೋರ್, ಅಚೀವ್ ಮೋರ್) ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟಿದೆ. ನಮ್ಮ ಸರ್ಕಾರವು ‘ನಾಗರಿಕ ದೇವೋ ಭವಃ’ ಮಂತ್ರದೊಂದಿಗೆ ಕೆಲಸ ಮಾಡುತ್ತಿದೆ’ ಎಂದರು.

‘ನೀವು ಚಂದ್ರಯಾನದ ಕುರಿತು ಕೇಳಿದ್ದೀರಿ ಅಲ್ಲವೇ? ಚಂದ್ರನ ದಕ್ಷಿಣ ಧ್ರುವ ಮೇಲೆ ಇಳಿದಿದ್ದು ಭಾರತ ಬಿಟ್ಟು ಬೇರೆ ಯಾವ ದೇಶಕ್ಕೂ ಸಾಧ್ಯವಾಗಲಿಲ್ಲ. ಆದರೆ, ಇದರಿಂದ ಭಾರತಕ್ಕೆ ತೃಪ್ತಿ ಇಲ್ಲ. ಭಾರತ ಈಗ ‘ಗಗನಯಾನ’ಕ್ಕೆ ಸಜ್ಜಾಗಿದೆ. ನಮ್ಮದೇ ಬಾಹ್ಯಾಕಾಶ ಕೇಂದ್ರ ಸ್ಥಾಪಿಸುವ ಗುರಿಯತ್ತ ಕೆಲಸ ಮಾಡುತ್ತಿದೆ’ ಎಂದರು.

ನರೇಂದ್ರ ಮೋದಿ ಅವರು ಪ್ರಧಾನಿಯಾಗಿ ಅಧಿಕಾರವಹಿಸಿಕೊಂಡ 12 ವರ್ಷಗಳಲ್ಲಿ, ಆಸ್ಟ್ರೇಲಿಯಾಗೆ ಒಟ್ಟು ಮೂರು ಬಾರಿ ಭೇಟಿ ನೀಡಿದ್ದಾರೆ. ‘ನಾನು ಇಲ್ಲಿಗೆ ಮೂರು ಬಾರಿ ಬಂದಿದ್ದೇನೆ. ನಮ್ಮ ಎರಡೂ ದೇಶಗಳ ಸಂಬಂಧವು ಎಷ್ಟು ಶಕ್ತಿಯುತವಾಗಿದೆ ಎಂದು ಇದು ತೋರಿಸುತ್ತದೆ’ ಎಂದರು.



ಮೆಲ್ಬರ್ನ್‌ನಲ್ಲಿ ನಡೆದ ‘ಮೆಲ್ಬರ್ನ್ ಮೀಟ್ಸ್ ಮೋದಿ’ ಕಾರ್ಯಕ್ರಮಕ್ಕೆ ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಆಲ್ಬನೀಸ್ ಮತ್ತು ಪ್ರಧಾನಿ ಮೋದಿ ಅವರು ಆಗಮಿಸಿದರು

—ಪಿಟಿಐ ಚಿತ್ರ




ಕಾರ್ಯಕ್ರಮ ನಡೆದ ಸ್ಟೇಡಿಯಂ ಎದುರು ಪ್ರಧಾನಿ ಮೋದಿ ಅವರ ವಿರುದ್ಧ ವ್ಯಕ್ತಿಯೊಬ್ಬರು ಫಲಕಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು

—ಎಎಫ್‌ಪಿ ಚಿತ್ರ

### ಇತರೆ ಒಪ್ಪಂದಗಳು

- ಹಿಂದೂ ಮಹಾಸಾಗರದಲ್ಲಿರುವ ಆಸ್ಟ್ರೇಲಿಯಾಕ್ಕೆ ಸೇರಿದ ಕಾಕಸ್ ಕೀಲಿಂಗ್ ದ್ವೀಪದಲ್ಲಿ ಬಾಹ್ಯಾಕಾಶ ನೌಕೆಗಳ ಜಾಡು ಪತ್ತೆ ಮಾಡಲು ‘ತಾತ್ಕಾಲಿಕ ಬಾಹ್ಯಾಕಾಶ ಜಾಡು ಪತ್ತೆ ಕೇಂದ್ರ’ವನ್ನು ಎರಡೂ ದೇಶಗಳು ಸೇರಿ ನಿರ್ಮಿಸಲಿವೆ. ಇದು ಭಾರತದ ಬಾಹ್ಯಾಕಾಶ ಯೋಜನೆಗಳಿಗೆ ಅನುಕೂಲವಾಗಲಿದೆ
- ಪಿಂಚಣಿ ನಿಧಿಯನ್ನು ನಿರ್ವಹಿಸುವ ಆಸ್ಟ್ರೇಲಿಯಾದ ಅತಿ ದೊಡ್ಡ ಸಂಸ್ಥೆ ‘ಆಸ್ಟ್ರೇಲಿಯನ್‌ಸೂಪರ್’, ಭಾರತದ ಮೂಲಸೌಕರ್ಯಕ್ಕಾಗಿ 347 ದಶಲಕ್ಷ ಡಾಲರ್ (ಸುಮಾರು ₹3,312 ಕೋಟಿ ) ಹೂಡಿಕೆ ಮಾಡಲಿದೆ
- ತನ್ನ ಮ್ಯೂಸಿಯಂನಲ್ಲಿರುವ ತಮಿಳುನಾಡಿನ 12ನೇ ಶತಮಾನದ ನಂದಿ ವಿಗ್ರಹ, 11ನೇ ಶತಮಾನದ ಲೋಹದ ತ್ರಿಶೂಲ ಇರುವ ಭದ್ರಕಾಳಿ ವಿಗ್ರಹ ಮತ್ತು ಆರು ಮುಖಗಳಿರುವ ಕಾರ್ತಿಕೇಯ ವಿಗ್ರಹವನ್ನು ಭಾರತಕ್ಕೆ ಹಸ್ತಾಂತರಿಸಲು ಆಸ್ಟ್ರೇಲಿಯಾ ಒಪ್ಪಿಕೊಂಡಿದೆ

### ಬೆಂಗಳೂರಿನಲ್ಲಿ ಫ್ಲಿಂಡರ್ಸ್ ವಿ.ವಿ ಕ್ಯಾಂಪಸ್

ಆಸ್ಟ್ರೇಲಿಯಾದ ‘ಫ್ಲಿಂಡರ್ಸ್ ವಿಶ್ವವಿದ್ಯಾಲಯ’ದ ಕ್ಯಾಂಪಸ್ ಅನ್ನು 2027ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿಸುವ ಒಪ್ಪಂದಕ್ಕೆ ಎರಡೂ ದೇಶಗಳು ಸಹಿ ಹಾಕಿವೆ. ಮುಂದಿನ ತಿಂಗಳು ‘ನ್ಯೂ ಸೌತ್ ವೇಲ್ಸ್ ವಿಶ್ವವಿದ್ಯಾಲಯ’ದ ಕ್ಯಾಂಪಸ್ ಬೆಂಗಳೂರಿನಲ್ಲಿ ಆರಂಭವಾಗಲಿದೆ. ‘ವಿಕ್ಟೋರಿಯಾ ಯೂನಿವರ್ಸಿಟಿ ಆಫ್ ಆಸ್ಟ್ರೇಲಿಯಾ’ವು ಗುರುಗ್ರಾಮದಲ್ಲಿ ಕ್ಯಾಂಪಸ್ ಅನ್ನು ಆರಂಭಿಸಲು ಭಾರತದ ವಿಶ್ವವಿದ್ಯಾಲಯ ಅನುದಾನ ಆಯೋಗ ಒಪ್ಪಿಗೆ ನೀಡಿದೆ.

**ಚಿಪ್‌ನಿಂದ ಹಿಡಿದು ಹಡಗು ನಿರ್ಮಾಣದವರೆಗೆ ಭಾರತವು ಹೊಸ ತಯಾರಿಕಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುತ್ತಿದೆ. 6ಜಿ ತಂತ್ರಜ್ಞಾನ ಹೊಂದುವ ನಿಟ್ಟಿನಲ್ಲೂ ಭಾರತ ಕೆಲಸ ಮಾಡುತ್ತಿದೆ**

**ನರೇಂದ್ರ ಮೋದಿ,** ಪ್ರಧಾನಿ

## ❖ ಕಾಲೇಜುಗಳ ಸಂಖ್ಯೆ: ದೇಶದಲ್ಲೇ ಬೆಂಗಳೂರು ಮೊದಲು

- ದೇಶದಲ್ಲೇ ಅತಿ ಹೆಚ್ಚು ಕಾಲೇಜುಗಳನ್ನು ಹೊಂದಿರುವ ಜಿಲ್ಲೆಯ ಸ್ಥಾನವನ್ನು ಬೆಂಗಳೂರು ನಗರ ಜಿಲ್ಲೆ ಉಳಿಸಿಕೊಂಡಿದೆ.
- ಕೇಂದ್ರ ಶಿಕ್ಷಣ ಸಚಿವಾಲಯ ಬಿಡುಗಡೆ ಮಾಡಿರುವ ಅಖಿಲ ಭಾರತ ಉನ್ನತ ಶಿಕ್ಷಣ ಸಮೀಕ್ಷೆ (ಎಐಎಸ್‌ಎಚ್‌ಇ) 2023-24 ವರದಿ ಪ್ರಕಾರ, ಬೆಂಗಳೂರು ನಗರ ಜಿಲ್ಲೆಯಲ್ಲಿ 1,148 ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ.
- 2022-23ರಲ್ಲಿ ಜಿಲ್ಲೆಯಲ್ಲಿ 1,107 ಕಾಲೇಜುಗಳು ಇದ್ದರೆ, 2021-22ರಲ್ಲಿ 1,106 ಕಾಲೇಜುಗಳು ಕಾರ್ಯನಿರ್ವ ಹಿಸುತ್ತಿದ್ದವು. 2023-24ರಲ್ಲಿ ಕಾಲೇಜುಗಳ ಸಂಖ್ಯೆ 1,148ಕ್ಕೆ ಏರಿಕೆಯಾಗಿತ್ತು, ಬೆಂಗಳೂರು ನಗರದ ನಂತರ ಜೈಪುರ, ಪುಣೆ, ಹೈದರಾಬಾದ್, ಪ್ರಯಾಗ್‌ರಾಜ್, ನಾಗುರ, ರಂಗಾರೆಡ್ಡಿ, ಗಾಜಿಪುರ ಜಿಲ್ಲೆಗಳು ಅತಿ ಹೆಚ್ಚು ಕಾಲೇಜುಗಳನ್ನು ಹೊಂದಿರುವ ಜಿಲ್ಲೆಗಳಾಗಿವೆ.
- ರಾಜ್ಯವಾರು ಕಾಲೇಜುಗಳ ಸಂಖ್ಯೆಯಲ್ಲಿ ಕರ್ನಾಟಕ ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ (4.524 ಕಾಲೇಜುಗಳು), 8,310 ಕಾಲೇಜುಗಳನ್ನು ಹೊಂದಿರುವ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದೆ. ಮಹಾರಾಷ್ಟ್ರ (5,390 ಕಾಲೇಜುಗಳು) ಎರಡನೇ ಸ್ಥಾನದಲ್ಲಿದೆ.

- ವಿದ್ಯಾರ್ಥಿಗಳ ದಾಖಲಾತಿಯಲ್ಲೂ ಕರ್ನಾಟಕ ದೇಶದ ಪ್ರಮುಖ ರಾಜ್ಯಗಳಲ್ಲಿ ಒಂದಾಗಿದೆ. ಉತ್ತರ ಪ್ರದೇಶದಲ್ಲಿ 72.4 ಲಕ್ಷ, ಮಹಾರಾಷ್ಟ್ರ 48.6 ಲಕ್ಷ, ತಮಿಳುನಾಡು 34 ಲಕ್ಷ, ಮಧ್ಯಪ್ರದೇಶ 27.4 ಲಕ್ಷ, ಪಶ್ಚಿಮ ಬಂಗಾಳ 26.9ಲಕ್ಷ, ಕರ್ನಾಟಕದಲ್ಲಿ 26.4 ಲಕ್ಷ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ರಾಜ್ಯದ ಒಟ್ಟು ದಾಖಲಾತಿ ಪ್ರಮಾಣ (ಜಿಇಆರ್) ಶೇ. 41.9 ಇದ್ದು, ಇದು ದೇಶದ ಸರಾಸರಿ ಶೇ.30ಕ್ಕಿಂತ ಹೆಚ್ಚಿದೆ.

### ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ 'ಡಿಡಬ್ಲ್ಯುಆರ್ 162' ತಳಿ

# ಇಂಡೊನೇಷ್ಯಾಕ್ಕೆ ಧಾರವಾಡ ಗೋಧಿ

ಪ್ರಜಾವಾಣಿ ವಾರ್ತೆ



ಡಿಡಬ್ಲ್ಯುಆರ್ 162 ತಳಿ ಗೋಧಿ ಬೆಳೆ

**ಧಾರವಾಡ:** ಇಲ್ಲಿನ ಕೃಷಿ ವಿಶ್ವವಿದ್ಯಾಲಯ 1985ರಲ್ಲಿ ಅಭಿವೃದ್ಧಿಪಡಿಸಿದ 'ಡಿಡಬ್ಲ್ಯುಆರ್ 162' ಗೋಧಿ ತಳಿಯ ಸುಮಾರು 100 ಟನ್ ಬಿತ್ತನೆ ಬೀಜಗಳನ್ನು ಇಂಡೊನೇಷ್ಯಾಕ್ಕೆ ಪೂರೈಸಲು ಭಾರತ ಮುಂದಾಗಿದೆ. ಪ್ರಧಾನಿ ಮೋದಿ ಅವರು ಈಚೆಗೆ ಇಂಡೋನೇಷ್ಯಾಕ್ಕೆ ಭೇಟಿ ನೀಡಿದ ವೇಳೆ ಈ ಬಿತ್ತನೆ ಬೀಜ ಪೂರೈಕೆಯ ಒಪ್ಪಂದವಾಗಿದೆ.

ರಾಷ್ಟ್ರೀಯ ಆಹಾರ ಭದ್ರತೆ ಬಲ ಪಡಿಸುವ ಉದ್ದೇಶದಿಂದ ಇಂಡೋನೇಷ್ಯಾ ಸರ್ಕಾರವು, ಭಾರತೀಯ ಸಂಶೋಧನಾ ಸಂಸ್ಥೆಗಳು ಹಾಗೂ ಅಂತರರಾಷ್ಟ್ರೀಯ ಮೆಕ್ಕೆಜೋಳ ಮತ್ತು ಗೋಧಿ ಸುಧಾರಣಾ ಕೇಂದ್ರ ಅಭಿವೃದ್ಧಿಪಡಿಸಿದ ವಿವಿಧ ಗೋಧಿ ತಳಿಗಳನ್ನು ತನ್ನ ಉಷ್ಣವಲಯದ ಹವಾಮಾನಕ್ಕೆ ಹೊಂದಿಕೊಳ್ಳುತ್ತದೆಯೇ ಎಂದು ಪರೀಕ್ಷಿಸುವುದಕ್ಕಾಗಿ ತರಿಸಿ ಕೊಂಡಿತ್ತು. ಈ ಪರೀಕ್ಷೆಗಳಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿ



ಪಡಿಸಿದ 'ಡಿಡಬ್ಲ್ಯುಆರ್ 162' ಗೋಧಿ ತಳಿಯು ಇತರ ತಳಿಗಳಿಗಿಂತ ಉತ್ತಮ ಇಳುವರಿ ಮತ್ತು ಗುಣಮಟ್ಟ ಕಾಯ್ದುಕೊಂಡಿರುವುದು ದೃಢಪಟ್ಟಿತು.

ಇಂಡೊನೇಷ್ಯಾ ಸರ್ಕಾರವು 1999–2000ರಲ್ಲಿ ದೊಡ್ಡ ಪ್ರಮಾಣದ ಕ್ಷೇತ್ರ ಪರೀಕ್ಷೆಗಳಿಗಾಗಿ 'ಡಿಡಬ್ಲ್ಯುಆರ್ 162' ಗೋಧಿ ತಳಿಯ ಬೀಜಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದು ಮಾಡಿಕೊಂಡಿತು. ಜೊತೆಗೆ, ಈ ತಳಿಯ ಕೃಷಿ ತಂತ್ರಜ್ಞಾನ ಮತ್ತು ನಿರ್ವಹಣೆಯ ಕುರಿತು ತಾಂತ್ರಿಕ ಮಾರ್ಗದರ್ಶನ ನೀಡಲು ಕೃಷಿ ವಿ.ವಿ ಗೋಧಿ ತಳಿಶಾಸ್ತ್ರಜ್ಞ ಆರ್. ಆರ್. ಹಂಚಿನಾಳ ಅವರನ್ನು ಸಲಹೆಗಾರರಾಗಿ ಆಹ್ವಾನಿಸಿತು.

**ಮುಖ್ಯಾಂಶಗಳು**

- ಪ್ರಧಾನಿ ಮೋದಿ ಭೇಟಿ ಸಂದರ್ಭದಲ್ಲಿ ಮಾತುಕತೆ ಒಪ್ಪಂದ
- 100 ಟನ್ ಬಿತ್ತನೆ ಬೀಜ ಪೂರೈಕೆ

## ತುಕ್ಕು ರೋಗ ನಿರೋಧ ತಳಿ

'ಗೋಧಿ ತಳಿಶಾಸ್ತ್ರಜ್ಞ ಆರ್. ಆರ್. ಹಂಚಿನಾಳ ಅವರ ನೇತೃತ್ವದಲ್ಲಿ ಗೋಧಿ ಸುಧಾರಣಾ ಕಾರ್ಯಕ್ರಮದ ಮೂಲಕ ಅಭಿವೃದ್ಧಿಪಡಿಸಿದ 'ಡಿಡಬ್ಲ್ಯುಆರ್ 162' ಗೋಧಿ ತಳಿಯನ್ನು 1993ರಲ್ಲಿ ಕೇಂದ್ರ ಸರ್ಕಾರ ಬಿಡುಗಡೆಗೊಳಿಸಿತ್ತು. ಈ ತಳಿಯು ಎಲೆ ತುಕ್ಕು ಹಾಗೂ ಕಾಂಡ ತುಕ್ಕು ರೋಗಗಳಿಗೆ ಪ್ರತಿರೋಧಕವಾಗಿದೆ. ಅಧಿಕ ಇಳುವರಿ, ಉತ್ತಮ ಗುಣಮಟ್ಟ, ಬೆಳೆ ಬೆಳವಣಿಗೆಯ ಸಂಪೂರ್ಣ ಅವಧಿಯಲ್ಲಿ ಉಷ್ಣ ಒತ್ತಡವನ್ನು ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ' ಎಂದು ಕೃಷಿ ವಿ.ವಿಯ ವಿಸ್ತರಣಾ ನಿರ್ದೇಶಕಿ ಮಂಜುಳಾ.ಎನ್ ತಿಳಿಸಿದ್ದಾರೆ.

Publication Date
10/07/2026

Presented by ಪ್ರಜಾವಾಣಿ



# ಬೆಂಗಳೂರು ನವೋದ್ಯಮ ಸಾಧನೆಯ ಹಾದಿಯಲ್ಲಿ ಸಾಲು ಸಾಲು ಸವಾಲು

ಬೆಂಗಳೂರು ದೇಶದ ನವೋದ್ಯಮದ ಕೇಂದ್ರ ಎಂಬುದು ಮತ್ತೊಮ್ಮೆ ಖಾತರಿಯಾಗಿದೆ. ಜಿನೋಮ್ ಸಂಸ್ಥೆಯು ಬಿಡುಗಡೆ ಮಾಡಿರುವ 'ಜಾಗತಿಕ ನವೋದ್ಯಮಗಳ ಸ್ಥಿತಿ-ಗತಿ ವರದಿ-2026'ಯಲ್ಲಿ ನವೋದ್ಯಮ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಜಾಗತಿಕ ನಗರಗಳ ಪಟ್ಟಿಯಲ್ಲಿ ಬೆಂಗಳೂರು 15ನೇ ಸ್ಥಾನ, ಏಷ್ಯಾದ ನಗರಗಳ ಪಟ್ಟಿಯಲ್ಲಿ ಆರನೇ ಸ್ಥಾನ ಗಳಿಸಿದೆ. ಕೃತಕ ಬುದ್ಧಿಮತ್ತೆ, ಏರೋಸ್ಪೇಸ್, ಬಾಹ್ಯಾಕಾಶ, ರಕ್ಷಣಾ ತಂತ್ರಜ್ಞಾನ ಕ್ಷೇತ್ರದಲ್ಲೂ ಉದ್ಯಾನ ನಗರಿ ಮುಂಚೂಣಿಯಲ್ಲಿದೆ. ಇದರ ಹಿಂದೆ, ರಾಜ್ಯ ಸರ್ಕಾರದ ನೀತಿಗಳಿರುವುದನ್ನೂ ವರದಿ ಪ್ರಸ್ತಾಪಿಸಿದೆ. ಈ ಹೆಗ್ಗಳಿಕೆಯ ನಡುವೆಯೇ ಬೆಂಗಳೂರಿನ ನವೋದ್ಯಮ ಕ್ಷೇತ್ರ ಎದುರಿಸುತ್ತಿರುವ ಕೊರತೆ, ಸವಾಲುಗಳನ್ನೂ ವರದಿ ಪಟ್ಟಿ ಮಾಡಿದೆ

**ಬೆಂಗಳೂರು ನವೋದ್ಯಮದ ನೋಟ (2023-25)**

**15,300** ಕೋಟಿ ಡಾಲರ್ (ಅಂದಾಜು ₹14.61ಲಕ್ಷ ಕೋಟಿ) ಬೆಂಗಳೂರಿನ ನವೋದ್ಯಮ ಕ್ಷೇತ್ರದ ಮೌಲ್ಯ

**190%** ನವೋದ್ಯಮ ಕ್ಷೇತ್ರದಲ್ಲಿ ಕಂಡು ಬಂದಿರುವ ಬೆಳವಣಿಗೆ ಪ್ರಮಾಣ

**200** ಕೋಟಿ ಡಾಲರ್ (ಅಂದಾಜು ₹19,100 ಕೋಟಿ) ಕೃತಕ ಬುದ್ಧಿಮತ್ತೆ (ಎಐ) ವಲಯದ ಮೌಲ್ಯ

**109%** ಎಐ ಕ್ಷೇತ್ರದಲ್ಲಿ ವರದಿಯಾಗಿರುವ ಪ್ರಗತಿಯ ಪ್ರಮಾಣ

**3,900** ಕೋಟಿ ಡಾಲರ್ (ಅಂದಾಜು ₹3.72 ಲಕ್ಷ ಕೋಟಿ) 2021-21ರ ನಡುವಿನ ವೆಂಚರ್ ಕ್ಯಾಪಿಟಲ್ (ವಿಸಿ) ನೆರವಿನ ಮೌಲ್ಯ

**30** ಯೂನಿಕಾರ್ನ್ ಕಂಪನಿಗಳ ಸಂಖ್ಯೆ (100 ಕೋಟಿ ಡಾಲರ್ ಅಂದರೆ, ಅಂದಾಜು ₹95,500 ಕೋಟಿಗಿಂತ ಹೆಚ್ಚು ಮೌಲ್ಯ ಹೊಂದಿರುವ ಕಂಪನಿಗಳು)

**300** ನವೋದ್ಯಮ ಕ್ಷೇತ್ರದಲ್ಲಿ 25 ವರ್ಷಗಳಲ್ಲಿ ಬಂಡವಾಳ ಹೂಡಿರುವ ವೆಂಚರ್ ಕ್ಯಾಪಿಟಲ್ (ವಿಸಿ) ಸಂಸ್ಥೆಗಳು

Publication Date 10/07/2026

• ಕೆ.ನರಸಿಂಹಮೂರ್ತಿ

ದೇಶದ ನವೋದ್ಯಮ (ಸ್ಟಾರ್ಟ್‌ಅಪ್) ಕ್ಷೇತ್ರದಲ್ಲಿ ಅಗ್ರಸ್ಥಾನದಲ್ಲಿರುವ ಬೆಂಗಳೂರು ನವೋದ್ಯಮಗಳ ಜಾಗತಿಕ ಜಾಲದಲ್ಲೂ ಗಮನ ಸೆಳೆಯುತ್ತಿದೆ. ಬಂಡವಾಳ ಹೂಡಿಕೆಯ ವಿಷಯದಲ್ಲಿ ದೇಶ-ವಿದೇಶಗಳ ಆದ್ಯತೆ ಬೆಂಗಳೂರೇ ಆಗಿದೆ.

ನವೋದ್ಯಮ ಕ್ಷೇತ್ರದಲ್ಲಿ ಕಳೆದ ಎರಡೂವರೆ ದಶಕದಲ್ಲಿ (2010ರ ನಂತರ) ವೆಂಚರ್ ಕ್ಯಾಪಿಟಲ್ (ವಿಸಿ) ಕಂಪನಿಗಳಿಂದ 7,900 ಕೋಟಿ ಡಾಲರ್ (ಅಂದಾಜು ₹7.54 ಲಕ್ಷ ಕೋಟಿ) ಬಂಡವಾಳ ಆಕರ್ಷಿಸಿರುವ ಬೆಂಗಳೂರು ನವೋದ್ಯಮ ಕ್ಷೇತ್ರವು, ಈ ವಲಯದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿಶ್ವದ ಮೊದಲ 40 ನಗರಗಳ ಪೈಕಿ 15ನೇ ಸ್ಥಾನ ಪಡೆದಿದೆ. ಏಷ್ಯಾ ಖಂಡದ ರಾಷ್ಟ್ರಗಳ ನಗರಗಳ ಪಟ್ಟಿಯಲ್ಲಿ 6ನೇ ಸ್ಥಾನ ಗಳಿಸಿದೆ.

ದೇಶದ ಬೇರೆ ಯಾವ ನಗರವೂ ಈ ಪಟ್ಟಿಯ ಮೊದಲ 10 ನಗರಗಳಲ್ಲಿ ಸ್ಥಾನ ಪಡೆದಿಲ್ಲ. ದೇಶದ ರಾಜಧಾನಿ ದೆಹಲಿ, ವಾಣಿಜ್ಯ ನಗರಿ ಮುಂಬೈ, ಚೆನ್ನೈ, ಪುಣೆ ಮತ್ತು ಹೈದರಾಬಾದ್‌ನಂಥ ನಗರಗಳು ಇನ್ನೂ ಬೆಳೆಯುವ ಹಂತದಲ್ಲೇ ಇವೆ.

ನವೋದ್ಯಮ ಕ್ಷೇತ್ರದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ಜಾಗತಿಕ ನಗರಗಳ ಪಟ್ಟಿಯಲ್ಲಿ ಮುಂಬೈ ಮೊದಲ ಸ್ಥಾನದಲ್ಲಿದೆ.

80ಕ್ಕೂ ಹೆಚ್ಚು ದೇಶಗಳ, ಜಾಗತಿಕ ಮಟ್ಟದ 350ಕ್ಕೂ ಹೆಚ್ಚು ನವೋದ್ಯಮಗಳ ಕುರಿತು ದಶಕಕ್ಕೂ ಹೆಚ್ಚು ಕಾಲದಿಂದ ಅಧ್ಯಯನ ಮಾಡಿರುವ ಜಿನೋಮ್ ಸಂಸ್ಥೆಯು ಬಿಡುಗಡೆ ಮಾಡಿರುವ ಜಾಗತಿಕ ನವೋದ್ಯಮಗಳ ಸ್ಥಿತಿ-ಗತಿ (ಜಿಎಸ್‌ಇಆರ್) ವರದಿ-2026ರಲ್ಲಿ ಈ ಅಂಶಗಳು ಗಮನ ಸೆಳೆಯುತ್ತವೆ.

ಕಾರ್ಯಕ್ಷಮತೆ, ಆರ್ಥಿಕ ನೆರವು, ಮಾರುಕಟ್ಟೆ ಸಂಪರ್ಕ, ಪ್ರತಿಭೆ-ಅನುಭವ, ಎಐ ಆವಿಷ್ಕಾರ, ಸಂಶೋಧನೆ-ಅಭಿವೃದ್ಧಿ ಕ್ಷೇತ್ರಗಳಲ್ಲಿನ ಸಾಧನೆಯನ್ನು ಪರಿಗಣಿಸಿ ಶ್ರೇಯಾಂಕ ನೀಡಲಾಗಿದೆ.

ಏಷ್ಯಾ, ಉತ್ತರ ಅಮೆರಿಕ, ಯುರೋಪ್, ಲ್ಯಾಟಿನ್ ಅಮೆರಿಕಾ, ದಕ್ಷಿಣ ಸಹಾರ ಮರುಭೂಮಿಗೆ ಸೇರಿದ ಆಫ್ರಿಕಾ ಖಂಡ, ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಪಪುವಾ ನ್ಯೂಗಿನಿ ಮತ್ತು ಪೆಸಿಫಿಕ್ ಸಾಗರದ ಸಾವಿರಾರು ಸಣ್ಣ ದ್ವೀಪಗಳನ್ನು ಒಳಗೊಂಡಿರುವ ವಿಶಾಲ ಭೌಗೋಳಿಕ ಪ್ರದೇಶದ ನವೋದ್ಯಮಗಳ ಸಾಧನೆಗಳನ್ನು ಹೋಲಿಸಿ ಈ ವರದಿಯನ್ನು ಸಿದ್ಧಪಡಿಸಲಾಗಿದೆ.

25 ಸಾವಿರ ಹೊಸ ನವೋದ್ಯಮಗಳ ಸ್ಥಾಪನೆಯ ಗುರಿಯೊಂದಿಗೆ ಕರ್ನಾಟಕ ರಾಜ್ಯ ಸರ್ಕಾರವು ನವೋದ್ಯಮ ನೀತಿಯನ್ನು ಜಾರಿಗೊಳಿಸಿದ ವರ್ಷದಲ್ಲೇ ಇಂಥದ್ದೊಂದು ಹೆಗ್ಗಳಿಕೆ ಮೂಡಿದೆ.

**ಸಾಧನೆಯ ದಾರಿ...:** ಲಾಭದ ದೃಷ್ಟಿಯಿಂದ ಉದ್ಯಮಗಳ ಸ್ಥಾಪಕರು ಮತ್ತು ಹೂಡಿಕೆದಾರರ ಷೇರುಗಳ ಮಾರಾಟದ ವಿಷಯದಲ್ಲಿ ಬೆಂಗಳೂರು ಪೂರ್ಣಾಂಕ (10ರಲ್ಲಿ 10) ಪಡೆದು ಭರವಸೆ ಇಡಬಹುದಾದ ನಗರವಾಗಿ ಹೊರಹೊಮ್ಮಿದೆ.

ಬಂಡವಾಳ ಹೂಡುವಿಕೆ, ಪ್ರತಿಭಾವಂತರ ಲಭ್ಯತೆ ಮತ್ತು ಮಾರುಕಟ್ಟೆ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ವೇಗದಿಂದಲೂ (9 ಅಂಕಗಳು) ಗಮನ ಸೆಳೆದಿದೆ.

ಅಗತ್ಯಕ್ಕೆ ತಕ್ಕಂತೆ ಉತ್ಪಾದನೆ, ಅದಕ್ಕೆ ತಕ್ಕಂತೆ ತಮ್ಮನ್ನು ಅರ್ಪಿಸಿಕೊಳ್ಳುವ ಉದ್ಯೋಗಿಗಳ ತಂಡ, ಯೋಜನೆಯೊಂದನ್ನು ಅನುಷ್ಠಾನಗೊಳಿಸುವಲ್ಲಿ ಇರಬೇಕಾದ ಹೊಂದಾಣಿಕೆಯ ಗುಣದ ವಿಚಾರದಲ್ಲೂ ಬೆಂಗಳೂರಿನ ನವೋದ್ಯಮ (7 ಅಂಕ) ವೇಗ ಹೆಚ್ಚಿಸಿಕೊಳ್ಳುತ್ತಿದೆ.

ಉದ್ಯಮದ ಉಳಿವು, ವಿಸ್ತರಣೆಗೆ ಬೇಕಾದ ನಿರ್ಣಾಯಕ ಸಂಪನ್ಮೂಲಗಳ ಕ್ರೋಢೀಕರಣ, ಗ್ರಾಹಕರ ಸಮಸ್ಯೆಗಳನ್ನು ಬಗೆಹರಿಸುವ ಸಾಮರ್ಥ್ಯ, ಗ್ರಾಹಕರೊಂದಿಗೆ ಲಾಭದಾಯಕ ಒಡನಾಟವನ್ನೂ (8 ಅಂಕ) ಇಲ್ಲಿನ ನವೋದ್ಯಮಗಳು ಹೊಂದಿವೆ. ಖರ್ಚು ವೆಚ್ಚವನ್ನು ಸ್ಥಿರವಾಗಿರಿಸಿಕೊಂಡು ಆದಾಯ ಮತ್ತು ಮಾರುಕಟ್ಟೆ ಪಾಲನ್ನು ಹೆಚ್ಚಿಸಿಕೊಳ್ಳುವಲ್ಲಿ, ಉದ್ಯಮದ ಆರಂಭಿಕ ಹಂತದಲ್ಲಿ ಪಡೆದುಕೊಳ್ಳುವ ಕೌಶಲಗಳು, ಚುರುಕುತನದಲ್ಲೂ ಬೆಂಗಳೂರು ಗಮನ ಸೆಳೆಯುತ್ತದೆ ಎಂದು ವರದಿ ಹೇಳಿದೆ.

**ಹಲವು ಸವಾಲುಗಳು...:** ಈ ಸಾಧನೆಯ ನಡುವೆಯೂ ಬೆಂಗಳೂರಿನ ಮುಂದೆ ಹಲವು ಸವಾಲುಗಳೂ ಇರುವುದನ್ನು ವರದಿಯ ಅಂಕಿ ಅಂಶಗಳು ತೋರಿಸುತ್ತವೆ.

ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರತಿಭಾವಂತರು ಮತ್ತು ಅವರ ಅನುಭವಗಳ ಲಭ್ಯತೆ ನಿರಾಶಾದಾಯಕವಾಗಿದೆ. ಇಲ್ಲಿನ ನವೋದ್ಯಮಗಳು ಜಾಗತಿಕ ಮಾರುಕಟ್ಟೆಯನ್ನು ತಲುಪಲು ಹೆಚ್ಚು ಉತ್ಸಾಹ ತೋರಿಸುತ್ತಿವೆ. ಆದರೆ, ಅವು ಸ್ಥಳೀಯ ಮಾರುಕಟ್ಟೆಯಿಂದ ದೂರವೇ ಉಳಿದಿವೆ. ಬಳಕೆದಾರ ಕೇಂದ್ರಿತ ಉತ್ಪನ್ನಗಳನ್ನು ತಯಾರಿಸುವಲ್ಲಿ ಕೇವಲ 1 ಅಂಕ ಗಳಿಸಲಷ್ಟೇ ಶಕ್ತವಾಗಿದೆ. ಮಾರುಕಟ್ಟೆಯ ಅಗತ್ಯಕ್ಕೆ ತಕ್ಕಂತೆ ಉದ್ಯಮವನ್ನು ರೂಪಿಸುವಲ್ಲಿ, ಕಾಲಕ್ಕೆ ತಕ್ಕಂತೆ ಹೊಸ ತಂತ್ರಗಳನ್ನು ರೂಪಿಸಿ ಅಳವಡಿಸಿಕೊಳ್ಳುವ ವಿಚಾರದಲ್ಲೂ ನಗರ ಹಿಂದೆಯೇ ಉಳಿದಿದೆ.

ಇಂಗ್ಲಿಷ್ ಭಾಷಾ ಪರಿಣತಿ, ನವೋದ್ಯಮಗಳ ಸ್ಥಾಪನೆ-ಖರೀದಿ ವಹಿವಾಟು, ಜಿಟ್ ಹಬ್‌ನಲ್ಲಿ ಹೂಡಿಕೆದಾರರ ಪ್ರಮಾಣ ಹಾಗೂ ನವೋದ್ಯಮಗಳಿಗೆ ಸೌಕರ್ಯ ಕಲ್ಪಿಸುವ ವಿಚಾರದಲ್ಲಿ 1 ಅಂಕವನ್ನಷ್ಟೇ ಗಳಿಸಿದೆ.

ನವೋದ್ಯಮ ಕ್ಷೇತ್ರವು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ಕ್ಷೇತ್ರದ ವಿದ್ಯಾರ್ಥಿಗಳನ್ನು ಯಶಸ್ವಿಯಾಗಿ ತಲುಪಿದ್ದರೂ, ಮಾನವಿಕ ವಿಜ್ಞಾನ ಆಧರಿಸಿದ ವಿಶ್ವವಿದ್ಯಾಲಯ ಹಾಗೂ ಪದವಿ ಕೋರ್ಸ್‌ಗಳನ್ನು ತಲುಪುವಲ್ಲಿ ಅತಿ ಹಿಂದುಳಿದಿದೆ. ಪ್ರತಿಭೆ ಮತ್ತು ಅನುಭವದ ವಿಷಯದಲ್ಲಿ 10ಕ್ಕೆ 4 ಅಂಕ ಗಳಿಸಿದೆ.

ನವೋದ್ಯಮ ಕ್ಷೇತ್ರದಲ್ಲಿ ಖಾಸಗಿ ವಲಯದ ಪಾಲು ಹೆಚ್ಚಿದ್ದು, ಬಂಡವಾಳದ ನೆರವು ನೀಡಲು ಕೂಡ ರಾಜ್ಯ ಸರ್ಕಾರ ಸಜ್ಜಾಗುತ್ತಿದೆ. ಇದೆಲ್ಲದರ ಮಧ್ಯೆಯೂ, ವಾಹನ ದಟ್ಟಣೆ ಸಮಸ್ಯೆ, ಮೂಲಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿರುವ ಬೆಂಗಳೂರಿನ ಬಗ್ಗೆ ಉದ್ಯಮಿಗಳ ನಿರಾಶೆಯ ಮಾತುಗಳು ಮುಂದುವರಿದಿದೆ.

## ಮೊದಲ 10ರೊಳಗೆ ಬರಲು ಪ್ರಯತ್ನ

ಇಡೀ ದೇಶದ ನವೋದ್ಯಮ ಕ್ಷೇತ್ರದಲ್ಲಿ ಬೆಂಗಳೂರು ನಗರ ಒಂದೇ ದೊಡ್ಡ ಸಾಧನೆ ಮಾಡಿದೆ. ರಾಜ್ಯ ಸರ್ಕಾರ ಕೈಗೊಂಡಿರುವ ಪ್ರಯತ್ನಗಳೂ ಅದಕ್ಕೆ ಬೆಂಬಲವಾಗಿ ನಿಂತಿವೆ. ಮುಂದಿನ ವರ್ಷ ಬೆಂಗಳೂರನ್ನು ಜಾಗತಿಕ ಮಟ್ಟದ 10 ನಗರಗಳಲ್ಲಿ ಒಂದಾಗಿಸುವ ಉದ್ದೇಶದಿಂದ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಪ್ರಸಕ್ತ ವರ್ಷ 'ಎಲಿವೇಟ್ ನೆಕ್ಸ್ಟ್' ಯೋಜನೆ ರೂಪಿಸಿದ್ದು, ₹1 ಕೋಟಿ ಅನುದಾನ-ನೆರವು ನೀಡಲಾಗುವುದು. ಅದಕ್ಕಾಗಿ 33 ನವೋದ್ಯಮಗಳನ್ನು ಆಯ್ಕೆ ಮಾಡಲಾಗಿದೆ. 'ಫಂಡ್ ಆಫ್ ಫಂಡ್' ಎಂಬ ಇನ್ನೊಂದು ಯೋಜನೆಗೆ ₹200 ಕೋಟಿ ಮೀಸಲಿಡಲಾಗಿದೆ. ಇದು ಹೂಡಿಕೆ ಸಲುವಾಗಿ ಮೀಸಲು. ಕೆಲವು ಬ್ಯಾಂಕ್‌ಗಳೊಂದಿಗೆ ಮಾತುಕತೆ ನಡೆದಿದ್ದು, ಅವುಗಳಿಂದ ₹300 ಕೋಟಿ ಬಂಡವಾಳ ಹೂಡಿಕೆ ಮಾಡಿಸುವ ಉದ್ದೇಶವಿದೆ

**ಡಾ.ಎನ್.ಮಂಜುಳಾ**
ಕಾರ್ಯದರ್ಶಿ, ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ವಿಜ್ಞಾನ-ತಂತ್ರಜ್ಞಾನ ಇಲಾಖೆ

## ಎಐ ಕ್ಷೇತ್ರದಲ್ಲೂ ಮುಂದು

ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲೂ ಬೆಂಗಳೂರು ದೇಶದಲ್ಲಷ್ಟೇ ಅಲ್ಲ, ಏಷ್ಯಾ ಖಂಡದಲ್ಲೂ ಮುಂಚೂಣಿಯಲ್ಲಿದೆ. 'ಎಐ-ನೇಟಿವ್ ಕ್ಲಸ್ಟರ್' ವಿಭಾಗದಲ್ಲಿ ಏಷ್ಯಾದಲ್ಲೇ ಎರಡನೇ ಸ್ಥಾನವನ್ನು ಗಳಿಸಿದೆ.

ವರದಿಯ ಪ್ರಕಾರ 2023-25ರ ಅವಧಿಯಲ್ಲಿ ಬೆಂಗಳೂರಿನ ಎಐ ತಂತ್ರಜ್ಞಾನ ಅಭಿವೃದ್ಧಿ ಕ್ಷೇತ್ರದ ಮೌಲ್ಯ 200 ಕೋಟಿ ಡಾಲರ್. ಅಂದರೆ, ಅಂದಾಜು ₹19,100 ಕೋಟಿ.

ದೇಶದಲ್ಲಿ ಎಐ ನವೋದ್ಯಮ ಕ್ಷೇತ್ರದಲ್ಲಿ ಹೂಡಲಾಗುತ್ತಿರುವ ಬಂಡವಾಳದಲ್ಲಿ ಶೇ 58ರಷ್ಟನ್ನು ಬೆಂಗಳೂರು ಆಕರ್ಷಿಸುತ್ತಿದೆ. 2020ರಿಂದ ಇಲ್ಲಿಯವರೆಗೆ ಈ ಕ್ಷೇತ್ರ 150 ಕೋಟಿ ಡಾಲರ್ (ಅಂದಾಜು ₹14,325 ಕೋಟಿ) ಬಂಡವಾಳ ಆಕರ್ಷಿಸಿದೆ.

## ಏರೋಸ್ಪೇಸ್, ರಕ್ಷಣಾ ತಂತ್ರಜ್ಞಾನ...

ಭಾರತದ ಏರೋಸ್ಪೇಸ್ ಮತ್ತು ರಕ್ಷಣಾ ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಯಲ್ಲೂ ಬೆಂಗಳೂರು ಮಹತ್ತರವಾದ ಪಾತ್ರ ನಿರ್ವಹಿಸುತ್ತಿದೆ. ಈ ಕ್ಷೇತ್ರದಲ್ಲಿ ನಡೆಯುವ ವ್ಯಾಪಾರದಲ್ಲಿ ಶೇ 65ರಷ್ಟು ಪಾಲು ಮತ್ತು ವಿಮಾನಗಳ ತಯಾರಿಕೆಯಲ್ಲಿ ಶೇ 67ರಷ್ಟು ಪಾಲು ಬೆಂಗಳೂರಿನದ್ದೇ. ಕೆಐಎಡಿಬಿ ನಿರ್ಮಿಸಿರುವ ಏರೋಸ್ಪೇಸ್ ಪಾರ್ಕ್ ಎಂಎಸ್‌ಎಂಇಗಳಿಗೆ ಅನುಕೂಲ ಕಲ್ಪಿಸುತ್ತಿದೆ ಎಂದು ವರದಿ ಹೇಳಿದೆ.

ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರದಲ್ಲೂ ಬೆಂಗಳೂರು ಮುಂದಿದ್ದು, ರಾಜ್ಯ ಸರ್ಕಾರವು ಇದಕ್ಕೆ ಪೂರಕವಾದ ನೀತಿಗಳನ್ನು ರೂಪಿಸುತ್ತಿದೆ ಎಂದು ವರದಿ ಶ್ಲಾಘಿಸಿದೆ.

## ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

### ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

**ವಿಳಾಸ**

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

**ಜಾಗತಿಕ ನವೋದ್ಯಮ ಕ್ಷೇತ್ರದ ಮೊದಲ 20 ನಗರಗಳು**

| | |
|---|---|
| 1 | ಸಿಲಿಕಾನ್ ವ್ಯಾಲಿ (ಅಮೆರಿಕ) |
| 2 | ನ್ಯೂಯಾರ್ಕ್ ಸಿಟಿ (ಅಮೆರಿಕ) |
| 3 | ಲಂಡನ್ (ಬ್ರಿಟನ್) |
| 4 | ಟೆಲ್ ಅವಿವ್ (ಇಸ್ರೇಲ್) |
| 5 | ಬಾಸ್ಟನ್ (ಅಮೆರಿಕ) |
| 6 | ಲಾಸ್ ಏಂಜಲೀಸ್ (ಅಮೆರಿಕ) |
| 7 | ಬೀಜಿಂಗ್ (ಚೀನಾ) |
| 8 | ಸಿಂಗಪುರ |
| 9 | ಸೋಲ್ (ದಕ್ಷಿಣ ಕೊರಿಯಾ) |
| 10 | ಸಿಯಾಟೆಲ್ (ಅಮೆರಿಕ) |
| 11 | ಶಾಂಘೈ (ಚೀನಾ) |
| 12 | ಟೋಕಿಯೊ (ಜಪಾನ್) |
| 13 | ಟೊರಾಂಟೊ (ಕೆನಡಾ) |
| 14 | ಪ್ಯಾರಿಸ್ (ಫ್ರಾನ್ಸ್) |
| 15 | ಬೆಂಗಳೂರು-ಕರ್ನಾಟಕ |
| 16 | ವಾಷಿಂಗ್ಟನ್ ಡಿಸಿ (ಅಮೆರಿಕ) |
| 17 | ಸ್ಯಾನ್ ಡಿಯಾಗೊ (ಅಮೆರಿಕ) |
| 18 | ಆಸ್ಟಿನ್ (ಅಮೆರಿಕ) |
| 19 | ಶೆನಝೆನ್ (ಚೀನಾ) |
| 20 | ಷಿಕಾಗೊ (ಅಮೆರಿಕ) |

**ಏಷ್ಯಾದ 10 ನಗರಗಳು**

| | |
|---|---|
| 1 | ಬೀಜಿಂಗ್ |
| 2 | ಸಿಂಗಪುರ |
| 3 | ಸೋಲ್ |
| 4 | ಶಾಂಘೈ |
| 5 | ಟೋಕಿಯೊ |
| 6 | ಬೆಂಗಳೂರು |
| 7 | ಶೆನ್‌ಝೆನ್ |
| 8 | ಹಾಂಗ್‌ಜೌ |
| 9 | ಹಾಂಗ್‌ಕಾಂಗ್ |
| 10 | ದೆಹಲಿ |

Presented by

## ❖ ಜಿಡಿಪಿ ಅಂದಾಜು ತಗ್ಗಿಸಿದ ಎಡಿಬಿ

- ಪ್ರಸಕ್ತ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ಶೇ 6.6ಕ್ಕೆ ಇಳಿಯಲಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ತನ್ನ ಅಂದಾಜನ್ನು ಪರಿಷ್ಕರಿಸಿದೆ.
- ದೇಶದ ಜಿಡಿಪಿ ಬೆಳವಣಿಗೆ ಶೇ 6.9ರಷ್ಟಾಗಲಿದೆ ಎಂದು ಅದು ಏಪ್ರಿಲ್‌ನಲ್ಲಿ ಅಂದಾಜಿಸಿತ್ತು. ಆದರೆ, ಪಶ್ಚಿಮ ಏಷ್ಯಾದ ಸಂಘರ್ಷದಿಂದಾಗಿ ಇಂಧನ ಬೆಲೆ ಹೆಚ್ಚಳ ಆಗಿರುವುದರಿಂದ ಬೆಳವಣಿಗೆ ತಗ್ಗಬಹುದು ಎಂದು ಜುಲೈ ತಿಂಗಳ ಮುನ್ನೋಟದಲ್ಲಿ ತಿಳಿಸಿದೆ.
- ದೇಶದ ಜಿಡಿಪಿ ಬೆಳವಣಿಗೆ ಇಳಿಕೆಯಾದರೂ, ಜಗತ್ತಿನ ಪ್ರಮುಖ ಆರ್ಥಿಕತೆಗಳಲ್ಲಿ ಭಾರತವು ಅತಿ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿ ಉಳಿಯಲಿದೆ ಎಂದು ಗುರುವಾರ ತಿಳಿಸಿದೆ.
- ಹೆಚ್ಚು ವಿದೇಶಿ ಬಂಡವಾಳವನ್ನು ಆಕರ್ಷಿಸುವುದು. ಇಂಧನದ ಮೇಲಿನ ತೆರಿಗೆ ಕಡಿತ, ಸಾಲದ ನೆರವು, ಸೇವಾ ವಲಯದ ರಫ್ತು ಹೆಚ್ಚಳ ಮತ್ತು ಸರ್ಕಾರದ ಕಡೆಯಿಂದ ಬಂಡವಾಳ ವೆಚ್ಚದ ಏರಿಕೆಯು ಬೆಳವಣಿಗೆಗೆ ಸಹಕಾರಿ ಆಗಲಿವೆ ಎಂದು ಹೇಳಿದೆ.
- ಪಶ್ಚಿಮ ಏಷ್ಯಾದ ಸಂಘರ್ಷದಿಂದ ಇಂಧನ ದರ ಹೆಚ್ಚಳವಾಗಿದೆ. ಇದು ಸಾರಿಗೆ ಮತ್ತು ಆಹಾರ ಪದಾರ್ಥಗಳ ಬೆಲೆಯನ್ನು ಹೆಚ್ಚಿಸಿದೆ. ರೂಪಾಯಿ ಮೌಲ್ಯ ಇಳಿಕೆ, ಬಿಸಿಗಾಳಿ ಸೇರಿದಂತೆ ವಿವಿಧ ಅಂಶಗಳು ಹಣದುಬ್ಬರವನ್ನು ಶೇ 5.2ಕ್ಕೆ ಹೆಚ್ಚಿಸಬಹುದು ಎಂದು ಎಡಿಬಿ ಹೇಳಿದೆ.

- ಕಳೆದ ತಿಂಗಳು ಭಾರತೀಯ ರಿಸರ್ವ್ ಬ್ಯಾಂಕ್ ದೇಶದ ಜಿಡಿಪಿ ಬೆಳವಣಿಗೆಯ ಅಂದಾಜನ್ನು ಪರಿಷ್ಕರಿಸಿದ್ದು, ಶೇ 6.9ರಿಂದ ಶೇ 6.6ಕ್ಕೆ ಇಳಿಯಲಿದೆ ಎಂದು ಹೇಳಿದೆ. ಹಣದುಬ್ಬರವು ಶೇ 4.6ರಿಂದ ಶೇ 5.1 ಹೆಚ್ಚಳವಾಗಲಿದೆ ಎಂದು ಅಂದಾಜಿಸಿದೆ.

## ❖ 'ವಿಷನ್ 2050' ಕುರಿತು ಸಭೆ

- ಜಾರ್ಖಂಡ್ ರಾಜ್ಯವನ್ನು ತಂತ್ರಜ್ಞಾನದ ತಾಣವನ್ನಾಗಿ ಮಾಡುವ ಉದ್ದೇಶದಿಂದ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಜಾಗತಿಕ ತಂತ್ರಜ್ಞಾನ ಕಂಪನಿಗಳು ಮತ್ತು ಉದ್ಯಮ ನಾಯಕರೊಂದಿಗೆ 'ವಿಷನ್ 2050' ಕುರಿತು ಸಭೆ ನಡೆಸಿದರು.
- ಸಭೆಯಲ್ಲಿ ಕೃತಕ ಬುದ್ಧಿಮತ್ತೆ ಆಧಾರಿತ ಆಡಳಿತ, ಡಿಜಿಟಲ್ ಮೂಲಸೌಕರ್ಯ, ನಾವೀನ್ಯ, ಕ್ಲೌಡ್ ಅಳವಡಿಕೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಿದರು ಎಂದು ಪ್ರಕಟಣೆ ತಿಳಿಸಿದೆ.
- ಸಭೆಯಲ್ಲಿ ಗೂಗಲ್, ಒರಾಕಲ್, ಮೈಕ್ರೋಸಾಫ್ಟ್, ಐಬಿಎಂ, ಎಡಬ್ಲ್ಯುಎಸ್, ಸೇಲ್ಸ್ ಫೋರ್ಸ್, ಟೆಕ್‌ಸ್ಟಾರ್ ಸೇರಿದಂತೆ ವಿವಿಧ ಕಂಪನಿಗಳು ಪಾಲ್ಗೊಂಡಿದ್ದವು.



### ಹಂಗಾಮು ಮುಗಿದು 3 ತಿಂಗಳಾದರೂ ಕಬ್ಬಿನ ಬಿಲ್ ಪಾವತಿಯಾಗಿಲ್ಲ

# ₹60 ಕೋಟಿ ಪ್ರೋತ್ಸಾಹಧನ ಬಾಕಿ

ಬಸವರಾಜ ಹವಾಲ್ದಾರ

**ಬಾಗಲಕೋಟೆ:** ಕಬ್ಬು ಹಂಗಾಮು ಮುಗಿದು ಮೂರೂವರೆ ತಿಂಗಳಾಗಿದ್ದರೂ, ಜಿಲ್ಲೆಯ ಬಹುತೇಕ ಕಬ್ಬು ಬೆಳೆದ ರೈತರಿಗೆ ಕೆಲ ಸಕ್ಕರೆ ಕಾರ್ಖಾನೆಗಳು ₹60 ಕೋಟಿ ಪ್ರೋತ್ಸಾಹ ಧನವನ್ನು ನೀಡದೇ, ಬಾಕಿ ಉಳಿಸಿಕೊಂಡಿವೆ.

ರಾಜ್ಯ ಸರ್ಕಾರ ಹಾಗೂ ರೈತರ ನಡುವೆ ಕಬ್ಬು ಬೆಲೆ ನಿಗದಿಗೆ ಸಂಬಂಧಿಸಿದಂತೆ ನಡೆದ ಮಾತುಕತೆಯಲ್ಲಿ ಸರ್ಕಾರ ನಿಗದಿಪಡಿಸಿದ ಕಬ್ಬು ದರಕ್ಕೆ ರೈತರು ಒಪ್ಪಲಿಲ್ಲ. ಆಗ ಸರ್ಕಾರವು ಪ್ರತಿ ಟನ್‌ಗೆ ಪ್ರೋತ್ಸಾಹ ಧನವಾಗಿ ಸರ್ಕಾರದಿಂದ ₹50 ಮತ್ತು ಕಾರ್ಖಾನೆಗಳಿಂದ ₹50 ನೀಡಲಾಗುವುದು ಎಂದು ಘೋಷಿಸಿತ್ತು.

ಕಬ್ಬು ನುರಿಸುವಿಕೆ ಮಾರ್ಚ್ ತಿಂಗಳಲ್ಲಿ ಮುಗಿದಿದೆ. ಸರ್ಕಾರ ತನ್ನ ಪಾಲಿನ ಪ್ರೋತ್ಸಾಹ ಧನವನ್ನು ಮೇ ತಿಂಗಳಲ್ಲೇ ಬಿಡುಗಡೆ ಮಾಡಿದೆ. ಅದರೊಂದಿಗೆ ಕಾರ್ಖಾನೆಗಳು ತಮ್ಮ ಪಾಲನ್ನು ಸೇರಿಸಿ, ಪ್ರತಿ ಟನ್ ಕಬ್ಬಿಗೆ ₹100 ನೀಡಬೇಕಿತ್ತು. ಸರ್ಕಾರದ ಪಾಲಿನ ಹಣ ನೀಡಲಾಗಿದೆ. ಆದರೆ, ಕಾರ್ಖಾನೆಗಳದ್ದು ಇನ್ನೂ ಬಾಕಿ ಉಳಿದಿದೆ.

ಜಿಲ್ಲೆಯಲ್ಲಿ 1.33 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯಲಾಗಿತ್ತು. 1.64 ಕೋಟಿ ಟನ್ ಕಬ್ಬು ನುರಿಸಲಾಗಿದೆ. ₹82 ಕೋಟಿ ಪ್ರೋತ್ಸಾಹ ಧನ ಪಾವತಿಸಬೇಕಿತ್ತು. ಜಿಲ್ಲೆಯ 14 ಸಕ್ಕರೆ ಕಾರ್ಖಾನೆಗಳ ಪೈಕಿ ಬಾಡಂಗಡಿ ಸಕ್ಕರೆ ಕಾರ್ಖಾನೆ, ರನ್ನ ಸಹಕಾರ ಸಕ್ಕರೆ ಕಾರ್ಖಾನೆ, ಐಸಿಪಿಎಲ್, ಇಐಡಿ ಪ್ಯಾರಿ, ಮೆಲ್‌ಬ್ರೊ ಸಕ್ಕರೆ ಕಾರ್ಖಾನೆಗಳು ₹22 ಕೋಟಿ ಬಾಕಿ ಪಾವತಿಸಿವೆ. ಉಳಿದವು ಪಾವತಿಸಿಲ್ಲ.

**ಕಬ್ಬಿನ ಬಿಲ್ ಬಾಕಿ:** ಜಿಲ್ಲೆಯ 14 ಸಕ್ಕರೆ ಕಾರ್ಖಾನೆಗಳ ಪೈಕಿ 12 ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ ಅನ್ನು ಪೂರ್ಣವಾಗಿ ಪಾವತಿಸಿವೆ. ಜೆಮ್ಸ್ ಕಾರ್ಖಾನೆ ₹4.50 ಕೋಟಿ, ಜಮಖಂಡಿ ಸಕ್ಕರೆ ಕಾರ್ಖಾನೆ ₹9 ಕೋಟಿ ಬಾಕಿ ಉಳಿಸಿಕೊಂಡಿವೆ.

**ಸರ್ಕಾರದ ಪ್ರೋತ್ಸಾಹ ಧನವನ್ನು ಅರ್ಹ ರೈತರಿಗೆ ಪಾವತಿಸಲಾಗಿದೆ. ಕಾರ್ಖಾನೆಗಳ ಮೊತ್ತವನ್ನು ವಾರದಲ್ಲಿ ಪಾವತಿಸುವಂತೆ ಸೂಚಿಸಿದ್ದೇನೆ**

**ಸಂಗಪ್ಪ,** ಜಿಲ್ಲಾಧಿಕಾರಿ, ಬಾಗಲಕೋಟೆ

**ಬರ ಇದೆ. ಬಿತ್ತನೆ ಸರಿಯಾಗಿಲ್ಲ. ರೈತರಿಗೆ ಪ್ರೋತ್ಸಾಹ ಧನ ನೀಡಿದರೆ, ಅನುಕೂಲ ಆಗುತ್ತದೆ. ಮೂರು ತಿಂಗಳಿನಿಂದ ಇಂದು, ನಾಳೆ ಎನ್ನಲಾಗುತ್ತಿದೆ. ಕಾರ್ಖಾನೆಯವರು ಕೂಡಲೇ ಹಣ ಪಾವತಿಸಬೇಕು**

**ಬಸವಂತಪ್ಪ ಕಾಂಬಳೆ,**

ಅಧ್ಯಕ್ಷ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾ ಘಟಕ

Publication Date
10/07/2026

Presented by

## ❖ ಸೀಮಾಸುಂಕ ವಿನಾಯಿತಿ

- ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಸ್ಮಾರ್ಟ್ ಟಿ.ವಿ.ಗಳ ತಯಾರಿಕೆಯನ್ನು ದೇಶದಲ್ಲಿ ಉತ್ತೇಜಿಸುವ ಉದ್ದೇಶದಿಂದ ಕೇಂದ್ರ ಸರ್ಕಾರವು ಇವುಗಳ ತಯಾರಿಕೆಯಲ್ಲಿ ಬಳಸುವ ಕೆಲವು ಸರಕುಗಳ ಮೂಲ ಸೀಮಾಸುಂಕವನ್ನು ಮನ್ನಾ ಮಾಡಿದೆ.
- ಎಲೆಕ್ಟ್ರಾನಿಕ್ ಉಪಕರಣಗಳ ತಯಾರಿಕೆಯಲ್ಲಿ ಬಳಕೆಯಾಗುವ ಮೂರು ಪ್ರಮುಖ ಬಿಡಿಭಾಗಗಳಿಗೆ ಬೇಕಾಗುವ ಸರಕುಗಳ ಮೂಲ ಸೀಮಾಸುಂಕವನ್ನು ಮನ್ನಾ ಮಾಡುವ ಪ್ರತ್ಯೇಕ ಅಧಿಸೂಚನೆಗಳನ್ನು ಕೇಂದ್ರ ಹಣಕಾಸು ಸಚಿವಾಲಯ ಹೊರಡಿಸಿದೆ.

## ❖ ₹1.34 ಲಕ್ಷಕ್ಕೆ ಉಪಗ್ರಹ ದೂರವಾಣಿ

- ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್) ಉಪಗ್ರಹ ದೂರವಾಣಿ ಬೆಲೆಯನ್ನು ₹1.34 ಲಕ್ಷಕ್ಕೆ ನಿಗದಿಪಡಿಸಿದೆ.
- ರಕ್ಷಣೆ, ಸಮುದ್ರ, ವಿಪತ್ತು ನಿರ್ವಹಣೆ, ಗಣಿಗಾರಿಕೆಯಲ್ಲಿ ಕೆಲಸ ಮಾಡುವವರಿಗೆ, ದುರ್ಗಮ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಲು ಮತ್ತು ಸಾಹಸ ಮನೋಭಾವದ ಪ್ರವಾಸಿಗರಿಗೆ ಈ ಫೋನ್‌ಗಳನ್ನು ವಿನ್ಯಾಸಗೊಳಿಸಲಾಗಿದೆ.
- ಎಲ್ಲ ತೆರಿಗೆ ಸೇರಿದಂತೆ ಇದರ ಬೆಲೆ ₹1,34,166 ಇದೆ ಎಂದು ಬಿಎಸ್‌ಎನ್‌ಎಲ್ ತಿಳಿಸಿದೆ. ಸಾಂಪ್ರದಾಯಿಕ ಮೊಬೈಲ್ ದೂರವಾಣಿಗಳು ಕಾರ್ಯನಿರ್ವಹಿಸದ ಜಾಗಗಳಲ್ಲಿ ಈ ಉಪಗ್ರಹ ದೂರವಾಣಿಗಳು ಸಂಪರ್ಕವನ್ನು ಸಾಧಿಸುತ್ತವೆ. ಹೆಚ್ಚಿನ ಮಾಹಿತಿಗೆ ಹತ್ತಿರ ಬಿಎಸ್‌ಎನ್‌ಎಲ್ ಕಚೇರಿಯನ್ನು ಸಂಪರ್ಕಿಸುವಂತೆ ತಿಳಿಸಿದೆ.

# ಭಾರತ ಮಿಶ್ರ ರಿಲೆ ತಂಡಕ್ಕೆ ಚಿನ್ನದ ಪದಕ

## ಏಷ್ಯನ್ 23ವರ್ಷದೊಳಗಿನವರ ಅಥ್ಲೆಟಿಕ್ಸ್: ಶಿವಾಜಿಗೆ ಬೆಳ್ಳಿ

**ಒರ್ಡೋಸ್, ಚೀನಾ (ಪಿಟಿಐ):** ಭಾರತದ ಅಥ್ಲೀಟ್‌ಗಳು ಏಷ್ಯನ್ 23 ವರ್ಷದೊಳಗಿನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಒಂದು ಚಿನ್ನ ಸೇರಿದಂತೆ ಐದು ಪದಕಗಳನ್ನು ಗೆದ್ದರು.

ಕೂಟದ 4X400 ಮೀಟರ್ಸ್ ಮಿಶ್ರ ರಿಲೆ ವಿಭಾಗದಲ್ಲಿ ಭಾರತ ತಂಡವು ಚಿನ್ನ ಜಯಿಸಿತು. ಆಸ್ತಿಕ್ ಪ್ರಧಾನ್, ಸಾಂದ್ರಾ ಮೋಳ್ ಸಾಬು, ಸೇತು ಮಿಶ್ರಾ ಮತ್ತು ಶ್ರಾವಣಿ ಸಚಿನ್ ಸಾಂಗ್ಳೆ ಅವರಿದ್ದ ತಂಡವು 3 ನಿಮಿಷ, 18.64 ಸೆಕೆಂಡುಗಳಲ್ಲಿ ಗುರಿ ಮುಟ್ಟಿತು. ಇದಲ್ಲದೇ ಭಾರತದ ಕ್ರೀಡಾಪಟುಗಳು ಒಂದು ಬೆಳ್ಳಿ ಮತ್ತು ಮೂರು ಕಂಚಿನ ಪದಕ ಜಯಿಸಿದರು.

ಪುರುಷರ ಡಿಸ್ಕಸ್ ಥ್ರೋನಲ್ಲಿ ಭರತ್ ಪ್ರೀತ್ ಸಿಂಗ್ (ದೂರ: 52.91ಮೀ) ಅವರು ಕಂಚು ಜಯಿಸಿ ಭಾರತದ ಪದಕ ಖಾತೆಯನ್ನು ತೆರೆದರು. ಚೀನಾದ ಲೀ ಝಿಕ್ಸಿನ್ (60.79ಮೀ) ಚಿನ್ನ ಜಯಿಸಿದರೆ, ಅವರ ಸಹಸ್ಪರ್ಧಿ ಜಿಯಾಂಗ್ ಝುಹಾವೊ (59.60ಮೀ) ಬೆಳ್ಳಿ ಗೆದ್ದರು.

5000 ಮೀ ಓಟದಲ್ಲಿ ಶಿವಾಜಿ ಪರಶುರಾಮ್ ಮಾದಪ್ಪಗೌಡರ (14ನಿ,08.19ಸೆ) ಮತ್ತು ವಿನೋದ್ ಸಿಂಗ್ (14ನಿ, 23.67ಸೆ) ಅವರು ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗೆದ್ದರು. ಜಪಾನ್ ದೇಶದ ರೂಯಿ ಸುಜುಕಿ (14ನಿ,01.24ಸೆ) ಚಿನ್ನ ಗಳಿಸಿದರು.

ಮಹಿಳೆಯರ 3000 ಮೀ ಸ್ಟೀಪಲ್‌ಚೇಸ್‌ನಲ್ಲಿ ಪ್ರಾಚಿ




ಏಷ್ಯನ್ 23 ವರ್ಷದೊಳಗಿನವರ ಅಥ್ಲೆಟಿಕ್ಸ್‌ನಲ್ಲಿ ಪುರುಷರ 5000 ಮೀ ಓಟದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದ ಭಾರತದ ಶಿವಾಜಿ ಪರಶುರಾಮ್ ಮಾದಪ್ಪಗೌಡರ ಮತ್ತು ವಿನೋದ್ ಸಿಂಗ್ ತ್ರಿವರ್ಣಧ್ವಜದೊಂದಿಗೆ ಸಂಭ್ರಮಿಸಿದರು

ದಿವಾಕರ್ ಅವರು 10ನಿ, 32.69ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಕಂಚು ಗಳಿಸಿದರು.

ಈ ಕೂಟದಲ್ಲಿ ಭಾರತದ 53 ಅಥ್ಲೀಟ್‌ಗಳು ಸ್ಪರ್ಧಿಸಿದ್ದಾರೆ.

## ❖ 'ಇ20: ಶೇ 5ರವರೆಗೆ ಮೈಲೇಜ್ ಕುಸಿತ

- ಶೇ 20ರಷ್ಟು ಎಥೆನಾಲ್ ಮಿಶ್ರಣವಿರುವ ಪೆಟ್ರೋಲ್ (ಇ20) ಬಳಕೆಯಿಂದ ಕೆಲವು ವಾಹನಗಳ ಇಂಧನ ದಕ್ಷತೆಯ (ಮೈಲೇಜ್) ಸಾಮರ್ಥ್ಯವು ಶೇಕಡ 3ರಿಂದ ಶೇ 5ರಷ್ಟು ಕಡಿಮೆ ಆಗಬಹುದು ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತಿಳಿಸಿದೆ.
- ಆದರೆ, ಇ20 ಪೆಟ್ರೋಲ್ ಬಳಕೆಯಿಂದ ವಾಹನಗಳಲ್ಲಿ ಇಂಧನದ ದಹನಶಕ್ತಿ ಹೆಚ್ಚಾಗಿ, ಕಾರ್ಯ ಕ್ಷಮತೆಯೂ ಹೆಚ್ಚುತ್ತದೆ. ಎಂಜಿನ್ ಕಾರ್ಯಾಚರಣೆ ಸುಗಮವಾಗುವುದರ ಜೊತೆಗೆ ಇಂಗಾಲ ಹೊರಸೂಸುವಿಕೆ ತಗ್ಗುವುದರಿಂದ ಪರಿಸರದ ಮೇಲಿನ ಹೊರೆಯೂ ಕಡಿಮೆ ಆಗುತ್ತದೆ ಎಂದು ತಿಳಿಸಿದೆ.
- ಇ20 ಇಂಧನದ ಬಗ್ಗೆ ಬರುತ್ತಿರುವ ಟೀಕೆಗಳಿಗೆ ಸಂಬಂಧಿಸಿದಂತೆ ಪ್ರಶೋತ್ತರ ಮಾದರಿಯ ಮಾಹಿತಿ ಪ್ರಕಟಿಸಿರುವ ಸಚಿವಾಲಯ, 'ಇ10 ಅಥವಾ ಶುದ್ಧ ಪೆಟ್ರೋಲ್‌ಗಿಂತಲೂ ಇ20 ಪೆಟ್ರೋಲ್ ಹೆಚ್ಚು ಶುದ್ಧವಾಗಿದೆ. ಉತ್ತಮ ಗುಣಮಟ್ಟ ಮತ್ತು ಅಧಿಕ ಇಂಧನ ದಕ್ಷತೆ ಹೊಂದಿದೆ. ವೈಜ್ಞಾನಿಕ ಪರೀಕ್ಷೆ, ವಾಹನ ತಯಾರಕ ಕಂಪನಿಗಳೊಂದಿಗೆ ಸಮಾಲೋಚನೆ ನಡೆಸಿ, ದೇಶದಲ್ಲಿ ಎಥೆನಾಲ್ ಉತ್ಪಾದನೆ ಹೆಚ್ಚಳವಾದ ಬಳಿಕವೇ ಈ ಇಂಧನವನ್ನು ಬಳಸಲಾಗುತ್ತಿದೆ ಎಂದು ತಿಳಿಸಿದೆ.
- ಎಥೆನಾಲ್ ಮಿಶ್ರಣ ಯೋಜನೆಯನ್ನು ತರಾತುರಿ ಯಲ್ಲಿ ಅನುಷ್ಠಾನ ಗೊಳಿಸಲಾಗಿದೆ ಎನ್ನುವ ಆರೋಪವನ್ನು ನಿರಾಕರಿಸಿ ರುವ ಸಚಿವಾಲಯವು, 2001ರಲ್ಲಿ ಎಥೆನಾಲ್ ಮಿಶ್ರಣದ ಪ್ರಾಯೋಗಿಕ ಯೋಜನೆಗಳು ಆರಂಭವಾಗಿದ್ದವು. 2014ರವರೆಗೆ ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಶೇ 1.5ರಷ್ಟಿತ್ತು. 2018ರಲ್ಲಿ ಕೇಂದ್ರ ಸರ್ಕಾರವು, ಜೈವಿಕ ಇಂಧನದ ರಾಷ್ಟ್ರೀಯ ನೀತಿಯನ್ನು ಜಾರಿಗೊಳಿಸಿದ ಬಳಿಕ ಎಥೆನಾಲ್ ಉತ್ಪಾದನೆ ಹೆಚ್ಚಳವಾಯಿತು. 2022ರಲ್ಲಿ ದೇಶದಲ್ಲಿ ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣ ಶೇ 10ಕ್ಕೆ ತಲುಪಿತು. 2025-26ರ ವೇಳೆಗೆ ಶೇ 20ಕ್ಕೆ ತಲುಪಿದೆ ಎಂದು ಹೇಳಿದೆ.
- ಇ20 ಪೆಟ್ರೋಲ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮೊದಲು ಎಂಜಿನ್ ಬಾಳಿಕೆ. ಇಂಧನ ವ್ಯವಸ್ಥೆ, ತುಕ್ಕು ನಿರೋಧಕತೆ, ಚಾಲನಾ ಸಾಮರ್ಥ್ಯ ಸೇರಿದಂತೆ ವ್ಯಾಪಕ ಪರೀಕ್ಷೆಗೆ ಒಳಪಡಿಸ ಲಾಗಿದೆ ಎಂದು ಹೇಳಿದೆ.
- ಮಾರುತಿ ಸುಜುಕಿ, ಹೀರೊ ಮೋಟೊಕಾರ್ಪ್ ಸೇರಿ ವಿವಿಧ ವಾಹನ ತಯಾರಿಕಾ ಕಂಪನಿಗಳ ಪ್ರತಿಕ್ರಿಯೆ ಪಡೆಯಲಾಗಿದೆ. ಅವರು ಈ ಇಂಧನದಿಂದ ಈಗಾಗಲೇ ಬಳಕೆಯಲ್ಲಿರುವ ವಾಹನಗಳಲ್ಲಿ ಸಮಸ್ಯೆ ಆಗಿಲ್ಲ ಎಂದು ತಿಳಿಸಿದ್ದಾರೆ ಎಂದು ಹೇಳಿದೆ.
- ಸಾಂಪ್ರದಾಯಿಕ ಪೆಟ್ರೋಲ್‌ಗಿಂತ ಇ-20 ಇಂಧನ ದರವು ಅಗ್ಗವಾಗಿಲ್ಲ. ಏಕೆಂದರೆ, ರೈತರಿಗೆ ಬೆಂಬಲ ನೀಡಲು ನಿಗದಿಪಡಿಸಿದ ಲಾಭದಾಯಕ ಬೆಲೆಗೆ ಎಥೆನಾಲ್ ಖರೀದಿಸಲಾಗುತ್ತದೆ. ಇದರಿಂದ ರೈತರಿಗೆ ನೆರವಾಗಲಿದೆ ಎಂದಿದೆ.
- 'ಇ20 ಇಂಧನದ ಬಗ್ಗೆ ಇರುವ ತಪ್ಪು ಮಾಹಿತಿಗಳನ್ನು ನಾಗರಿಕರು ನಂಬಬೇಡಿ. ವಾಹನ ತಯಾರಿಕಾ ಕಂಪನಿಗಳು, ಪರೀಕ್ಷಾ ಏಜೆನ್ಸಿಗಳು, ತೈಲೋತ್ಪನ್ನ ಮಾರುಕಟ್ಟೆ ಕಂಪನಿಗಳು ದೃಢಪಡಿಸಿದ ಬಳಿಕವೇ ಈ ಇಂಧನವನ್ನು ದೇಶದಾದ್ಯಂತ ಬಳಸಲಾಗುತ್ತಿದೆ' ಎಂದು ಹೇಳಿದೆ.

## ❖ ಪರಿಶೀಲಿಸಿ ನಿರ್ಧಾರ: ಕೇಂದ್ರ

- ಮೊಬೈಲ್ ದೂರವಾಣಿ ಸಂಖ್ಯೆಯನ್ನು ಬಹಿರಂಗಪಡಿಸದೆ, ಬಳಕೆದಾರರ ಹೆಸರು ಮಾತ್ರ ಬಳಸಿ ಸಂದೇಶ ರವಾನಿಸುವ ಅವಕಾಶ (ಯೂಸರ್‌ನೇಮ್) ನೀಡುವುದಾಗಿ ಹೇಳಿರುವ ವಾಟ್ಸ್‌ಆ್ಯಪ್, ಟೆಲಿಗ್ರಾಂನ ಉತ್ತರಗಳನ್ನು ಸ್ವೀಕರಿಸಿದ್ದು, ಪರಿಶೀಲನೆ ನಡೆಸಲಾಗುತ್ತಿದೆ ಎಂದು ಎಲೆಕ್ಟ್ರಾನಿಕ್ಸ್ ಹಾಗೂ ಮಾಹಿತಿ ತಂತ್ರಜ್ಞಾನ ಸಚಿವಾಲಯವು ತಿಳಿಸಿದೆ.
- ಯೂಸರ್‌ನೇಮ್ ಸೌಲಭ್ಯದ ಕುರಿತಂತೆ ಮುಂದಿನ ನಿರ್ಧಾರ ತೆಗೆದುಕೊಳ್ಳುವ ಮುನ್ನ ಅಧಿಕಾರಿಗಳು ವಿಸ್ತೃತವಾಗಿ ಪರಿಶೀಲನೆ ನಡೆಸುವ ಸಾಧ್ಯತೆಯಿದೆ.

Dr Rajkumar IAS/KAS Academy

- ಯೂಸರ್‌ನೇಮ್ ಸೌಲಭ್ಯವು ಬಳಕೆದಾರರಿಗೆ ತಮ್ಮ ಮೊಬೈಲ್ ದೂರವಾಣಿ ಸಂಖ್ಯೆಯನ್ನು ಬಹಿರಂಗಪಡಿಸದೆಯೇ ಇತರರ ಜೊತೆ ಸಂವಹನ ನಡೆಸುವ ಅವಕಾಶ ಕಲ್ಪಿಸುತ್ತದೆ. ಈ ಸೌಲಭ್ಯವು ಆನ್‌ಲೈನ್ ವಂಚನೆ, ಡಿಜಿಟಲ್ ಬಂಧನದ ಹೆಸರಿನಲ್ಲಿ ಬೆದರಿಸಿ ಸುಲಿಗೆ ಕೃತ್ಯ ಎಸಗುವ ಸಾಧ್ಯತೆಯನ್ನು ಹೆಚ್ಚಿಸಬಹುದು ಎಂದು ಕೇಂದ್ರ ಸರ್ಕಾರವು ಆ ಕಂಪನಿಗಳಿಂದ ವಿವರಣೆ ಕೇಳಿತ್ತು.
- ಸರ್ಕಾರದ ನೋಟಿಸ್‌ಗೆ ವಾಟ್ಸ್ ಆ್ಯಪ್ ಗುರುವಾರ ರಾತ್ರಿ ಪ್ರತಿಕ್ರಿಯೆ ನೀಡಿದೆ. ಇದಾದ ಬಳಿಕ ಟೆಲಿಗ್ರಾಂ ತನ್ನ ಉತ್ತರವನ್ನು ನೀಡಿದೆ. ಕಂಪನಿಗಳು ನೀಡಿದ ಪ್ರತಿಕ್ರಿಯೆಯನ್ನು ಸರ್ಕಾರವು ಸಾರ್ವಜನಿಕವಾಗಿ ಬಹಿರಂಗಪಡಿಸಿಲ್ಲ. ಈ ಕುರಿತಂತೆ ಎರಡು ಸಂಸ್ಥೆಗಳು ಕೂಡ ಇದುವರೆಗೂ ಅಧಿಕೃತ ಪ್ರಕಟಣೆಯನ್ನು ನೀಡಿಲ್ಲ.
- ಟೆಲಿಗ್ರಾಂ ಹಾಗೂ ಸಿಗ್ನಲ್ ಆ್ಯಪ್‌ಗಳಲ್ಲಿ ಈ ಸೌಲಭ್ಯವು ಈಗಾಗಲೇ ಲಭ್ಯವಿದೆ. ಈ ಎರಡು ಕಂಪನಿಗಳಿಗೆ ಕೂಡ ಕೇಂದ್ರ ನೋಟಿಸ್ ನೀಡಿದೆ. ವಾಟ್ಸ್‌ಆ್ಯಪ್ ಕಂಪನಿಯು ಭಾರತದಲ್ಲಿ 50 ಕೋಟಿ ಬಳಕೆದಾರರನ್ನು ಹೊಂದಿದೆ. ಟೆಲಿಗ್ರಾಂ ಕಂಪನಿಯ ಗ್ರಾಹಕರ ಸಂಖ್ಯೆ ಬಹಳ ಕಡಿಮೆ ಇದೆ.
- ಈಗಾಗಲೇ ಸಲ್ಲಿಸಿರುವ ಉತ್ತರವನ್ನು ಸರ್ಕಾರವು ಒಪ್ಪುವವರೆಗೂ, ಈ ಸೌಲಭ್ಯವನ್ನು ಭಾರತದಲ್ಲಿ ಮುಕ್ತಗೊಳಿಸಬಾರದು ಸಚಿವಾಲಯವು ಈಗಾಗಲೇ ವಾಟ್ಸ್ ಆ್ಯಪ್‌ಗೆ ನಿರ್ದೇಶನ ನೀಡಿದೆ.

## ಭಾರಿ ದಂಡ ತೆರಬೇಕಾದೀತು: ಮೆಟಾಗೆ ಐರೋಪ್ಯ ಒಕ್ಕೂಟ ಎಚ್ಚರಿಕೆ

# ‘ವ್ಯಸನಕಾರಿ ಫೀಚರ್’ ತೆಗೆದುಹಾಕಲು ಸೂಚನೆ

ಲಂಡನ್ (ಎಪಿ): ‘ಬಳಕೆದಾರರು ವ್ಯಸನಿಗಳಾಗುವ ರೀತಿಯಲ್ಲಿ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಅನ್ನು ವಿನ್ಯಾಸಗೊಳಿಸುವ ಮೂಲಕ ಮೆಟಾ ಕಂಪನಿಯು ಸಾಮಾಜಿಕ ಮಾಧ್ಯಮ ಕಾನೂನನ್ನು ಉಲ್ಲಂಘಿಸಿದ್ದು, ಇದಕ್ಕೆ ಭಾರಿ ದಂಡ ತೆರಬೇಕಾದೀತು’ ಎಂದು ಐರೋಪ್ಯ ಒಕ್ಕೂಟ ಎಚ್ಚರಿಕೆ ನೀಡಿದೆ.

ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ನೀಡಲಾಗಿರುವ ‘ಮಿತಿಯಿಲ್ಲದ ಸ್ಕ್ರೋಲಿಂಗ್’ ಸೇರಿದಂತೆ ಕೆಲವು ‘ವ್ಯಸನಕಾರಿ ಫೀಚರ್’ಗಳನ್ನು ನಿಷ್ಕ್ರಿಯಗೊಳಿಸುವಂತೆಯೂ ಒಕ್ಕೂಟ ಶುಕ್ರವಾರ ಸೂಚಿಸಿದೆ.

ಐರೋಪ್ಯ ಒಕ್ಕೂಟವು



ಡಿಜಿಟಲ್ ಸೇವೆಗಳ ಕಾಯ್ದೆ ಜಾರಿಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿದೆ. ‘ವ್ಯಸನಕಾರಿ ಫೀಚರ್’ಗಳು ಅಪ್ರಾಪ್ತರು ಸೇರಿ ಬಳಕೆದಾರರ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಉಂಟುಮಾಡುವ ಅಪಾಯಗಳನ್ನು ಸರಿಯಾಗಿ ನಿರ್ಣಯಿಸುವಲ್ಲಿ ಮೆಟಾ ವಿಫಲವಾಗಿದೆ ಎಂದಿದೆ.

‘ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಬಳಕೆಯನ್ನು ನಿರ್ವಹಿಸಲು ಸಹಾಯ ಮಾಡುವ ಪರಿಕರಕಗಳು ಮತ್ತು ನಿಯಂತ್ರಣಗಳನ್ನು ಮೆಟಾ ಹೊಂದಿದ್ದರೂ, ಇಂತಹ ಸೌಲಭ್ಯಗಳನ್ನು ಗ್ರಾಹಕರು ಸುಲಭವಾಗಿ ವಜಾಗೊಳಿಸುವಂತೆ ವಿನ್ಯಾಸಗೊಳಿಸಲಾಗಿದೆ. ಹಾಗಾಗಿ, ವಿಡಿಯೊ ಆಟೊ ಪ್ಲೇ, ಮಿತಿಯಿಲ್ಲದ ಸ್ಕ್ರೋಲಿಂಗ್ ಸೇರಿದಂತೆ ಕೆಲವು ಫೀಚರ್ ಅನ್ನು ಇನ್‌ಸ್ಟಾಗ್ರಾಂ ಮತ್ತು ಫೇಸ್‌ಬುಕ್‌ನಿಂದ ತೆಗೆದುಹಾಕಿ, ಮಹತ್ವದ ವಿನ್ಯಾಸ ಬದಲಾವಣೆ ತರಬೇಕು ಎಂದು ಆಯೋಗವು ತನ್ನ ಪ್ರಾಥಮಿಕ ವರದಿಯಲ್ಲಿ ಹೇಳಿದೆ.

ಐರೋಪ್ಯ ಒಕ್ಕೂಟವು ಅಂತಿಮ ವರದಿ ಸಲ್ಲಿಸುವುದಕ್ಕಿಂತ ಮೊದಲು ಈ ಬಗ್ಗೆ ಪ್ರತಿಕ್ರಿಯಿಸಲು ಅಥವಾ ಸಮರ್ಥಿಸಿಕೊಳ್ಳಲು ಮೆಟಾ ಕಂಪನಿಗೆ ಅವಕಾಶ ನೀಡಲಾಗಿದೆ. ಸಾಮಾಜಿಕ ಮಾಧ್ಯಮ ಕಾನೂನಿನ ಉಲ್ಲಂಘನೆ ಆಗಿದ್ದರೆ ಮೆಟಾ ಕಂಪನಿಯು ವಾರ್ಷಿಕ ಆದಾಯದ ಶೇ 6ರಷ್ಟನ್ನು ದಂಡವಾಗಿ ಪಾವತಿಸಬೇಕಾಗುತ್ತದೆ.

ಹದಿಹರೆಯದವರ ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂ ಖಾತೆಗಳ ಮೇಲೆ ಪೋಷಕರ ನಿಯಂತ್ರಣ ಸೇರಿದಂತೆ ಹದಿ-ಹರೆಯದವರ ಸುರಕ್ಷತೆಗಾಗಿ ಕಂಪನಿಯು ಈಗಾಗಲೇ ಕೈಗೊಂಡಿರುವ ಕ್ರಮಗಳನ್ನು ಐರೋಪ್ಯ ಒಕ್ಕೂಟವು ತನ್ನ ಪ್ರಾಥಮಿಕ ಸಂಶೋಧನೆಯಲ್ಲಿ ಗುರುತಿಸಿಲ್ಲ ಎಂದು ಮೆಟಾ ಪ್ರತಿಕ್ರಿಯಿಸಿದೆ.

Publication Date
11/07/2026

Presented by ಪ್ರಜಾವಾಣಿ

## ❖ ನ್ಯೂಜಿಲೆಂಡ್‌ನಲ್ಲಿ ಮೋದಿ

- ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮೂರು ರಾಷ್ಟ್ರಗಳ ಪ್ರವಾಸದ ಕೊನೆಯ ಹಂತವಾಗಿ ಶುಕ್ರವಾರ ನ್ಯೂಜಿಲೆಂಡ್‌ಗೆ ಬಂದಿಳಿದರು.
- ಎರಡು ದಿನ ನ್ಯೂಜಿಲೆಂಡ್ ಪ್ರವಾಸದಲ್ಲಿರುವ ಮೋದಿ, ಅಲ್ಲಿನ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.
- 'ಸ್ವಲ್ಪ ಸಮಯದ ಹಿಂದೆ ಅಕ್ಲೆಂಡ್ ತಲುಪಿದೆ. ವಿಮಾನ ನಿಲ್ದಾಣದಲ್ಲಿ ನೀಡಿದ ಆತ್ಮೀಯ ಸ್ವಾಗತಕ್ಕಾಗಿ ನ್ಯೂಜಿಲೆಂಡ್ ಪ್ರಧಾನಿಗೆ ಅಭಿನಂದನೆಗಳು' ಎಂದು ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.
- ಇತ್ತೀಚೆಗೆ 'ಮಹಾಸಾಗರ್' ನೀತಿ ಘೋಷಿಸಿದ್ದರು. ಈ ಪೂರ್ವದ ರಾಷ್ಟ್ರಗಳ ನಡುವಿನ ಭದ್ರತಾ ಸಹಕಾರವನ್ನು ಬಲಗೊಳಿಸುವ ನಿಟ್ಟಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಹಕಾರವನ್ನು ಬಲಪಡಿಸುವ ಉದ್ದೇಶದೊಂದಿಗೆ ಇಂಡೊನೇಷ್ಯಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಪ್ರವಾಸ ಕೈಗೊಂಡಿದ್ದಾರೆ.

## ❖ ಕೃತಕ ಗರ್ಭಧಾರಣೆ: ನಿಯಮ ಪರಿಶೀಲನೆಗೆ ಸಮಿತಿ ರಚನೆ

- ಕೃತಕ ಗರ್ಭಧಾರಣೆ ಕೇಂದ್ರ (ಐವಿಎಫ್ ಕ್ಲಿನಿಕ್), ಕೃತಕ ಸಂತಾನೋತ್ಪತ್ತಿ ತಂತ್ರಜ್ಞಾನ ಕೇಂದ್ರ, ಅಂಡಾಣು-ವೀರ್ಯಾಣು ಸಂರಕ್ಷಣಾ ಕೇಂದ್ರಗಳನ್ನು ನಿಯಂತ್ರಿಸುವ ಕಾನೂನು, ನಿಯಮಗಳ ಚೌಕಟ್ಟನ್ನು ಪರಿಶೀಲಿಸಲು ಉನ್ನತ ಮಟ್ಟದ ತಜ್ಞರ ಸಮಿತಿಯನ್ನು ರಾಷ್ಟ್ರೀಯ ಮಹಿಳಾ ಆಯೋಗ (ಎನ್‌ಸಿಡಬ್ಲ್ಯು) ರಚಿಸಿದೆ.
- ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆಶಾ ಮೆನನ್ ಸಮಿತಿಯ ಅಧ್ಯಕ್ಷೆಯಾಗಿದ್ದಾರೆ. ಮಾಜಿ ಐಪಿಎಸ್ ಅಧಿಕಾರಿ ಸುಂದರಿ ನಂದಾ, ಎನ್‌ಸಿಡಬ್ಲ್ಯು ಮಾಜಿ ಸದಸ್ಯೆ ಅರ್ಚನಾ ಮಜುಂದಾರ್, ಎನ್‌ಸಿಡಬ್ಲ್ಯು ಸಲಹಾ ಸಮಿತಿ ಸದಸ್ಯ ಡಾ.ಶಿಪ್ರಾರ್ಧ ಮತ್ತು ಹಿರಿಯ ವಕೀಲೆ ಮಹಾಲಕ್ಷ್ಮಿ ಪಾವನಿ, ಸಫ್ದರ್‌ಜಂಗ್ ಆಸ್ಪತ್ರೆಯ ಡಾ. ಸರ್ವೇಶ್ ಟಂಡನ್, ಏಮ್ಸ್ ಸ್ತ್ರೀರೋಗ ತಜ್ಞೆ ಡಾ. ನೀತಾ ಸಿಂಗ್, ಸಮಾಜ ಸೇವಕಿ ನಯನಾ ಸಹಸ್ರಬುದ್ದೆ, ಭಾರತೀಯ ಪ್ರಸೂತಿ ಮತ್ತು ಸ್ತ್ರೀರೋಗ ವೈದ್ಯರ ಸಂಘಗಳ ಒಕ್ಕೂಟದ ಡಾ. ರಜನಿಕಾಂತ್ ಕಾಂಟ್ರಾಕ್ಟರ್ ಮತ್ತು ಎನ್‌ಸಿಡಬ್ಲ್ಯುನ ಹಿರಿಯ ಸಂಯೋಜಕಿ ಕಾಂಚನ್ ಖಟ್ಟರ್ ಸದಸ್ಯರಾಗಿದ್ದಾರೆ.
- ಕೃತಕ ಸಂತಾನೋತ್ಪತ್ತಿ ತಂತ್ರಜ್ಞಾನ (ಎಆರ್‌ಟಿ) ವಲಯದಲ್ಲಿ ಹೆಚ್ಚಿನ ಅಕ್ರಮಗಳು ನಡೆಯುತ್ತಿವೆ. ಮಹಿಳೆಯರ ಸಂತಾನೋತ್ಪತ್ತಿ ಹಕ್ಕುಗಳು, ಘನತೆ ಹಾಗೂ ಸುರಕ್ಷತೆಯನ್ನು ರಕ್ಷಿಸುವ ಉದ್ದೇಶದಿಂದ ಐವಿಎಫ್, ಎಆರ್‌ಟಿ ಹಾಗೂ ಅಂಡಾಣು ಹಾಗೂ ವೀರ್ಯಾಣು ಸಂರಕ್ಷಣಾ ಕೇಂದ್ರಗಳನ್ನು ನಿಯಂತ್ರಿಸುವ ಸಂಬಂಧ ರೂಪಿಸಿರುವ ಕಾನೂನುಗಳ ಸಮಗ್ರ ಪರಿಶೀಲನೆಯನ್ನು ತಜ್ಞರ ಸಮಿತಿಯು ನಡೆಸಲಿದೆ ಎಂದು ಆಯೋಗವು ಪ್ರಕಟಣೆಯಲ್ಲಿ ಗುರುವಾರ ತಿಳಿಸಿದೆ.
- ಎಲ್ಲ ಎಆರ್‌ಟಿ ಕ್ಲಿನಿಕ್‌ಗಳು ಮತ್ತು ಅಂಡಾಣು-ವೀರ್ಯಾಣು ಸಂರಕ್ಷಣಾ ಕೇಂದ್ರಗಳು ರಾಷ್ಟ್ರೀಯ ಎಆರ್‌ಟಿ ಮತ್ತು ಬಾಡಿಗೆ ತಾಯ್ತನದ ನೋಂದಣಿ ಅಡಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಕಡ್ಡಾಯವಾಗಿದೆ. ಅನೇಕ ಕಾನೂನುಗಳಿದ್ದರೂ ಅಕ್ರಮಗಳನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿದೆ.
- ಕೃತಕ ಸಂತಾನೋತ್ಪತ್ತಿ ತಂತ್ರಜ್ಞಾನ (ನಿಯಂತ್ರಣ) ಕಾಯ್ದೆ 2021, ಬಾಡಿಗೆ ತಾಯ್ತನ (ನಿಯಂತ್ರಣ) ಕಾಯ್ದೆ- 2021 ಮತ್ತು 2026ರಲ್ಲಿ ತಿದ್ದುಪಡಿ ತರಲಾದ ನಿಯಮಗಳ ಅನುಷ್ಠಾನವನ್ನು ಸಮಿತಿಯು ಪರಿಶೀಲಿಸಲಿದೆ ಎಂದು ಆಯೋಗ ತಿಳಿಸಿದೆ.

## ❖ ಔಷಧದಲ್ಲಿ ಅಧಿಕ ಈಥೈಲ್ ಆಲೋಹಾಲ್: ಪರವಾನಗಿ ಕಡ್ಡಾಯ

- ಶೇಕಡ 12ಕ್ಕಿಂತ ಹೆಚ್ಚು ಪ್ರಮಾಣದ ಈಥೈಲ್ ಆಲ್ಕೋಹಾಲ್ ಹೊಂದಿರುವ ಔಷಧಗಳಿಗೆ ನೀಡಿರುವ ಪರವಾನಗಿ ವಿನಾಯಿತಿಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ.
- ಈ ಔಷಧಗಳಿಗೂ ಕಡ್ಡಾಯ ಪರವಾನಗಿ ಪಡೆಯಬೇಕು, ವೈದ್ಯರ ಚೀಟಿ ಇಲ್ಲದೇ ಮಾರಾಟ ಮಾಡುವಂತಿಲ್ಲ ಎಂಬ ನಿಯಮಗಳು ಅನ್ವಯವಾಗಲಿವೆ.
- "ಏಲಕ್ಕಿ ಮತ್ತು ಶುಂಠಿ ಟಿಂಚರ್ ಸೇರಿದಂತೆ ಹಲವು ಔಷಧಗಳಿಗೆ 'ಔಷಧ ನಿಯಮ 1945'ರ ಅನುಸೂಚಿ 'ಕೆ' ಅಡಿಯಲ್ಲಿ ಪರವಾನಗಿಯಿಂದ ವಿನಾಯಿತಿ ನೀಡಲಾಗಿತ್ತು. ಈ ಔಷಧಗಳು ಅಧಿಕ ಪ್ರಮಾಣದಲ್ಲಿ ಈಥೈಲ್ ಆಲೋಹಾಲ್ ಅನ್ನು ಹೊಂದಿರುವುದರಿಂದ ಮಾದಕವಸ್ತುಗಳ ರೀತಿಯಲ್ಲಿ ದುರ್ಬಳಕೆಯಾಗುತ್ತಿವೆ' ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.
- 'ಈ ಅಂಶಗಳನ್ನು ಪರಿಗಣಿಸಿ, ಶೇ 12ಕ್ಕಿಂತ ಅಧಿಕ ಈಥೈಲ್ ಅಲೋಹಾಲ್ ಹೊಂದಿರುವ 30 ಮಿ.ಲೀಗಿಂತ ಹೆಚ್ಚು ಪ್ರಮಾಣದ ಔಷಧಗಳಿಗೆ 'ಔಷಧ ಮತ್ತು ಸೌಂದರ್ಯವರ್ಧಕಗಳ ಕಾಯ್ದೆ 1940'ರ ಅಡಿಯಲ್ಲಿ ಪರವಾನಗಿ ಪಡೆಯುವುದನ್ನು ಕಡ್ಡಾಯಗೊಳಿಸಲಾಗಿದೆ' ಎಂದು ಹೇಳಿದೆ.
- 'ಔಷಧ ದುರ್ಬಳಕೆ ಬಗ್ಗೆ ಕೆಲವು ರಾಜ್ಯಗಳಿಂದ ಮಾಹಿತಿ ಪಡೆದು, ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಸಚಿವಾಲಯ ತಿಳಿಸಿದೆ.

Dr Rajkumar IAS/KAS Academy

- ಈ ತಿದ್ದುಪಡಿಯಿಂದಾಗಿ ಶೇ 12ಕ್ಕಿಂತ ಅಧಿಕ ಈಥೈಲ್ ಆಲ್ಕೋಹಾಲ್ ಹೊಂದಿರುವ ಔಷಧಗಳು 'ಔಷಧ ನಿಯಮ 1945'ರ ಅನುಸೂಚಿ 'ಎಚ್1' ಅಡಿಗೆ ಬರುವುದರಿಂದ ನೋಂದಾಯಿತ ವೈದ್ಯರು ಚೀಟಿ ನೀಡಿದರೆ ಮಾತ್ರ ಈ ಔಷಧಗಳ ಮಾರಾಟ ಮಾಡಬಹುದು ಮತ್ತು ಮಾರಾಟಗಾರರು ಅದರ ಬಗ್ಗೆ ದಾಖಲೆಗಳನ್ನು ಇಟ್ಟುಕೊಂಡಿರಬೇಕು.
- 'ಅಕ್ಕೋಹಾಲ್ ಅಂಶ ಹೊಂದಿರುವ ಔಷಧಗಳು ಬೇರೆ ಉದ್ದೇಶಗಳಿಗಾಗಿ ಬಳಕೆಯಾಗುವುದು ಕಡಿಮೆಯಾಗುತ್ತದೆ' ಎಂದು ಸಚಿವಾಲಯ ತಿಳಿಸಿದೆ.

## ❖ 'ಬಹುಪತ್ನಿ ಹೊಂದಿದವರಿಗೆ ಸರ್ಕಾರಿ ಸೌಲಭ್ಯ ಬಂದ್'

- ಬಹುಪತ್ನಿತ್ವ ಪದ್ಧತಿಯನ್ನು ಅನುಸರಿಸುವವರು ರಾಜ್ಯ ಸರ್ಕಾರದ ಯಾವುದೇ ಯೋಜನೆಯ ಸೌಲಭ್ಯ ಪಡೆಯದಂತೆ ನಿರ್ಬಂಧಿಸಲು ಹಾಗೂ ಒಬ್ಬರಿಗಿಂತ ಹೆಚ್ಚು ಮಂದಿಯನ್ನು ಮದುವೆಯಾಗಿರುವ ಸರ್ಕಾರಿ ನೌಕರರನ್ನು ವಜಾಗೊಳಿಸುವುದಾಗಿ ಅಸ್ಸಾಂ ಸರ್ಕಾರ ಪ್ರಕಟಿಸಿದೆ.
- ಹಣಕಾಸು ಸಚಿವ ಜಯಂತ ಮಲ್ಲಾ ಬರುವಾ ಅವರು ತಮ್ಮ ಚೊಚ್ಚಲ ಬಜೆಟ್ ಮಂಡಿಸಿದರು. 'ಬಹುಪತ್ನಿತ್ವ ಅನುಸರಿಸುವ ಪುರುಷರು ಸರ್ಕಾರದ ಕಲ್ಯಾಣ ಕಾರ್ಯಕ್ರಮಗಳ ಸೌಲಭ್ಯ ಪಡೆಯಲು ಅನರ್ಹರು ಎಂಬ ನಿಯಮವನ್ನು ಮಹಿಳಾ ಸಬಲೀಕರಣ ಮತ್ತು ಲಿಂಗ ಸಮಾನತೆಯನ್ನು ಉತ್ತೇಜಿಸುವ ಸಲುವಾಗಿ ಜಾರಿಗೆ ತರಲು ನಿರ್ಧರಿಸಲಾಗಿದೆ' ಎಂದು ಬರುವಾ ಹೇಳಿದರು.
- ಬಹುಪತ್ನಿತ್ವವನ್ನು ಅನುಸರಿಸುವ ಸರ್ಕಾರಿ ನೌಕರರನ್ನು ಕೆಲಸದಿಂದ ವಜಾಗೊಳಿಸಲು, 1964ರ ಅಸ್ಸಾಂ ಸೇವಾ ನಿಯಮಗಳನ್ನು ತಿದ್ದುಪಡಿ ಮಾಡಲಾಗುವುದು ಎಂದು ಬಜೆಟ್ ಮಂಡನೆ ವೇಳೆ ಪ್ರಕಟಿಸಿದರು.
- 'ಕ್ರಿಮಿನಲ್ ಕಾನೂನಿನಡಿಯಲ್ಲಿ ಬರುವ ಅಪರಾಧಗಳಲ್ಲಿ ಶಿಕ್ಷೆಗೊಳಗಾದ ಯಾವುದೇ ವ್ಯಕ್ತಿ ಸರ್ಕಾರದ ಯೋಜನೆಗಳನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಸಮಗ್ರತೆ ಮತ್ತು ಜವಾಬ್ದಾರಿಯುತ ನಾಗರಿಕ ಪ್ರಜ್ಞೆಯನ್ನು ಉತ್ತೇಜಿಸಲು ಈ ಕ್ರಮ ಕೈಗೊಳ್ಳಬೇಕು' ಎಂದೂ ಅವರು ಹೇಳಿದರು.
- 2026-27ರ ಹಣಕಾಸು ವರ್ಷಕ್ಕೆ ₹2,85,084 ಕೋಟಿ ಮೊತ್ತದ ಬಜೆಟ್ ಅನ್ನು ಬರುವಾ ಮಂಡಿಸಿದರು.

## ❖ '2029ಕ್ಕೆ ಕಾರ್ಯವಿಧಾನ ಸಿದ್ಧ

- '2029ರಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆ ಹೊತ್ತಿಗೆ 'ಒಂದು ದೇಶ, ಒಂದು ಚುನಾವಣೆ' ಪ್ರಸ್ತಾವವನ್ನು ಪೂರ್ಣಪ್ರಮಾಣದಲ್ಲಿ ಕಾರ್ಯಗತಗೊಳಿಸುವುದಕ್ಕೆ ಪೂರಕವಾದ ಕಾರ್ಯವಿಧಾನವೊಂದನ್ನು ರೂಪಿಸುವ ನಿಟ್ಟಿನಲ್ಲಿ ಸಮಿತಿಯು ಕೆಲಸ ಮಾಡುತ್ತಿದೆ' ಎಂದು ಈ ಕುರಿತ ಮಸೂದೆಗಳ ಪರಿಶೀಲನೆಗೆ ನೇಮಿಸಿರುವ ಜಂಟಿ ಸಂಸದೀಯ ಸಮಿತಿ ಶುಕ್ರವಾರ ಹೇಳಿದೆ.
- ಪಣಜಿಯಲ್ಲಿ ಆಯೋಜಿಸಿರುವ ಸಮಿತಿಯ ಎರಡು ದಿನಗಳ ಸಭೆ ಸಂದರ್ಭದಲ್ಲಿ ಸಮಿತಿ ಅಧ್ಯಕ್ಷ ಪಿ.ಪಿ.ಚೌಧರಿ ಸುದ್ದಿಗಾರರೊಂದಿಗೆ ಮಾತನಾಡಿದರು.
- 'ಒಂದು ದೇಶ, ಒಂದು ಚುನಾವಣೆ' ಅನುಷ್ಠಾನಕ್ಕೆ ಸಂಬಂಧಿಸಿ ನಾಗರಿಕ ಸಂಘಟನೆಗಳ ಜೊತೆ ಸಮಾಲೋಚನೆ ನಡೆಸಲಾಗಿದ್ದು, ಶೇಕಡ 99ರಷ್ಟು ಭಾಗೀದಾರರು ಈ ಪ್ರಸ್ತಾವಕ್ಕೆ ಬೆಂಬಲ ಸೂಚಿಸಿದ್ದಾರೆ. ಈಗ, ಎಲ್ಲ ರಾಜಕೀಯ ಪಕ್ಷಗಳಿಗೆ ಒಪ್ಪಿಗೆಯಾಗುವಂತಹ ಕಾರ್ಯವಿಧಾನ ರೂಪಿಸುವ ಕುರಿತು ಪ್ರಯತ್ನಗಳು ನಡೆದಿವೆ' ಎಂದು ಚೌಧರಿ ಹೇಳಿದರು.
- 'ಈ ಮಸೂದೆಗಳ ಕುರಿತು ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹಾಗೂ ಸಚಿವ ಸಂಪುಟದ ಸದಸ್ಯರೊಂದಿಗೆ ಸಂವಾದ ನಡೆಸಲಾಯಿತು. ಒಂದು ದೇಶ, ಒಂದು ಚುನಾವಣೆ ಜಾರಿಗೊಳಿಸುವ ವೇಳೆ ಎದುರಾಗುವ ಸವಾಲುಗಳು ಯಾವುವು ಹಾಗೂ ಅವುಗಳನ್ನು ನಿವಾರಿಸುವುದು ಹೇಗೆ?, ಎಲ್ಲರೂ ಒಪ್ಪಿಕೊಳ್ಳುವ ರೀತಿಯಲ್ಲಿ ಅನುಷ್ಠಾನ ಹೇಗಿರಬೇಕು ಎಂಬ ಬಗ್ಗೆ ಚರ್ಚೆ ನಡೆಸಲಾಯಿತು' ಎಂದರು.

- 'ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು ಪ್ರತ್ಯೇಕವಾಗಿ ನಡೆಸುವುದರಿಂದ ಅಂದಾಜು ₹7 ಲಕ್ಷ ಕೋಟಿಯಷ್ಟು ನಷ್ಟ ಉಂಟಾಗಲಿದೆ ಎಂಬ ಅಂದಾಜಿದೆ. ಒಟ್ಟಿಗೇ ಚುನಾವಣೆಗಳನ್ನು ನಡೆಸಿದಲ್ಲಿ, ದೇಶದ ಆರ್ಥಿಕತೆಗೆ ಇನ್ನಷ್ಟು ಬಲ ಸಿಗಲಿದೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ. ಈ ವಿಚಾರವನ್ನು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಉನ್ನತ ಸಮಿತಿಗೆ ತಿಳಿಸಲಾಗಿತ್ತು' ಎಂದು ಚೌಧರಿ ಹೇಳಿದರು.

## ❖ ಎಲ್ ನಿನೊ ಪ್ರಭಾವ: ಮುಂದಿನ ವರ್ಷ 'ಭೂತಾಯಿ' ಅಭಾವ

- ಎಲ್ ನಿನೊ ಪ್ರಭಾವ ಈ ಬಾರಿ ದೇಶದ ನೈರುತ್ಯ ಮುಂಗಾರಿನ ಮೇಲೆ ಮಾತ್ರವಲ್ಲ, ಮೀನುಗಾರಿಕೆ ವಲಯಕ್ಕೂ ದೊಡ್ಡ ಹೊಡೆತ ನೀಡುವ ಸಾಧ್ಯತೆಗಳಿವೆ.
- 'ಎಲ್ ನಿನೊದಿಂದ ಸಮುದ್ರದ ಮೇಲ್ಮೊನಲ್ಲಿ ತಾಪಮಾನ ಹೆಚ್ಚಾಗುತ್ತದೆ, ಶಾಖದ ಅಲೆಗಳು ಸೃಷ್ಟಿಯಾಗು ತ್ತವೆ. ಪರಿಣಾಮ, ಸಮುದ್ರದ ಪರಿಸರ ವ್ಯವಸ್ಥೆಯೇ ಬದಲಾಗುತ್ತದೆ. ಪ್ರಮುಖ ವಾಗಿ, ಹಿಂದೂ ಮಹಾಸಾಗರ ದಲ್ಲಿ ಹೇರಳವಾಗಿ ಲಭಿಸುವ ಭೂತಾಯಿ ಮೀನಿನ ಜೈವಿಕ ಚಕ್ರದ ಮೇಲೆ ಇದು ಗಂಭೀರ ಪರಿಣಾಮ ಬೀರುತ್ತದೆ. ಮುಂದಿನ ವರ್ಷ ಈ ಮೀನುಗಳ ಲಭ್ಯತೆಯು ಭಾರಿ ಪ್ರಮಾಣದಲ್ಲಿ ಕುಸಿತ ಆಗಲಿದೆ' ಎಂದು ಕೇಂದ್ರ ಸಮುದ್ರ ಮೀನುಗಾರಿಕೆ ಸಂಶೋಧನಾ ಸಂಸ್ಥೆ (ಐಸಿಎಆರ್-ಸಿಎಂಎಫ್‌ಆರ್‌ಐ) ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ.
- 'ಅಕ್ಟೋಬರ್-ಡಿಸೆಂಬರ್ ಅವಧಿಯಲ್ಲಿ ಎಲ್‌ನೊ ತೀವ್ರಗೊಳ್ಳುವ ಸಾಧ್ಯತೆ ಇದೆ. ಹಿಂದೂ ಮಹಾಸಾಗರದಲ್ಲಿ ಮೀನುಗಳ ಜೈವಿಕ ಚಕ್ರದ ಮೇಲೆ ಇದು ಹೇಗೆ ಪರಿಣಾಮ ಬೀರುತ್ತದೆ ಎನ್ನುವುದು 2027ರ ಏಪ್ರಿಲ್-ಮೇನಲ್ಲಿ ತಿಳಿಯುತ್ತದೆ' ಎಂದು ಸಿಎಂಎಫ್‌ಆರ್‌ಐ ನಿರ್ದೇಶಕ ಗ್ರಿನ್ಸನ್ ಜಾರ್ಜ್ ಹೇಳಿದ್ದಾರೆ.
- 'ಈ ಬಾರಿಯ ಮೀನುಗಾರಿಕಾ ಋತುವಿನಲ್ಲಿ ಭೂತಾಯಿ ಮೀನಿನ ಇಳುವರಿ ಸಾಕಷ್ಟಿದೆ. ಆದರೆ, ಮುಂದಿನ ವರ್ಷ ಭೂತಾಯಿ ಸೇರಿ ಸಣ್ಣ ಪ್ರಭೇದದ ಮೀನುಗಳ ಉತ್ಪಾದನೆ ಎಲ್‌ನೊದಿಂದ ಕುಸಿಯ ಲಿದೆ. ಸಾಗರ ತಾಪಮಾನ ಏರಿಕೆಯಿಂದ ಹೆಚ್ಚು ತೊಂದರೆ ಆಗುವ ಮೀನಿನ ಪ್ರಬೇಧ ಭೂತಾಯಿ' ಎಂದಿದ್ದಾರೆ.
- **<u>ಹವಳದ ದಿಬ್ಬಗಳಿಗೂ ಧಕ್ಕೆ:</u>** 'ಎಲ್ ನಿನೊ ಪರಿಣಾಮವು ಸಮುದ್ರದ ಹವಳದ ದಿಬ್ಬಗಳ ಮೇಲೆ ವಾಸಿಸುವ ಜೀವಿಗಳ ಮೇಲೂ ಆಗುತ್ತದೆ. ಈ ಜೀವಿಗಳ ನೈಸರ್ಗಿಕ ಆವಾಸ ಸ್ಥಾನಕ್ಕೆ ಧಕ್ಕೆ ಆಗುತ್ತದೆ' ಎಂದೂ ಸಿಎಂಎಫ್‌ಆರ್‌ಐ ವಿಜ್ಞಾನಿಗಳು ಹೇಳಿದ್ದಾರೆ.

## ❖ ಅಥ್ಲೆಟಿಕ್ಸ್: ಭಾರತಕ್ಕೆ ಮೂರು ಕಂಚು

- ಭಾರತದ ಮಧ್ಯಮ ಅಂತರದ ಓಟಗಾರರು ಏಷ್ಯನ್ 23 ವರ್ಷದೊಳಗಿ ನವರ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 3 ಕಂಚಿನ ಪದಕ ಜಯಿಸಿದರು.
- ಚೊಚ್ಚಲ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಶುಕ್ರವಾರ ಭಾರತದ ಶಕೀಲ್ ಅವರು ಪುರುಷರ 800 ಮೀ ಓಟದಲ್ಲಿ (1ನಿ,48.78ಸೆ) ಕಂಚಿನ ಪದಕ ಪಡೆದರು. ಇದೇ ವಿಭಾಗದಲ್ಲಿ ಬಿ. ವಿನೋದಕುಮಾರ್ ನಾಲ್ಕನೇ ಸ್ಥಾನ ಪಡೆದರು.
- 200 ಮೀ ಓಟದಲ್ಲಿ ಅಭಯ್ ಸಿಂಗ್ (20.96ಸೆ) ಅವರು ಕಂಚು ಪಡೆದರು. ಚೀನಾದ ಯುವೇನ್ ಯುವಾಂಗ್ (20.43ಸೆ) ಮತ್ತು ಜಪಾನ್‌ನ ಕೊಟಾ ಉಯಮತ್ತು (20.587) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗಳಿಸಿದರು.
- ಮಹಿಳೆಯರ ವಿಭಾಗದ 800 ಮೀ ಓಟದಲ್ಲಿ ಭೂಮೇಶ್ವರಿ ದೇವಿ (2ನಿ,10.20ಸೆ) ಮೂರನೇ ಸ್ಥಾನ ಗಳಿಸಿದರು.

--------------------------------------------ಶುಭವಂದನೆಗಳು--------------------------------------------